ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 15 ಬುಧವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 29 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಮೈಸೂರು ಮಿತ್ರ ಬುಧವಾರ 15 ಮೇ 2024

ಕೇರ್ಗಳ್ಳಿ ಕೆರೆ ಅಭಿವೃದ್ಧಿಗೆ ಅತೀ ಶೀಘ್ರ ಕ್ರಮ

ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಿದ ಮುಡಾ ಅಧ್ಯಕ್ಷ ಕೆ.ಮರೀಗೌಡರ ಭರವಸೆ

'ಮಿತ್ರ'ನ ವರದಿ ಫಲಶೃತಿ



ಮೈಸೂರಿನ ಕೇರ್ಗಳ್ಳಿ ಬಳಿಯ ಕುಂಬಾರಕಟ್ಟೆಗೆ ಮುಡಾ ಅಧ್ಯಕ್ಷ ಕೆ.ಮರೀಗೌಡ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದರು.

ಮೈಸೂರು, ಮೇ 14(ಆರ್‌ಕೆ)–ಕಳೆದ ನಾಲ್ಕು ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆಯಿಂದ ತುಂಬಿ ಹರಿಯುತ್ತಿರುವ ಕೇರ್ಗಳ್ಳಿ ಬಳಿಯ ಕುಂಬಾರ ಕಟ್ಟೆಗೆ ಕಾಯಕಲ್ಪ ಕಲ್ಪಿಸುವುದಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧ್ಯಕ್ಷರಾದ ಕೆ.ಮರೀಗೌಡರು ತಿಳಿಸಿದ್ದಾರೆ.

'ಕೇರ್ಗಳ್ಳಿ ಬಳಿಯ ಕೆರೆಗೆ ಬೇಕಾಗಿದೆ ತುರ್ತು ಕಾಯಕಲ್ಪ' ಶೀರ್ಷಿಕೆಯಡಿ ಇಂದಿನ 'ಮೈಸೂರು ಮಿತ್ರ'ದಲ್ಲಿ ಸಚಿತ್ರ ವರದಿ ಪ್ರಕಟವಾಗುತ್ತಿದ್ದಂತೆಯೇ ಎಚ್ಚೆತ್ತ ಮರೀಗೌಡರು, ಮುಡಾ, ಬೋಗಾದಿ ಪಟ್ಟಣ ಪಂಚಾಯ್ತಿ ಅಧಿಕಾರಿಗಳೊಂದಿಗೆ ತೆರಳಿ ಕೆರೆಯ ದುಸ್ಥಿತಿ ಹಾಗೂ ನೀರು ಸುತ್ತಲಿನ ವಸತಿ ಬಡಾವಣೆಗಳಿಗೆ ನುಗ್ಗಿ ಉಂಟಾಗುತ್ತಿರುವ ಹಾನಿಯನ್ನು ವೀಕ್ಷಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಕುಂಬಾರ ಕಟ್ಟೆ ತುಂಬಿ ಕೋಡಿ ಬಿದ್ದು ನೀರು ಅಲ್ಲಿನ ಬಡಾವಣೆಗಳ ಮನೆಗಳಿಗೆ ನುಗ್ಗಿ ಅವಾಂತರವಾಗುತ್ತಿರುವುದರಿಂದ ಮುಡಾ ಮತ್ತು ಬೋಗಾದಿ ಪಟ್ಟಣ ಪಂಚಾಯ್ತಿ ವತಿಯಿಂದ ಅಭಿವೃದ್ಧಿ ಕಾಮಗಾರಿ ಕೈಗೊಂಡು ಕೆರೆಗೆ ಕಾಯಕಲ್ಪ ಮಾಡುವುದಾಗಿ ಮರೀಗೌಡರು ತಿಳಿಸಿದರು.


ಎಸ್‌ಬಿಎಂ ಲೇಔಟ್‌ನಿಂದ ದೀಪಾ ನಗರದ ಮೂಲಕ ಪೂರ್ಣಯ್ಯ ನಾಲೆಯಿಂದ ಮಳೆ ನೀರು ನಿಂಗರಾಜನ ಕಟ್ಟೆ, ನ್ಯಾಯಾಂಗ ಬಡಾವಣೆ ಮಾರ್ಗವಾಗಿ ಕೇರ್ಗಳ್ಳಿ ಬಳಿಯ ಕುಂಬಾರ ಕಟ್ಟೆಗೆ ಬಂದು ಸೇರುತ್ತಿತ್ತಾದರೂ, ರಾಜಕಾಲುವೆ ಮುಚ್ಚಿ ಕಟ್ಟಡ ನಿರ್ಮಿಸಿರುವುದರಿಂದ ಬಿದ್ದ ಮಳೆ ನೀರು ಎಲ್ಲೆಂದರಲ್ಲಿ ಹಳ್ಳದ ಕಡೆಗೆ ಹರಿದು ಅವಾಂತರ ಉಂಟಾಗಿದೆ ಎಂಬುದನ್ನು ಅಧಿಕಾರಿಗಳು ಮುಡಾ ಅಧ್ಯಕ್ಷರಿಗೆ ತಿಳಿಸಿದರು.

ಅದರಿಂದ ಒಡೆದು ಹೋಗಿರುವ ಕೆರೆ ಏರಿ ಅಭಿವೃದ್ಧಿಪಡಿಸಿ ಬೃಹತ್ ತೂಬಿನ ಮೂಲಕ ಹೆಚ್ಚುವರಿ ನೀರು ಚರಂಡಿ ಮೂಲಕ ವ್ಯವಸ್ಥಿತವಾಗಿ ಹರಿದು ಹೋಗುವಂತೆ ಮಾಡಬೇಕು. ಕೆರೆ ಏರಿಗೆ ಸುರಕ್ಷತೆಗಾಗಿ ಸ್ಟೀಲ್ ಬ್ಯಾರಿಕೇಡ್ ನಿರ್ಮಿಸುವಂತೆ ಬೋಗಾದಿ ಪಟ್ಟಣ ಪಂಚಾಯ್ತಿ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ಕೇರ್ಗಳ್ಳಿಯಿಂದ ರಾಜರಾಜೇಶ್ವರಿ ನಗರ, ಸೋಮನಾಥ ನಗರ ಮೂಲಕ ಸ್ಟಾರ್ಮ್ ವಾಟರ್ ಡ್ರೇನ್ ನಿರ್ಮಿಸುವ ಕಾಮಗಾರಿಗೆ 24 ಕೋಟಿ ರೂ. ವೆಚ್ಚದ ಡಿಪಿಆರ್‌ನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಚುನಾವಣಾ ನೀತಿ ಸಂಹಿತೆ ಮುಗಿದ ಬಳಿಕ ಅಗತ್ಯ ಕ್ರಮ ವಹಿಸುವುದಾಗಿಯೂ ಮರೀಗೌಡರು ಸ್ಥಳೀಯ ನಿವಾಸಿಗಳಿಗೆ ತಿಳಿಸಿದರು.

ಬೋಗಾದಿ ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಕುರಿಯಾ ಕೋಸ್, ಮುಡಾ ಎಕ್ಸಿಕ್ಯೂಟಿವ್ ಇಂಜಿನಿಯರ್ ನಾಗೇಶ್, ಮುಖಂಡರುಗಳಾದ ನಾಗಣ್ಣ, ಹುಚ್ಚಪ್ಪ, ಬಸವೇಗೌಡ, ರವಿ, ಪ್ರಕಾಶ್ ಇತರರು ಉಪಸ್ಥಿತರಿದ್ದರು.

ಮೇ 19ರಂದು ಪ್ರಕಾಶಕ ಟಿ.ಎಸ್.ಛಾಯಾಪತಿ ಸಂಸ್ಕೃತಿ ಪುರಸ್ಕಾರ; ಪುಸ್ತಕಗಳ ಲೋಕಾರ್ಪಣೆ



ಟಿ.ಎಸ್.ಛಾಯಾಪತಿ

ಮೈಸೂರು, ಮೇ 14– ಬೆಂಗಳೂರಿನ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು ಕನ್ನಡ ಸಾಹಿತ್ಯ ಕಲಾಕೂಟ ಮತ್ತು ಹೊಯ್ಸಳ ಕನ್ನಡ ಸಂಘದ ಸಂಯುಕ್ತ ಆಶ್ರಯದಲ್ಲಿ ಮೇ 19ರಂದು ಬೆಳಗ್ಗೆ 10.30 ಗಂಟೆಗೆ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಪ್ರಕಾಶಕ ಟಿ.ಎಸ್.ಛಾಯಾಪತಿ ಸಂಸ್ಕೃತಿ ಪುರಸ್ಕಾರ–2024, ಪುಸ್ತಕಗಳ ಲೋಕಾರ್ಪಣಾ ಸಮಾರಂಭ ಏರ್ಪಡಿಸಲಾಗಿದೆ.

ರಾಜಶೇಖರ್ ಮೆಡಿಕಲ್ ಫೌಂಡೇಷನ್ ನಿರ್ದೇಶಕ ಡಾ.ಹೆಚ್.ಬಿ.ರಾಜಶೇಖರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಪ್ರಶಸ್ತಿ ಪ್ರದಾನ ಮಾಡುವರು.

ಸಂಸ್ಕೃತಿ ಚಿಂತಕ ಪ್ರೊ.ಎಂ.ಕೃಷ್ಣೇಗೌಡ ಕೃತಿಗಳ ಲೋಕಾರ್ಪಣೆ ಮಾಡುವರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಪ್ರಶಸ್ತಿ ಸ್ವೀಕರಿಸುವರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಪುಸ್ತಕಗಳ ಕುರಿತು ಮಾತನಾಡುವರು.

ಮುಖ್ಯ ಅತಿಥಿಗಳಾಗಿ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಭಾಗವಹಿಸುವರು. ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್ ಪ್ರಾಸ್ತಾವಿಕ ನುಡಿಗಳನ್ನಾಡುವರು.

ಬೆಂಗಳೂರಿನ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಪ್ರಕಾಶಕರಾದ ಶ್ರೀಮತಿ ಪ್ರತಿಭಾ ಛಾಯಾಪತಿ, ಹೊಯ್ಸಳ ಕನ್ನಡ ಸಂಘದ ಕಾರ್ಯದರ್ಶಿ ರಂಗನಾಥ್ ಮೈಸೂರು ಉಪಸ್ಥಿತರಿರುವರು.



ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸಿ ಎಸ್.ಎಂ.ಕೃಷ್ಣ ಅಭಿಮಾನಿಗಳ ಬಳಗ ವತಿಯಿಂದ ಮೈಸೂರಿನ ವಿಜಯನಗರದಲ್ಲಿರುವ ಯೋಗ ನರಸಿಂಹಸ್ವಾಮಿ ದೇವಸ್ಥಾನದಲ್ಲಿ, ದೇವಸ್ಥಾನದ ಸಂಸ್ಥಾಪಕ ಅಧ್ಯಕ್ಷರಾದ ಡಾ.ಭಾಷ್ಯಂ ಸ್ವಾಮೀಜಿ ನೇತೃತ್ವದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಈ ವೇಳೆ ದೇವಸ್ಥಾನದ ಆಡಳಿತ ಮಂಡಳಿಯ ಶ್ರೀನಿವಾಸನ್, ಅರ್ಚಕರಾದ ಶೇಷಾದ್ರಿ, ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಎಪಿಎನ್ ಪ್ರಾಪರ್ಟೀಸ್ ಮಾಲೀಕರಾದ ಎ.ಪಿ.ನಾಗೇಶ್, ರಮೇಶ್ ಹುಣಸೂರ್, ಈರೇಗೌಡ, ಕುಂಬಾರಕೊಪ್ಪಲು ಕೃಷ್ಣಪ್ಪ, ವಿಕ್ರಾಂತ್ ಮಾಧವಕೃಷ್ಣ, ವಿಕ್ರಾಂತ್ ರಾಮಚಂದ್ರ, ಡಿ.ದೇವೇಗೌಡ, ಮಾದೇವ್ ಇನ್ನಿತರರು ಉಪಸ್ಥಿತರಿದ್ದರು.

ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಹರಿ ವಿದ್ಯಾಲಯಕ್ಕೆ ಶೇ.100 ಫಲಿತಾಂಶ


ಕುಶ್ವಂತ್ ಸಿಂಗ್


ಪ್ರಸನ್ನ


ಅದ್ವಿಕ


ಆಯುಷ್


ಶರತ್

ಮೈಸೂರು, ಮೇ 14– ಮೈಸೂರಿನ ಬೋಗಾದಿಯಲ್ಲಿರುವ ಹರಿ ವಿದ್ಯಾಲಯದ ವಿದ್ಯಾರ್ಥಿಗಳು 2023–24ರ ಶೈಕ್ಷಣಿಕ ವರ್ಷದ 10ನೇ ತರಗತಿ ಸಿಬಿಎಸ್‌ಇ ವಾರ್ಷಿಕ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶವನ್ನು ಪಡೆದಿದ್ದಾರೆ. ಉನ್ನತ ಶ್ರೇಣಿಯಲ್ಲಿ ಐದು ವಿದ್ಯಾರ್ಥಿಗಳು ಮತ್ತು ಪ್ರಥಮ ದರ್ಜೆಯಲ್ಲಿ 14 ವಿದ್ಯಾರ್ಥಿಗಳು ತೇರ್ಗಡೆಯಾಗಿರುತ್ತಾರೆ. ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಆಡಳಿತ ಮಂಡಳಿ, ಪಾಂಶುಪಾಲರು ಹಾಗೂ ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.

ಸ್ನೇಹಜೀವಿ ಚಾಲಕರ ಸಂಘದ ವಾರ್ಷಿಕೋತ್ಸವ



ಮೈಸೂರಿನ ಸ್ನೇಹಜೀವಿ ಚಾಲಕರ ಟ್ರೇಡ್ ಯೂನಿಯನ್ ಮೊದಲನೇ ವರ್ಷದ ವಾರ್ಷಿಕೋತ್ಸವದ ಸಮಾರಂಭವನ್ನು ಜಂಬೂದೇವ ಆಸ್ಪತ್ರೆ ರಸ್ತೆಯಲ್ಲಿರುವ ಮೈಸೂರು ಕೇಂದ್ರ ಕಚೇರಿ ಮುಂಭಾಗದಲ್ಲಿ ನೂರಾರು ಚಾಲಕರೊಂದಿಗೆ ಆಚರಿಸಲಾಯಿತು. ಶಾಸಕ ಕೆ.ಹರೀಶ್‌ಗೌಡ, ಚಿತ್ರನಟ, ನಿರ್ಮಾಪಕ ಗಂಡಸಿ ಸದಾನಂದಸ್ವಾಮಿ, ಮೈಸೂರು ಜಿಲ್ಲಾಧ್ಯಕ್ಷ ಸೋಮಶೇಖರ್, ರಾಜ್ಯಾಧ್ಯಕ್ಷ ಸಂತೋಷ್ ಕುಮಾರ್, ರಾಜ್ಯ ಪ್ರಧಾನ ಕಾರ್ಯದರ್ಶಿ ರಾಜು ಕನ್ನಡಿಗ, ಮಾರ್ಗದರ್ಶಕ ರಮೇಶ್‌ಗೌಡ, ಹೆಬ್ಬಾಳ್ ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿಕುಮಾರ್ ಮಂಚೇಗೌಡನಕೊಪ್ಪಲು, ವಡಿವೇಲು, ಲಿಂಗರಾಜು, ಜಗದೀಶ್, ಯಶೋಧ ಇದ್ದರು.

ಆನ್‌ಲೈನ್ ವಂಚನೆ: 1000 ಸ್ಕೈಪ್ ಖಾತೆಗಳ ನಿಷ್ಕ್ರಿಯಗೊಳಿಸಿದ ಗೃಹ ಇಲಾಖೆ

ನವದೆಹಲಿ: ಆನ್‌ಲೈನ್ ವಂಚನೆಗೆ ಗಡಿಯಾಚೆ ಕೂತು ಬಳಸುತ್ತಿದ್ದ ಒಂದು ಸಾವಿರ ಸ್ಕೈಪ್ ಐಡಿಗಳನ್ನು ಸರ್ಕಾರ ನಿಷ್ಕ್ರಿಯಗೊಳಿಸಿದೆ.

ಆನ್‌ಲೈನ್ ವಂಚನೆ, ಬೆದರಿಕೆ, ಡಿಜಿಟಲ್ ಅರೆಸ್ಟ್‌ನಂತಹ ಕೃತ್ಯಗಳಿಗೆ ಇವುಗಳನ್ನು ಬಳಸಲಾಗುತ್ತಿತ್ತು ಈ ಕುರಿತಂತೆ ಗ್ರಾಹಕರಿಗೆ ಎಚ್ಚರಿಕೆ ಸಂದೇಶ ಕಳುಹಿಸಿರುವ ಸೈಬರ್ ಕ್ರೈಂ ಸಮನ್ವಯ ಕೇಂದ್ರ, ಸೈಬರ್ ಅಪರಾಧಗಳನ್ನು ನಿಯಂತ್ರಿಸಲು ಕೇಂದ್ರ ಗೃಹ ಇಲಾಖೆ ಸಹಯೋಗದಲ್ಲಿ ತಂಡವನ್ನು ರಚಿಸಲಾಗಿದೆ. ಜಾರಿ ನಿರ್ದೇಶನಾಲಯ ಸೇರಿದಂತೆ ವಿವಿಧ ತನಿಖಾ ಸಂಸ್ಥೆಗಳ ಅಧಿಕಾರಿಗಳ ಸೋಗು ಹಾಕಿಕೊಂಡು ಬೆದರಿಕೆ ಒಡ್ಡುತ್ತಿರುವ ಹಾಗೂ ವಂಚಿಸುತ್ತಿರುವ ಕುರಿತು ಸಾಕಷ್ಟು ದೂರುಗಳು ಸಲ್ಲಿಕೆಯಾಗಿವೆ. ಇಂಥ ವಂಚನೆಗೆ ಬಹಳಷ್ಟು ಜನರು ಸಾಕಷ್ಟು ಹಣ ಕಳೆದುಕೊಂಡಿದ್ದಾರೆ. ಈ ಕರೆಗಳು ಬಂದ ಸಂದರ್ಭದಲ್ಲಿ 1930ಗೆ ಕರೆ ಮಾಡಿ ಅಥವಾ www.cybercrime.gov.in ಇಮೇಲ್ ಕಳುಹಿಸಿ ಎಂದಿದೆ.

ಗಡಿಯಾಚೆ ಇರುವ ವಂಚಕರು ಇಂಥ ಜಾಲವನ್ನು ಹೆಣೆಯುತ್ತಿದ್ದಾರೆ. ಇದೊಂದು ಸಂಘಟಿತ ಆನ್‌ಲೈನ್ ಆರ್ಥಿಕ ಅಪರಾಧವಾಗಿದೆ. ಇದನ್ನು ಪಾರ್ಸಲ್ ಸ್ಕ್ಯಾಮ್ ಎಂದೂ ಕರೆಯಲಾಗುತ್ತದೆ. ಇದರಲ್ಲಿ ಗ್ರಾಹಕರೊಬ್ಬರಿಗೆ ಪಾರ್ಸಲ್ ಕಳುಹಿಸಲಾಗುತ್ತದೆ. ಅದರಲ್ಲಿ ಮಾದಕ ದ್ರವ್ಯ, ನಕಲಿ ನೋಟುಗಳು, ನಕಲಿ ಪಾಸ್‌ಪೋರ್ಟ್‌ನಂತ ವಸ್ತುಗಳು ಇರುತ್ತವೆ. ಇದನ್ನು ಸ್ವೀಕರಿಸಿದ ಬೆನ್ನಲ್ಲೇ, ಅಧಿಕಾರಿಗಳ ಸೋಗಿನಲ್ಲಿ ಕೆಲವರು ಕರೆ ಮಾಡಿ ಬೆದರಿಸಿ ಹಣದ ಬೇಡಿಕೆ ಇಡುತ್ತಾರೆ ಎಂದಿದೆ.

ಮತ್ತೊಂದು ಇಂಥದ್ದೇ ಪ್ರಕರಣದಲ್ಲಿ, ವ್ಯಕ್ತಿಯೊಬ್ಬರ ಸಂಬಂಧಿಕರೊಬ್ಬರು ಕೆಲ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಪೊಲೀಸ್ ವಶದಲ್ಲಿದ್ದಾರೆ ಎಂದೋ ಅಥವಾ ಅಪಘಾತಕ್ಕೀಡಾಗಿದ್ದಾರೆ ಎಂದೋ ಕರೆ ಮಾಡಿ ವಂಚಿಸುವ ದೊಡ್ಡ ಜಾಲವೇ ಇದೆ ಎಂದು ತಿಳಿಸಲಾಗಿದೆ.

ಪ್ರತ್ಯೇಕ ಪ್ರಕರಣದಲ್ಲಿ ಇಬ್ಬರು ನಾಪತ್ತೆ


ಎಲ್.ಪಿ.ಸತೀಶ್


ಎನ್.ನಾಗರಾಜು

ಮೈಸೂರು, ಮೇ 14– ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರು ನಾಪತ್ತೆಯಾಗಿರುವ ಬಗ್ಗೆ ಮೈಸೂರಿನ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಮ್ಮ ಪತಿ ಎಲ್.ಪಿ. ಸತೀಶ್ (60) ಕಳೆದ ಏ.28ರಂದು ಮನೆಯಿಂದ ಹೋಂಡಾ ಆಕ್ಟೀವಾ ವಾಹನದಲ್ಲಿ ಹೊರಗೆ ಹೋದವರು ಕಾಣೆಯಾಗಿದ್ದಾರೆ ಎಂದು ಪತ್ನಿ ಸುಧಾ ದೂರು ನೀಡಿದ್ದಾರೆ. ಮತ್ತೊಂದು ಪ್ರಕರಣದಲ್ಲಿ ರಾಮಕೃಷ್ಣನಗರದ ನಿವಾಸಿ ಎನ್.ನಾಗರಾಜು (81) ಎಂಬುವರು ಕಳೆದ ಮಾ.22ರಿಂದ ಕಾಣೆಯಾಗಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ದೂ. 0821–2418324 ಸಂಪರ್ಕಿಸಲು ಕುವೆಂಪುನಗರ ಠಾಣೆ ಪೊಲೀಸರು ಕೋರಿದ್ದಾರೆ.

ಮೈಸೂರಿನ ಮರೆಯಲಾಗದ ಮಹನೀಯರು ಶ್ರೀಕಂಠೇಶ್ವರ ಅಯ್ಯರ್ ಪುಸ್ತಕ ಬಿಡುಗಡೆ



ಮೈಸೂರಿನ ಶೃಂಗೇರಿ ಶಂಕರಮಠದಲ್ಲಿ ಶ್ರೀ ಶಂಕರ ಜಯಂತಿಯಂದು ಎನ್.ವಿ. ರಮೇಶ್ ಅವರು ಬರೆದಿರುವ ಮೈಸೂರಿನ ಮರೆಯಲಾಗದ ಮಹನೀಯರು ಶ್ರೀಕಂಠೇಶ್ವರ ಅಯ್ಯರ್ ಪುಸ್ತಕವನ್ನು ಲೋಕಾರ್ಪಣೆ ಮಾಡಲಾಯಿತು.

ಮೈಸೂರು, ಮೇ 14–ಮೈಸೂರಿನ ಶೃಂಗೇರಿ ಶಂಕರಮಠದಲ್ಲಿ ಶಂಕರ ಜಯಂತಿಯಂದು ಎನ್.ವಿ.ರಮೇಶ್ ಅವರು ಬರೆದಿರುವ ಮೈಸೂರಿನ ಮರೆಯಲಾಗದ ಮಹನೀಯರು ಶ್ರೀಕಂಠೇಶ್ವರ ಅಯ್ಯರ್ ಪುಸ್ತಕವನ್ನು ಲೋಕಾರ್ಪಣೆ ಮಾಡಲಾಯಿತು.

ಈ ವೇಳೆ ಲೇಖಕ ರಮೇಶ್ ಮಾತನಾಡಿ, ಮೈಸೂರಿನಲ್ಲಿರುವ ಹಾರ್ಡ್ವಿಕ್ ಹೈಸ್ಕೂಲ್ ಬಳಿ ಇರುವ ವೃತ್ತಕ್ಕೆ ಶ್ರೀಕಂಠೇಶ್ವರ ಅಯ್ಯರ್ ವೃತ್ತ ಎಂಬ ಹೆಸರಿದೆ. ಅಯ್ಯರ್, ಮೈಸೂರು ಅರಮನೆಯ ಇತಿಹಾಸದಲ್ಲಿ ಜಿಲ್ಲಾಧಿಕಾರಿಯಾಗಿ, ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಆಗಿ, ಮೈಸೂರು ಅರಮನೆಯ ದಿವಾನರಿಗೆ ಕಾರ್ಯದರ್ಶಿಯಾಗಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸಲಹೆಗಾರರಾಗಿ, ಮೈಸೂರಿನ ಹಲವಾರು ರಸ್ತೆಗಳು, ಬಡಾವಣೆಗಳು, ಉದ್ಯಾನಗಳಿಗೆ ನಾಮಕರಣ ಸೂಚಿಸಿದವರು. ಶೃಂಗೇರಿ ಶಂಕರ ಮಠದ ಶ್ರೀ ಚಂದ್ರಶೇಖರ ಭಾರತಿ ಮಹಾಸ್ವಾಮಿಗಳ ಆದೇಶದಂತೆ ಮೈಸೂರಿನಲ್ಲಿ ಅಭಿನವ ಶಂಕರಾಲಯಕ್ಕೆ ಸ್ಥಳ ಒದಗಿಸಿ, ಅಲ್ಲಿ ಕಟ್ಟಡ ಕಟ್ಟಿ, 1923ರಿಂದ 1936ರವರೆಗೆ ಶಂಕರಮಠದ ಸೇವೆಯಲ್ಲಿ ಇದ್ದವರು. ಇವರು, ನನ್ನ ತಾಯಿ ಗಿರಿಜಾ ವಾಮನ್ ಅವರ ತಾತ ಹಾಗೂ ನನ್ನ ಮುತ್ತಾತ. 40 ವರ್ಷಗಳಿಂದ ದಾಖಲೆಗಳನ್ನು ಸಂಗ್ರಹಿಸಿ ನನ್ನ ಮುತ್ತಾತನವರ ಬಗ್ಗೆ ಮೈಸೂರಿನ ಮರೆಯಲಾಗದ ಮಹನೀಯರು ಶ್ರೀಕಂಠೇಶ್ವರ ಅಯ್ಯರ್ ಪುಸ್ತಕವನ್ನು ಬರೆದಿದ್ದೇನೆ ಎಂದು ವಿವರಿಸಿದರು.

ಹಿರಿಯ ಸಂಸ್ಕೃತ ವಿದ್ವಾಂಸ ಹೆಚ್.ವಿ. ನಾಗರಾಜರಾವ್ ಮಾತನಾಡಿ, ಬಹಳ ಹಿಂದೆ ಮೈಸೂರಿನ ಸಂಸ್ಕೃತ ಪಾಠಶಾಲೆಗೆ ಶ್ರೀಕಂಠೇಶ್ವರ ಅಯ್ಯರ್ ಅವರು ಕೊಟ್ಟ 25,000 ರೂ.ಗಳ ಮುದುವಟ್ಟಿನಲ್ಲಿ ಸಂಸ್ಕೃತ ಪಾಠಶಾಲೆ ಅಂದಿನ ನೂರಾರು ವಿದ್ಯಾರ್ಥಿಗಳು ಓದಲು ಸಾಧ್ಯವಾಯಿತು–ಆ ಧನ್ಯ ವಿದ್ಯಾರ್ಥಿಗಳಲ್ಲಿ ತಾವೂ ಒಬ್ಬರು ಎಂದು ಸ್ಮರಿಸಿದರು.

ಮೈಸೂರಿನ ಶೃಂಗೇರಿ ಶಂಕರ ಮಠದ ಧರ್ಮಾಧಿಕಾರಿ ಹೆಚ್.ರಾಮಚಂದ್ರ ಮಾತನಾಡಿ, ಶ್ರೀಕಂಠೇಶ್ವರ ಅಯ್ಯರ್, ಹಿಂದಿನ ಶೃಂಗೇರಿ ಮಠಾಧೀಶರ ಆದೇಶದಂತೆ ಮೈಸೂರಿನಲ್ಲಿ ಶಂಕರ ಮಠ ಕಟ್ಟಿದುದನ್ನೂ, 1962ರಲ್ಲಿ ಅವರ ಭಾವಚಿತ್ರ ಅನಾವರಣವಾದುದನ್ನೂ ವಿವರಿಸಿದರು. ಲತಾ ಮೋಹನ್, ಪುಸ್ತಕದ ಐತಿಹಾಸಿಕ ಮಹತ್ವದ ಬಗ್ಗೆ ಮಾತನಾಡಿದರು.

ಒಕ್ಕಲಿಗ ವಧು–ವರರ ಸಮಾವೇಶ

ಮೈಸೂರು, ಮೇ 14– ಮೈಸೂರಿನ ನೇಗಿಲಯೋಗಿ ಮರುಳೇಶ್ವರ ಒಕ್ಕಲಿಗ ವಧು–ವರರ ವೇದಿಕೆಯ ವತಿಯಿಂದ ಒಕ್ಕಲಿಗ ವಧು–ವರರ ಸಮಾವೇಶವನ್ನು ಮೇ 19ರಂದು ಬೆಳಗ್ಗೆ 9.30 ಗಂಟೆಗೆ ನೇಗಿಲಯೋಗಿ ಮರುಳೇಶ್ವರ ಸೇವಾ ಭವನದಲ್ಲಿ ಆಯೋಜಿಸಲಾಗಿದೆ. ಆಸಕ್ತ ವಧು–ವರರು ಮತ್ತು ಪೋಷಕರು ಸಮಾವೇಶದ ಪ್ರಯೋಜನವನ್ನು ಪಡೆದುಕೊಳ್ಳಲು ಕೋರಲಾಗಿದೆ. ಈಗಾಗಲೇ ನಮ್ಮ ವೇದಿಕೆಯಲ್ಲಿ ನೋಂದಾಯಿಸಿಕೊಂಡಿರುವವರು ಹಾಗೂ ಸ್ಥಳದಲ್ಲೇ ನೋಂದಾಯಿಸಿಕೊಳ್ಳಲು ಇಚ್ಛಿಸುವವರು ಸಮಾವೇಶದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿಯನ್ನು ಭೇಟಿ ಮಾಡುವುದು ಅಥವಾ ದೂರವಾಣಿ 94834 53005, 9900629393, 9113201893, 9448392488 ಸಂಪರ್ಕಿಸಬಹುದು.

ಭಾರತದ ಸಂಸ್ಕೃತಿ ಅರಿಯಲು ಸಂಸ್ಕೃತ ಭಾಷೆ ಅವಶ್ಯಕ



ಮೈಸೂರು, ಮೇ 14– ಭಾರತದ ಸಂಸ್ಕೃತಿಯನ್ನು ಅರಿಯಲು ಸಂಸ್ಕೃತ ಭಾಷೆ ಅವಶ್ಯಕವಾಗಿದೆ ಎಂದು ವಿದ್ವಾಂಸರಾದ ಹೆಚ್.ಎಲ್. ಚಿದಂಬರ ಭಟ್ಟ ಹೇಳಿದರು.

ಮೈಸೂರಿನ ಜೆಎಸ್‌ಎಸ್ ಸಂಸ್ಕೃತ ಪಾಠಶಾಲೆಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಆಶ್ರಯದಲ್ಲಿ 10 ದಿನಗಳ ಕಾಲ ಆಯೋಜಿಸಿರುವ ಸಂಸ್ಕೃತ ಸಂಭಾಷಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಸಂಸ್ಕೃತ ಭಾಷೆಯು ಅನುಪಮ ಭಾಷೆಯಾಗಿದೆ. ಈ ಭಾಷೆಯಲ್ಲಿರುವ ಶಬ್ದ ಭಂಡಾರವು ಎಲ್ಲ ಭಾಷೆಗಳಿಗೂ ಪೂರಕವಾಗಿದೆ ಎಂದು ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಶಿವಕುಮಾರ ಸ್ವಾಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕ ಬಿ.ಎ.ರಾಜಶೇಖರ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.05.2024 ಬುಧವಾರ, ಮಳೆ ನಕ್ಷತ್ರ: ಕೃತ್ತಿಕ 11.05.2024ರಿಂದ 24.05.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್, ಇಟ್ಟಿಗೆಗೂಡು :** 100ನೇ ವರ್ಷದ ಮೈಸೂರು ಕರಗ ಶತಮಾನೋತ್ಸವ, ಬೆಳಗ್ಗೆ 6ಕ್ಕೆ ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮ ದೇವಿಯರಿಗೆ ವಿಶೇಷ ಪೂಜೆ, ಅಭಿಷೇಕ, ಬೆಳಗ್ಗೆ 8.30ಕ್ಕೆ ಶ್ರೀ ನಾಗಲಕ್ಷ್ಮಿ ದೇವಸ್ಥಾನದಿಂದ ಹಾಲಿನ ಕೊಡ ಮೆರವಣಿಗೆ, ಬೆಳಗ್ಗೆ 11 ಗಂಟೆಗೆ ಮೆರವಣಿಗೆ, ಮಧ್ಯಾಹ್ನ 1 ಗಂಟೆಗೆ ಮಡಿವಾಳರ ಮನೆಯಲ್ಲಿ ಪ್ರಥಮ ಪೂಜೆ, ಸಂಜೆ 4ಕ್ಕೆ ಮೆರವಣಿಗೆ ಪ್ರಾರಂಭವಾಗಿ ರಾತ್ರಿ ವೇಳೆಗೆ ದೇವಾಲಯ ತಲುಪುವುದು, ನಂತರ ಮಹಾಮಂಗಳಾರತಿ.

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್:** ಬ್ರಹ್ಮ ರಥೋತ್ಸವ, ಬೆಳಗ್ಗೆ 9ಕ್ಕೆ ಉತ್ಸವ, ಧ್ವಜಾರೋಹಣ, ಕುಂಭಾರಾಧನಪೂರ್ವಕ ಯಾಗಶಾಲಾ ಪ್ರವೇಶ, ಸಂಜೆ 6ಕ್ಕೆ ಚತುಸ್ಥಾನಾರ್ಚನಪೂರ್ವಕ ವಿಷ್ಣು ಸಹಸ್ರನಾಮ, ಚಂದ್ರ ಮಂಡಲೋತ್ಸವ, ಸ್ಥಳ: ಟ್ರಸ್ಟ್ ಆವರಣ, ಗೋಕುಲಂ 3ನೇ ಹಂತ.

■ **ಆರ್ಟ್ ಆಫ್ ಲಿವಿಂಗ್ :** ಮೇಧಾ ಯೋಗ ಶಿಬಿರ, ಸ್ಥಳ: ಆರ್ಟ್ ಆಫ್ ಲಿವಿಂಗ್ ಆಶ್ರಮ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮಕ್ಕಳ ಕಣ್ಣಿನ ದೃಷ್ಟಿ ಸಮಸ್ಯೆಗೆ ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್:** ಆರ್ಟಿಸ್ಟ್ರಿ ಚಿನ್ನಾಭರಣ ಪ್ರದರ್ಶನ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂ, ಬಿ.ಎನ್.ರಸ್ತೆ, ಬೆಳಗ್ಗೆ 10 ಗಂಟೆಯಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ

■ **ನಿವೃತ್ತ ಶುಶ್ರೂಷಾಧಿಕಾರಿಗಳ ಸಂಘ :** ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ, ಮುಖ್ಯ ಅತಿಥಿಗಳು : ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ನರ್ಸಿಂಗ್ ಕಾಲೇಜು ಮಾಜಿ ಡೀನ್ ಶ್ರೀಮತಿ ಕೆ. ಯಶೋಧ, ಅತಿಥಿಗಳು : ಡಾ. ಎ.ಈ. ಪರಮೇಶ್, ಅಧ್ಯಕ್ಷತೆ : ನಿವೃತ್ತ ಶುಶ್ರೂಷಾಧಿಕಾರಿಗಳ ಸಂಘದ ಅಧ್ಯಕ್ಷ ಕೆ.ಕೆ. ಕುಶಾಲಪ್ಪ, ಉಪಸ್ಥಿತರು : ಡಾ. ರಂಗಸ್ವಾಮಿ, ಶ್ರೀಮತಿ ಎನ್.ಕೆ. ರುಕ್ಮಿಣಿ, ಶ್ರೀಮತಿ ಆಲೀಸ್ ಫ್ಲಾರೆನ್ಸ್ ಕ್ರಾಸ್ಟ, ಸ್ಥಳ: ಶ್ರೀ ಗುರು ರೆಸಿಡೆನ್ಸಿ ಹೋಟೆಲ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10 ರಿಂದ.

■ **ಸರ್ಕಾರಿ ಪ್ರಥಮ ದರ್ಜೆ ಕಾಲೇಜು :** ವಿವಿಧ ವೇದಿಕೆಗಳ ಸಮಾರೋಪ ಸಮಾರಂಭ, ಸಮಾರೋಪ ನುಡಿ : ಸಂಸ್ಕೃತಿ ಚಿಂತಕ ಶಂಕರ್ ದೇವನೂರು, ಮುಖ್ಯ ಅತಿಥಿಗಳು : ಮೈಸೂರು ಮಹಾನಗರ ಪಾಲಿಕೆ ಆಯುಕ್ತೆ ಡಾ. ಮಧು ಪಟೇಲ್ ಎನ್.ಎನ್., ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲರಾದ ಪ್ರೊ. ಎನ್. ಮಾಯಾದೇವಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು :** ಅಮ್ಮನ ಮಡಿಲು ಕಾರ್ಯಕ್ರಮ, ವಿಶ್ವ ತಾಯಂದಿರ ದಿನಾಚರಣೆ ಪ್ರಯುಕ್ತ ಜೀವದಾತೆಗೆ ಸನ್ಮಾನ, ಚುಟುಕು ಕವಿಗೋಷ್ಠಿ, ಮುಕ್ತಕ ಕವಿಗೋಷ್ಠಿ, ಗೀತ ನಮನ, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸನ್ಮಾನಿಸುವವರು: ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಸಂಸ್ಕೃತ ವಿದ್ವಾಂಸರಾದ ಡಾ. ಕೆ. ಲೀಲಾಪ್ರಕಾಶ್, ಅಭಿರುಚಿ ಬಳಗದ ಅಧ್ಯಕ್ಷ ಎನ್.ವಿ. ರಮೇಶ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ಭಾರತೀಯ ಸ್ಟೇಟ್ ಬ್ಯಾಂಕ್, ಮಾರ್ಗದರ್ಶಿ ಬ್ಯಾಂಕ್ :** ಮೈಸೂರು ಜಿಲ್ಲಾ ಬ್ಯಾಂಕುಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ, ಸ್ಥಳ: ಮುಖ್ಯ ಸಭಾಂಗಣ, ಜಿಲ್ಲಾ ಪಂಚಾಯತ್, ಮಧ್ಯಾಹ್ನ 12ಕ್ಕೆ.

■ **ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ವಿಭಾಗೀಯ ಪತ್ರಾಗಾರ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಲ್ಲಹಳ್ಳಿ :** ಎರಡು ದಿನಗಳ ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಪ್ರೊ. ಬಿ.ಎಂ. ನಾಗರಾಜು, ಮುಖ್ಯ ಅತಿಥಿಗಳು : ವಿಭಾಗೀಯ ಪತ್ರಾಗಾರ ಕಚೇರಿ ಹಿರಿಯ ಸಹಾಯಕ ನಿರ್ದೇಶಕ ಹೆಚ್.ಎಲ್. ಮಂಜುನಾಥ್, ಉಪಸ್ಥಿತರು : ಡಾ. ಜಯಕುಮಾರ್, ಕೆ. ಚಿನ್ನಸ್ವಾಮಿ, ಡಾ. ಎಂ.ಎನ್. ಲೋಕೇಶ್, ಎನ್. ಚಂದ್ರಶೇಖರ್, ಸ್ಥಳ: ಕಾಲೇಜು ಸಭಾಂಗಣ, ಹುಲ್ಲಹಳ್ಳಿ, ಮಧ್ಯಾಹ್ನ 3.15 ರಿಂದ.

■ **ಯುನೈಟೆಡ್ ಸ್ಪೋರ್ಟ್ಸ್ ಕ್ಲಬ್, ರೋಟರಿ ಶಾಲೆ, ದಟ್ಟಗಳ್ಳಿ, ದೈಹಿಕ ಶಿಕ್ಷಣ ಶಿಕ್ಷಕರ ಅಕಾಡೆಮಿ ಟ್ರಸ್ಟ್ :** ವಯೋಮಿತಿಯ ಬಾಲಕ, ಬಾಲಕಿಯರಿಗೆ ಉಚಿತ ಖೋ ಖೋ ತರಬೇತಿ ಶಿಬಿರದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಕರ್ನಾಟಕ ರಾಜ್ಯ ಖೋ ಖೋ ಸಂಸ್ಥೆ ಕಾರ್ಯದರ್ಶಿ ಆರ್. ಮಲ್ಲಿಕಾರ್ಜುನಯ್ಯ, ಮುಖ್ಯ ಅತಿಥಿಗಳು : ಎನ್.ಆರ್. ಗ್ರೂಪ್ ಛೇರ್ಮನ್ ಆರ್. ಗುರು, ಅತಿಥಿಗಳು : ರೋಟರಿ ಮೈಸೂರು ಅಧ್ಯಕ್ಷ ಎನ್. ಪ್ರವೀಣ್, ರೋಟರಿ ಮೈಸೂರು ಶಾಲೆ ಛೇರ್ಮನ್ ಹೆಚ್.ಎಸ್. ವೆಂಕಟೇಶ್, ದೈಹಿಕ ಶಿಕ್ಷಣ ಶಿಕ್ಷಕರ ಅಕಾಡೆಮಿ ಟ್ರಸ್ಟ್ ಖಜಾಂಚಿ ಎಂ.ಎಸ್. ವೆಂಕಟರಾವ್, ಅಧ್ಯಕ್ಷತೆ : ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ವಿಶ್ರಾಂತ ನಿರ್ದೇಶಕ ಡಾ. ಸಿ. ಕೃಷ್ಣ, ಸ್ಥಳ: ರೋಟರಿ ಮೈಸೂರು ಶಾಲೆ, ದಟ್ಟಗಳ್ಳಿ (ಕನಕದಾಸನಗರ), ಸಂಜೆ 4.30ಕ್ಕೆ.

■ **ಪ್ರಜ್ಞಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್, ಡಾ. ನಾ.ಸು. ಹರ್ಡಿಕರ್ ಭಾರತ ಸೇವಾದಳ ಪ್ರೌಢಶಾಲೆ:** ಚಿಣ್ಣರ ಚಿತ್ತಾರ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ: ಸಾಹಿತಿ ಬನ್ನೂರು ರಾಜು, ಅಧ್ಯಕ್ಷತೆ: ಪ್ರಜ್ಞಾ ಟ್ರಸ್ಟ್ ಅಧ್ಯಕ್ಷ ಸೋಸಲೆ ಸಿದ್ದರಾಜು, ಮುಖ್ಯ ಅತಿಥಿಗಳು: ರಂಗ ನಿರ್ದೇಶಕ ಮೈಮ್ ರಮೇಶ್, ಭಾರತ ಸೇವಾ ದಳ ಜಿಲ್ಲಾ ಸಮಿತಿ ಅಧ್ಯಕ್ಷ ನರಸಿಂಹಸ್ವಾಮಿ, ಬೀರಿಹುಂಡಿ ಬಸವಣ್ಣ, ಶೇಷಾಚಲ, ಈರಯ್ಯ, ಸ್ಥಳ: ನಾಗ ಮಾರ್ಷಲ್ ಆರ್ಟ್ಸ್ ಅಕಾಡೆಮಿ, ಕನಕದಾಸನಗರ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬದುಕು ಬದಲಿಸಿದ ಶೋಧ–ಬಾನುಲಿ ಸರಣಿ, ಪ್ರಸ್ತುತಿ–ಎನ್.ಎನ್. ಸುರೇಂದ್ರನಾಥ್ ಸಾತ್ವಿಕ್, 6.40 ಮತ್ತು ಸಂಜೆ 5.45ಕ್ಕೆ "ನಾನು ನ. ರತ್ನ" ಬಾನುಲಿ ಸರಣಿ, ಪರಿಕಲ್ಪನೆ–ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ವೃತ್ತಿ ಮಾರ್ಗದರ್ಶನ–'ಭೂಗೋಳ ಶಾಸ್ತ್ರ ಅಂದರೆ ಜಿಯಾಗ್ರಫಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು' ಕುರಿತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಭೂಗೋಳ ಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರಾದ ಡಾ.ಚಂದ್ರಶೇಖರ್ ವೈ.ಪಿ. ಅವರೊಂದಿಗೆ ಮಾತುಕತೆ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಪಂಡಿತ್ ವಿಶ್ವಮೋಹನ್ ಭಟ್–ಮೋಹನ ವೀಣಾವಾದನ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು–ಶಾಂತಲಾ ವಟ್ಟಮ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಕೆ.ಎಸ್.ಹೇರಂಭ ಮತ್ತು ಕೆ.ಎಸ್.ಹೇಮಂತ್–ಕೊಳಲು, ವಿ.ಶ್ರೀಕಾಂತ್–ಪಿಟೀಲು, 4.00 ಮಹಿಳಾರಂಗ 'ಸ್ತ್ರೀ ಚೇತನ–ಹೀಗಿದೆ ನೋಡಿ ನಮ್ ಜೋಡಿ' ದಿನಪತ್ರಿಕೆಯ ಹಿರಿಯ ಸಹಾಯಕ ವ್ಯವಸ್ಥಾಪಕರು ರಾಜೇಶ್ ಬಸವಣ್ಣ ಮಡದಿ ಸರಿತಾ ಅವರೊಂದಿಗೆ ಮಾತುಕತೆ. ಪ್ರಸ್ತುತಿ–ಕೆ.ಬಿ.ಮೀನಾ, 4.45 ಹಿಂದಿ ಪಾಠ, 6.50 ಕೃಷಿರಂಗ–ಸಾವಯವ ಸಂಪದ ಸಾವಯವ ಕೃಷಿ ಬದುಕಿನ ಸಮಗ್ರ ಚಿತ್ರಣ ಕುರಿತ ಬಾನುಲಿ ಸರಣಿ–ಎರೆಹುಳು ಸಾಕಾಣಿಕೆ ಕುರಿತು ಸಂವಾದ. ಭಾಗವಹಿಸುತ್ತಾರೆ–ಮಳವಳ್ಳಿ ತಾಲೂಕು ಮಿಕ್ಕೆರೆ ಗ್ರಾಮದ ಕೃಷಿಕ ದಂಪತಿ ಎಂ.ಇ. ಶಿವಣ್ಣ ಹಾಗೂ ಎಂ.ಸಿ. ಹೇಮಲತಾ, ಸಂದರ್ಶಕರು– ಎನ್. ಕೇಶವಮೂರ್ತಿ, 8.00 ಕ್ಷಿತಿಜ–ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಪಂ. ಬಸವರಾಜ ರಾಜಗುರು – ಹಾಡುಗಾರಿಕೆ, 10.00 ಜನಪದಗೀತೆ, 10.30 ಸವಿನೆನಪು



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮೇ 15 ಬುಧವಾರ 2024

ಸಂಪುಟ: 45 | ಸಂಚಿಕೆ: 29 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ರೇವಣ್ಣ ಬಿಡುಗಡೆ

●ನೇರವಾಗಿ ತಂದೆ–ತಾಯಿ ಬಳಿ ತೆರಳಿದ ರೇವಣ್ಣ ●ಅಲ್ಲಿ ಕುಮಾರಸ್ವಾಮಿ ಸೇರಿದಂತೆ ಇಡೀ ಕುಟುಂಬ ಸಮಾಲೋಚನೆ

ಬೆಂಗಳೂರು, ಮೇ14(ಕೆಎಂಶಿ)– ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆಯ ಅಪಹರಣ ಆರೋಪದ ಮೇಲೆ ಜೈಲು ಪಾಲಾಗಿದ್ದ ಮಾಜಿ ಸಚಿವ ಎಚ್.ಡಿ. ರೇವಣ್ಣ ಇಂದು ಪರಪ್ಪನ ಅಗ್ರಹಾರ ಜೈಲಿಂದ ಬಿಡುಗಡೆಯಾಗಿದ್ದಾರೆ.

ಅಪಹರಣದ ಆರೋಪದ ಮೇಲೆ ಎಸ್‌ಐಟಿ ಅಧಿಕಾರಿಗಳು ರೇವಣ್ಣ ಅವರನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದರು.

ಜನಪ್ರತಿನಿಧಿಗಳ ನ್ಯಾಯಾಲಯ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದ–ಪ್ರತಿವಾದ ಆಲಿಸಿ, ನಿನ್ನೆ ಷರತ್ತು ಬದ್ಧ ಜಾಮೀನು ನೀಡಿತ್ತು. ನ್ಯಾಯಾಲಯದ ತೀರ್ಪು ನಿನ್ನೆ ಸಂಜೆ ಪ್ರಕಟಗೊಂಡಿದ್ದರಿಂದ ನಿಯಮಾವಳಿ ರೀತಿ ರಾತ್ರಿ ಅವರನ್ನು ಬಿಡುಗಡೆ ಮಾಡಲು ಸಾಧ್ಯವಾಗಿರಲಿಲ್ಲ.



ರೇವಣ್ಣ ಪರ ವಕೀಲರು ಇಂದು ಜೈಲು ಅಧಿಕಾರಿಗಳಿಗೆ ನ್ಯಾಯಾಲಯದ ಮಾಹಿತಿ ಮತ್ತು ದಾಖಲೆಗಳನ್ನು ನೀಡಿದ ನಂತರ ಮಧ್ಯಾಹ್ನದ ನಂತರ ಬಿಡುಗಡೆ ಮಾಡಲಾಯಿತು. ಬಿಡುಗಡೆಗೊಂಡ ರೇವಣ್ಣ ಅವರನ್ನು ಜೆಡಿಎಸ್ ಕಾರ್ಯಕರ್ತರು ಮತ್ತು ಅಭಿಮಾನಿಗಳು ಜೈಲಿನ ಹೊರಗೆ ಭಾರಿ ಸಂಭ್ರಮದಿಂದ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಕಾರ್ಯಕರ್ತರನ್ನು ನಿಯಂತ್ರಿಸಲು ಪೊಲೀಸರು ಲಘು ಲಾಠಿ ಪ್ರಹಾರ ಮಾಡಬೇಕಾಯಿತು.

ಜೈಲಿನಿಂದ ಬಿಡುಗಡೆಗೊಂಡ ರೇವಣ್ಣ ಯಾರ ಬಳಿಯೂ ಮಾತನಾಡದೆ, ನೇರವಾಗಿ ತಮ್ಮ ಸಹೋದರಿ ಮನೆಯಲ್ಲಿ ನೆಲೆಸಿರುವ ತಮ್ಮ ತಂದೆ ದೇವೇಗೌಡರು ಹಾಗೂ ತಾಯಿ ಚನ್ನಮ್ಮ ಅವರನ್ನು ಭೇಟಿ ಮಾಡಲು ತೆರಳಿದರು. ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹಾಗೂ ಇಡೀ ಕುಟುಂಬ ರೇವಣ್ಣ ಅವರನ್ನು ಬರ ಮಾಡಿಕೊಂಡಿದ್ದಲ್ಲದೆ, ಪರಸ್ಪರ ಸಮಾಲೋಚನೆ ನಡೆಸಿದರು.

ಕಳೆದ ಮೇ 4ರಂದು ದೇವೇಗೌಡರ ನಿವಾಸದಲ್ಲಿಯೇ ಎಸ್‌ಐಟಿ ಅಧಿಕಾರಿಗಳಿಂದ ರೇವಣ್ಣ ಬಂಧನಕ್ಕೊಳಗಾಗಿದ್ದರು.

ಚಾಮುಂಡೇಶ್ವರಿ ದರ್ಶನ ಪಡೆದ ರೇವಣ್ಣ

ನ್ಯಾಯಾಂಗ, ಚಾಮುಂಡೇಶ್ವರಿ ನಂಬಿದ್ದೇನೆ



ಮಾಜಿ ಸಚಿವ ಹೆಚ್.ಡಿ.ರೇವಣ್ಣ ಮಂಗಳವಾರ ರಾತ್ರಿ ಚಾಮುಂಡಿಬೆಟ್ಟಕ್ಕೆ ಆಗಮಿಸಿ, ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಮಾಜಿ ಸಚಿವರಾದ ಸಾ.ರಾ.ಮಹೇಶ್, ಸಿ.ಎಸ್.ಪುಟ್ಟರಾಜು, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಮೇಯರ್ ಸಂದೇಶ್ ಸ್ವಾಮಿ ಮತ್ತಿತರರು ಅವರ ಜೊತೆಯಲ್ಲಿದ್ದರು.

ಮೈಸೂರು, ಮೇ 14(ಎಸ್‌ಬಿಡಿ)– ಜೈಲಿನಿಂದ ಬಿಡುಗಡೆಯಾದ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಮಂಗಳವಾರ ರಾತ್ರಿ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಆಗಮಿಸಿ, ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಪುತ್ರ ಪ್ರಜ್ವಲ್ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆ ಅಪಹರಣದ ಆರೋಪದಡಿ 6 ದಿನ ಬೆಂಗಳೂರು ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದು ಜಾಮೀನಿನ ಮೇಲೆ ಬಿಡುಗಡೆಯಾದ ರೇವಣ್ಣ ಪಕ್ಷದ ಮುಖಂಡರೊಂದಿಗೆ ರಾತ್ರಿ ಸುಮಾರು 8.35ರ ವೇಳೆಗೆ ಚಾಮುಂಡಿಬೆಟ್ಟಕ್ಕೆ ಆಗಮಿಸಿ ತಾಯಿಯ ದರ್ಶನ ಪಡೆದರು.

ಗರ್ಭಗುಡಿ ಬಳಿ ನಿಂತು ತಾಯಿ ಚಾಮುಂಡೇಶ್ವರಿಗೆ ನಮಸ್ಕರಿಸಿ, ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಕುಟುಂಬದ ಎಲ್ಲಾ ಸದಸ್ಯರ ● 9ನೇ ಪುಟಕ್ಕೆ

ಸಿಎಂ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ: ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ

ಮರಿತಿಬ್ಬೇಗೌಡ ನಾಮಪತ್ರ ಸಲ್ಲಿಕೆ

ನೈರುತ್ಯ ಪದವೀಧರ ಕ್ಷೇತ್ರದ ಅಭ್ಯರ್ಥಿ ಕೆ.ಕೆ.ಮಂಜುನಾಥ್ ಸಹ ಉಮೇದುವಾರಿಕೆ ಮಂಡನೆ




ಮೈಸೂರಿನ ಹುಣಸೂರು ರಸ್ತೆಯ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಮಂಗಳವಾರ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ನೈರುತ್ಯ ಪದವೀಧರರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಕೆ.ಮಂಜುನಾಥ್, ಚುನಾವಣಾಧಿಕಾರಿಗಳೂ ಆದ ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್ ಅವರಿಗೆ ನಾಮಪತ್ರ ಸಲ್ಲಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕೃಷಿ ಸಚಿವ ಚೆಲುವರಾಯಸ್ವಾಮಿ, ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಮೇ14(ಬಿಎಲ್‌ಯು)– ಮೈಸೂರಿನ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಇಂದು ನಾಮಪತ್ರ ಸಲ್ಲಿಸಿದರು. ಮೈಸೂರಿನ ಹುಣಸೂರು ರಸ್ತೆಯ ಪ್ರಾದೇಶಿಕ ಆಯುಕ್ತರ ಕಚೇರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಆಗಮಿಸಿದ ಮರಿತಿಬ್ಬೇಗೌಡ ಚುನಾವಣಾಧಿಕಾರಿಗಳೂ ಆದ ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ. ಪ್ರಕಾಶ್ ಅವರಿಗೆ ಉಮೇದುವಾರಿಕೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕೃಷಿ ಸಚಿವ ಚೆಲುವರಾಯಸ್ವಾಮಿ, ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹಾಜರಿದ್ದರು.

ನೈರುತ್ಯ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಕೆ.ಮಂಜುನಾಥ್ ಕೂಡ ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ. ಪ್ರಕಾಶ್ ಅವರಿಗೆ ಇದೇ ವೇಳೆ ನಾಮಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಕೂಡ ಸಿದ್ದರಾಮಯ್ಯ ● 9ನೇ ಪುಟಕ್ಕೆ

ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಕೆ.ವಿವೇಕಾನಂದ ಎನ್‌ಡಿಎ ಅಭ್ಯರ್ಥಿ?

ಮೈಸೂರು, ಮೇ 14(ಎಸ್‌ಬಿಡಿ)–



ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಕೆ.ವಿವೇಕಾನಂದ ಹೆಸರು ಅಂತಿಮಗೊಂಡಿದ್ದು, ಅಧಿಕೃತ ಘೋಷಣೆಯಷ್ಟೇ ಆಗಬೇಕಿದೆ. ಜಂಗಲ್ ಲಾಡ್ಜ್ ಅಂಡ್ ರೆಸಾರ್ಟ್‌ನ ಮಾಜಿ ಅಧ್ಯಕ್ಷರೂ ಆದ ಉದ್ಯಮಿ ಕೆ. ವಿವೇಕಾನಂದ, ದಶಕಗಳಿಂದ ಜೆಡಿಎಸ್ ಪಕ್ಷದ ಕಾರ್ಯಕರ್ತರಾಗಿ ಸಂಘಟನೆಗೆ ಶ್ರಮಿಸಿದ್ದಾರೆ. ಇವರು ಮೂಲತಃ ಮಂಡ್ಯ ಜಿಲ್ಲೆಯವರು. ● 9ನೇ ಪುಟಕ್ಕೆ

ಇಂದು ಬೆಂಗಳೂರಿಗೆ ಪ್ರಜ್ವಲ್?



ಬೆಂಗಳೂರು, ಮೇ 14– ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ, ಹಾಸನ ಸಂಸದ ಪ್ರಜ್ವಲ್ ರೇವಣ್ಣ ನಾಳೆ (ಬುಧವಾರ) ಸ್ವದೇಶಕ್ಕೆ ವಾಪಸ್ಸಾಗುವ ಎಲ್ಲಾ ಸಾಧ್ಯತೆಗಳಿವೆ. ಇದಕ್ಕೆ ಪುಷ್ಟಿ ನೀಡುವಂತೆ ಹರಿಯಾಣದ ಅಕಲ್ ಟ್ರಾವೆಲ್ಸ್‌ನಿಂದ ಪ್ರಜ್ವಲ್‌ಗೆ ವಿಮಾನ ಟಿಕೆಟ್ ಬುಕ್ ಆಗಿದೆ ಎಂದು ಹೇಳಲಾಗುತ್ತಿದ್ದು, ಮೂಲಗಳ ಪ್ರಕಾರ ನಾಳೆ ಮಧ್ಯಾಹ್ನ (ಭಾರತೀಯ ಕಾಲಮಾನ 12.05ಕ್ಕೆ) ಜರ್ಮನಿಯ ಮ್ಯೂನಿಚ್‌ನಿಂದ ಟೇಕಾಫ್ ಆಗುವ ವಿಮಾನ ರಾತ್ರಿ 12.30ಕ್ಕೆ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಲಿದೆ. ಈಗಾಗಲೇ ಪ್ರಜ್ವಲ್‌ಗೆ ವಿಚಾರಣೆಗೆ ಹಾಜರಾಗುವಂತೆ ಎಸ್‌ಐಟಿ ಲುಕ್‌ಔಟ್ ನೋಟಿಸ್ ಹಾಗೂ ಬ್ಲೂ ಕಾರ್ನರ್ ನೋಟಿಸ್‌ಗಳನ್ನು ಜಾರಿ ಮಾಡಿದೆ. ಈ ಮಧ್ಯೆ ಇವರ ತಂದೆ ಹೆಚ್.ಡಿ.ರೇವಣ್ಣ, ಪ್ರಕರಣದ ಸಂತ್ರಸ್ತೆ ● 9ನೇ ಪುಟಕ್ಕೆ









ನಕ್ಕರೆ ಅದೇ ಸ್ವರ್ಗ

ಹೋಟೆಲ್ ಸಪ್ಲೆಯರ್: "ಏನು ಕೊಡಲಿ ಸಾರ್?"
ಈತ : "ಚಕ್ಕುಲಿ ತಗೊಂಡು ಬಾ."
ಹೋಟೆಲ್ ಸಪ್ಲೆಯರ್ : "ಅದರ ಜೊತೆಗೆ ಏನು ತರಲಿ ಸಾರ್?"
ಈತ : "ಚಕ್ಕುಲಿ ಹೋದ ಸಲ ಇದ್ದ ಹಾಗೆಯೇ ಇದ್ದರೆ, ಅದರ ಜೊತೆಗೆ ಸುತ್ತಿಗೆನೂ ತಗೊಂಡು ಬಾ!"

ಮೈಸೂರು ಮಿತ್ರ

ಬುಧವಾರ, 15 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಯಾರು ತನ್ನ ಸಹಾಯವನ್ನು ಸ್ವತಃ ಮಾಡಿಕೊಳ್ಳಬಲ್ಲನೋ ಅಂಥವನಿಗೆ ದೇವರ ಸಹಾಯ ಇರುತ್ತದೆ. ಸೋಮಾರಿಗೆ ಸಾಯುವುದರಲ್ಲೇ ಆನಂದವಿದೆ.

–ಮಹಾತ್ಮಾ ಗಾಂಧೀಜಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಳಿವುದೇ ಕಾಯ, ಉಳಿವುದೇ ಕೀರ್ತಿ

ನಿಮ್ಮ ಪತ್ರಗಳು

ಜೆಎಲ್‌ಬಿ ರಸ್ತೆಯ ಮರದ ಬುಡದಲ್ಲಿ ಮದ್ಯದ ಬಾಟಲಿ ತೆರವುಗೊಳಿಸಿ



ಮಾನ್ಯರೆ,

ಸಾಂಸ್ಕೃತಿಕ ನಗರಿ ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಹೆಸರುವಾಸಿಯಾಗಿರುವ ಜೆಎಲ್‌ಬಿ (ಝಾನ್ಸಿ ರಾಣಿ ಲಕ್ಷ್ಮೀಬಾಯಿ) ರಸ್ತೆಯಲ್ಲಿ ಸರ್ಕಾರಿ ಮಹಾರಾಜ ಪದವಿ ಪೂರ್ವ ಕಾಲೇಜಿನ ಮುಂಭಾಗದಲ್ಲಿ ರಸ್ತೆಗೆ ಸೇರಿರುವ ಮರಗಳ ಬುಡದಲ್ಲಿ ಅನೇಕ ಮದ್ಯದ ಬಾಟಲಿಗಳು ಬಿದ್ದಿವೆ. ಇಲ್ಲಿ ಪ್ರತಿನಿತ್ಯ ಮಹಾರಾಜ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು, ಮಹಾರಾಣಿ ಪದವಿ ಕಾಲೇಜು ವಿದ್ಯಾರ್ಥಿನಿಯರು, ಶಿಕ್ಷಕರು, ಸರ್ಕಾರಿ ಅಧಿಕಾರಿಗಳು, ಹಿರಿಯ ನಾಗರಿಕರು, ಮಹಿಳಾ ಅಧಿಕಾರಿಗಳು ಓಡಾಡುತ್ತಾರೆ. ಈ ಸ್ಥಳಕ್ಕೆ ಸಮೀಪದಲ್ಲಿರುವ ಪ್ರಮುಖ ರಸ್ತೆಯಾದ ಡಿ.ದೇವರಾಜ ಅರಸು ರಸ್ತೆಗೆ ಸಂಜೆಯಿಂದ ರಾತ್ರಿ 10 ಅಥವಾ 11ರ ವೇಳೆಯಲ್ಲಿ ಶಾಪಿಂಗ್ ಹೆಚ್ಚಾಗುವ ಹಿನ್ನೆಲೆಯಲ್ಲಿ ಪಕ್ಕದ ಜೆಎಲ್‌ಬಿ ರಸ್ತೆಗೆ ಬಂದು ಅನೇಕರು ತಮ್ಮ ವಾಹನಗಳನ್ನು ನಿಲ್ಲಿಸಿಕೊಂಡು ಮದ್ಯಪಾನ ಮತ್ತು ಧೂಮಪಾನ ಮಾಡಿ ರಸ್ತೆಯಲ್ಲಿರುವ ಮರಗಳ ಬುಡಗಳಲ್ಲಿ ಬಾಟಲುಗಳನ್ನು ಬಿಸಾಡಿ, ಮೈಸೂರಿನ ಪರಿಸರ ಮತ್ತು ಸ್ವಚ್ಛತೆಯನ್ನು ನಾಶ ಮಾಡುತ್ತಿದ್ದಾರೆ. ಆದ್ದರಿಂದ ಈ ಕೂಡಲೆ ರಾತ್ರಿ ವೇಳೆ ಈ ರಸ್ತೆಗೆ ಒಳಪಡುವ ಲಕ್ಷ್ಮಿಪುರಂ ಪೊಲೀಸ್ ಠಾಣೆಯ ಪೊಲೀಸರು ಮದ್ಯಪಾನ ಮಾಡಿ ನಗರದ ಸ್ವಚ್ಛತೆಯನ್ನು ನಾಶ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

ಬಸ್ ಸೌಲಭ್ಯ ಹೆಚ್ಚಿಸಿ

ಮಾನ್ಯರೇ,

ಇತ್ತೀಚೆಗೆ ಕಾಂಗ್ರೆಸ್ ಸರ್ಕಾರವು ಜಾರಿಗೆ ತಂದಿರುವ ಐದು ಗ್ಯಾರಂಟಿಗಳಲ್ಲಿ ಒಂದಾದ ಸ್ತ್ರೀಯರಿಗೆ ಬಸ್ ಪ್ರಯಾಣ ಉಚಿತ ಎಂಬ ಯೋಜನೆಯು ಅನೇಕ ಮಹಿಳೆಯರಿಗೆ ಉಪಯುಕ್ತವಾಗಿದೆ. ಈ ಹಿಂದೆ ಅನೇಕ ಮಹಿಳೆಯರು ತಮ್ಮ ಊರುಗಳಿಂದ ದೂರದ ಸ್ಥಳಗಳಲ್ಲಿರುವ ಗಾರ್ಮೆಂಟ್ಸ್ ಮತ್ತು ಇತರ ಕಾರ್ಖಾನೆಗಳಿಗೆ ಹೋಗಿ ಕಾರ್ಯ ನಿರ್ವಹಿಸಲು ಖಾಸಗಿ ವಾಹನಗಳನ್ನು ಅವಲಂಬಿಸಿದ್ದರು. ಆದರೆ ಉಚಿತ ಬಸ್ ಪ್ರಯಾಣದ ಯೋಜನೆಯಿಂದ ಈ ಮಹಿಳೆಯರು ಮತ್ತು ಅನೇಕ ಕೂಲಿ ಕಾರ್ಮಿಕರು ಈಗ ಸರ್ಕಾರಿ ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದಾರೆ. ಖಾಸಗಿ ವಾಹನಗಳಿಗೆ ನೀಡುತ್ತಿದ್ದ ಹಣವನ್ನು ತಮ್ಮ ಮಕ್ಕಳ ಶಿಕ್ಷಣಕ್ಕೆ ಹಾಗೂ ಇತರ ಉತ್ತಮ ಕೆಲಸಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಈ ಯೋಜನೆಯು ಸ್ತ್ರೀಯರಿಗೆ ಹೆಚ್ಚಿನ ಲಾಭದಾಯಕವಾಗಿದೆ. ಇದರಿಂದ ಸರ್ಕಾರಿ ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದ್ದು ಹಿರಿಯ ನಾಗರಿಕರು ಮತ್ತು ಮಕ್ಕಳಿಗೆ ನಿಂತೂ ಸಹ ಪ್ರಯಾಣಿಸಬೇಕಾದ ಪರಿಸ್ಥಿತಿ ಇದೆ. ಇದು ಕಷ್ಟದಾಯಕವಾಗಿದೆ. ಆ ಕಾರಣದಿಂದ ಹೆಚ್ಚಿನ ಬಸ್ ಸೌಲಭ್ಯವನ್ನು ಒದಗಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

–ಭಾಗ್ಯಲಕ್ಷ್ಮಿ, ಮಹಾರಾಜ ಕಾಲೇಜು, ಮೈಸೂರು

ಮಳೆ ನೀರು ಕೊಯ್ಲು ಕಡ್ಡಾಯಗೊಳಿಸಿ

ಮಾನ್ಯರೆ,

ಈ ಬಾರಿಯ ಬೇಸಿಗೆಯು ನಮ್ಮೆಲ್ಲರಿಗೆ ಒಂದು ಎಚ್ಚರಿಕೆಯ ಪಾಠವನ್ನು ಕಲಿಸಿದೆ. ರಾಜ್ಯ ಮತ್ತು ನಮ್ಮ ಮೈಸೂರಿನ ಇತಿಹಾಸದಲ್ಲೇ ಕಂಡು ಕೇಳರಿಯದ ಭೀಕರ ರಣ ಬಿಸಿಲು, ಬಿಸಿ ಗಾಳಿ ಜನರ ಆರೋಗ್ಯವನ್ನು ಹದಗೆಡಿಸುತ್ತಿರುವುದು ಕಂಡು ಬಂದಿದೆ. ಸಾಲದಕ್ಕೆ ಮಳೆಯ ವಿಳಂಬ ಆಗಮನ ಹಾಗೂ ಕೊರತೆಯಿಂದ ಕೆರೆ ಕಟ್ಟೆಗಳು ಬತ್ತಿಹೋಗಿವೆ. ನದಿಗಳು ಸೊರಗಿಹೋಗಿವೆ. ರಾಜ್ಯದ ರಾಜಧಾನಿಯಿಂದ ಹಿಡಿದು ವಿವಿಧ ಜಿಲ್ಲೆಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರ ತಲೆದೋರಿ ಜನರು ಟ್ಯಾಂಕರ್ ಒಂದಕ್ಕೆ 3000 ರೂಪಾಯಿ ನೀಡಿ ನೀರು ಖರೀದಿ ಮಾಡಿದ ಉದಾಹರಣೆ ಇದೆ. ಮೈಸೂರಿನ ಕೆಲವು ಬಡಾವಣೆಗಳಲ್ಲಿ ಸಹ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗುತ್ತಿದೆ. ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಅಂತರ್ಜಲ ಮಟ್ಟ ಕುಸಿತ ಕಾಣುತ್ತಿದ್ದು, ನೀರಿನ ಬಳಕೆ ಮತ್ತು ಉಳಿಕೆ ವಿಷಯದಲ್ಲಿ ನಮಗೆಲ್ಲಾ ಇದು ಕೊನೆಯ ಅವಕಾಶ ಅನ್ನುವ ರೀತಿ ಭಾಸವಾಗುತ್ತಿದೆ. ಆದ್ದರಿಂದ ನಮ್ಮ ಸ್ಥಳೀಯ ಸರ್ಕಾರಗಳಾದ ಮೈಸೂರು ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳು ಮುಂದೆ ಆಗುವ ನೀರಿನ ಅಭಾವವನ್ನು ನಿವಾರಿಸಲು ಈಗಲೇ ಎಚ್ಚೆತ್ತುಕೊಳ್ಳಬೇಕು. ಹೊಸದಾಗಿ ನಿರ್ಮಾಣ ಮಾಡುವ ಪ್ರತಿ ಮನೆಗಳಲ್ಲಿ ಹಾಗೂ ಬಡಾವಣೆಗಳಲ್ಲಿ ಮಳೆ ನೀರು ಕೊಯ್ಲು ವ್ಯವಸ್ಥೆ ಮಾಡಿಕೊಳ್ಳಲು ಕಟ್ಟುನಿಟ್ಟಿನ ಸೂಚನೆ ನೀಡಿ ಅನುಷ್ಠಾನಗೊಳಿಸಿದರೆ ಮಾತ್ರ ಪಾಲಿಕೆ ರಹದಾರಿ ನೀಡಬೇಕು. ಹಾಗೆ ಅದರ ಮಹತ್ವವನ್ನು ಸಾರ್ವಜನಿಕರಿಗೆ ತಿಳಿಸುವ ಕೆಲಸ ಸಹ ಏಕಕಾಲದಲ್ಲಿ ಮಾಡಬೇಕು. ಇನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ತನ್ನ ಬಡಾವಣೆಗಳಲ್ಲಿ ಮನೆ ನಿರ್ಮಾಣ ಮತ್ತು ಬಡಾವಣೆ ನಿರ್ಮಿಸುವವರಿಗೆ ಕಡ್ಡಾಯವಾಗಿ ಮಳೆ ನೀರು ಸಂಗ್ರಹ ವ್ಯವಸ್ಥೆ ಮಾಡಿಕೊಳ್ಳಲು ನಿಯಮ ರೂಪಿಸುವುದರೊಂದಿಗೆ ತಮ್ಮ ಇಂಜಿನಿಯರ್‌ಗಳು ಸ್ಥಳಕೆ ಭೇಟಿ ನೀಡಿ ಪರಿಶೀಲಿಸಿದ ನಂತರವಷ್ಟೇ ಕಟ್ಟಡ ಕಾಮಗಾರಿ ಪೂರ್ಣಗೊಳಿಸಿದ ವರದಿ ನೀಡಬೇಕು. ಹೀಗೆ ಮಾಡದಿದ್ದ ಪಕ್ಷದಲ್ಲಿ ಮುಂದೆ ಬಂದು ಒದಗುವ ಜಲ ಕ್ಷಾಮಕ್ಕೆ ಎಲ್ಲರೂ ಬೆಲೆ ತೆರಬೇಕಾಗುತ್ತದೆ. ಮಳೆ ನೀರು ಸುಮ್ಮನೆ ಪೋಲಾಗುವ ಬದಲು ಸಂಕಷ್ಟ ಸಮಯ ದಲ್ಲಿ ಬಳಕೆಗೆ ಬರುವಂತೆ ಮಾಡಲು ಉಳಿಸಿಕೊಳ್ಳೋಣ. ಮಿಕ್ಕ ನೀರನ್ನು ಭೂಮಿಗೆ ಹಿಂಗಿಸೋಣ. ಮುಂದಿನ ತಲೆಮಾರಿಗೂ ಸ್ವಲ್ಪ ಬಿಟ್ಟು ಹೋಗೋಣ.

–ನಾಗೇಂದ್ರ ಕಿಲಗೆರೆ, ಸಾಮಾಜಿಕ ಕಾರ್ಯಕರ್ತ, ಮೈಸೂರು

ಕನಿಷ್ಠ ಶೇ.50 ಮತದಾನಕ್ಕೆ ಕ್ರಮ ಅಗತ್ಯ

ಮಾನ್ಯರೆ,

ಇತ್ತೀಚೆಗೆ ಮುಕ್ತಾಯಗೊಂಡ 4ನೇ ಹಂತದ ಲೋಕಸಭಾ ಚುನಾವಣೆಯಲ್ಲಿ ಶೇ.65.67 ರಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗ ಹೇಳಿದೆ.

ಕರ್ನಾಟಕದ 2 ಹಂತದಲ್ಲಿ ನಡೆದ ಚುನಾವಣೆಯಲ್ಲಿ ಶೇ. 72.65 ರಷ್ಟು ಮತದಾನವಾಗಿದೆ. ಇದು ಬೇರೆ ರಾಜ್ಯಗಳಿಗೆ ಹೋಲಿಸಿದರೆ, ಶೇ. 7 ರಿಂದ 8ರಷ್ಟು ಹೆಚ್ಚು ಮತದಾನವಾಗಿದೆ. ಇದಕ್ಕಾಗಿ ನಮ್ಮ ರಾಜ್ಯದ ಮತದಾರರನ್ನು ಅಭಿನಂದಿಸಲೇಬೇಕು. ಈ ಸಲ ಚುನಾವಣಾ ಆಯೋಗದ ಸ್ವೀಪ್ ಸಮಿತಿಯು ಹಲವಾರು ಕಾರ್ಯಕ್ರಮಗಳ ಮೂಲಕ ಮತದಾರರಲ್ಲಿ ಜಾಗೃತಿ ಮೂಡಿಸಿದ್ದು ಬಹು ಮುಖ್ಯ ಕಾರಣ ಎನ್ನಲಾಗಿದೆ. 4 ಹಂತದಲ್ಲಿ ನಡೆದ ಮತದಾನದಲ್ಲಿ, ಬಿಹಾರದಲ್ಲಿ ಶೇ. 56.7 ರಷ್ಟು ಮತ್ತು ಜಮ್ಮು ಕಾಶ್ಮೀರದಲ್ಲಿ ಶೇಕಡಾ. 37. 98 ರಷ್ಟು ಮಾತ್ರ ಮತದಾನವಾಗಿದೆ. ಮತ್ತೊಂದು ಗಮನಿಸಬೇಕಾದ ಅಂಶವೆಂದರೆ, ಜಮ್ಮು ಕಾಶ್ಮೀರದಲ್ಲಿ ನಡೆದಿರುವ ಶೇ. 37.98 ರಷ್ಟು ಮತದಾನ ಕಳೆದ ದಶಕದಲ್ಲೇ ಅತಿ ಹೆಚ್ಚು ಎಂದು ಹೇಳಲಾಗುತ್ತಿದೆ. ಯಾವುದೇ ಒಂದು ಕ್ಷೇತ್ರದ ಲೋಕಸಭಾ ಚುನಾವಣೆಯಲ್ಲಿ ಕನಿಷ್ಠ ಶೇ.50 ರಷ್ಟಾದರೂ ಮತದಾನವಾಗುವಂತೆ ಚುನಾವಣಾ ಆಯೋಗ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಆ ಲೋಕಸಭಾ ಕ್ಷೇತ್ರವನ್ನು ಪರಿಗಣಿಸದಂತೆ ಚುನಾವಣಾ ಆಯೋಗ ಕ್ರಮ ಕೈಗೊಳ್ಳಲಿ. –ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಸಮಯವಿದೆ, ಆದರೆ ನಮಗೆ ಪುರುಸೊತ್ತಿಲ್ಲ !!!

ನಮ್ಮ ಜೀವನ ಬರಬರುತ್ತಾ ಅನವಶ್ಯಕವಾದ ಧಾವಂತದಲ್ಲಿ ಸಿಲುಕಿಕೊಳ್ಳುತ್ತಿದೆ. ಯಾರನ್ನು ಕೇಳಿದರೂ ಒಂದೇ ಮಾತು 'ನಮಗೆ ಸಮಯವಿಲ್ಲ, ಪುರುಸೊತ್ತೇ ಇಲ್ಲ' ಎಂಬ ಮಾತುಗಳೇ ಕೇಳಿಬರುತ್ತವೆ. ನಾವುಗಳೂ ಹಾಗೆ ಹಲವು ಸಾರಿ ಹೇಳಿದ್ದಿರಬಹುದು. ಓದುವ ಆಸೆ, ಬರೆಯುವ ಆಸೆ ಇದೆ, ಆದರೆ ಪುರುಸೊತ್ತಿಲ್ಲ. ಕೆಲವರಂತೂ ನಮಗೆ ದಿನಕ್ಕೆ 24 ಗಂಟೆಗಳೂ ಸಾಕಾಗುತ್ತಿಲ್ಲ ಎಂದೂ ಹೇಳುತ್ತಾರೆ. ಹಾಗಾದರೆ ಇಷ್ಟೊಂದು ಕೆಲಸವಿರುವ ಇವರುಗಳು ಮಾಡಿರುವ ಸಾಧನೆಯಾದರೂ ಏನು?. ಇಷ್ಟೊಂದು ಕೆಲಸ ಮಾಡಿದರೆ ಅದು ಎಂತಹ ಕೆಲಸವಾದರೂ ನಮಗೆ ಒಲಿಯಲೇ ಬೇಕಲ್ಲವೇ? ಆದರೆ ಅವಲೋಕಿಸಿದರೆ ಅಂತಹ ಸಾಧನೆ ಮಾಡಿದವರು ಕೇವಲ ಬೆರಳೆಣಿಕೆಯಷ್ಟು ಮಂದಿ ಮಾತ್ರ ಉಳಿದವರು ತಮ್ಮನ್ನು ಸಮರ್ಥಿಸಿಕೊಳ್ಳಲು ಈ ಮಾತು ಹೇಳುತ್ತಿದ್ದಾರೆ ಎನಿಸುತ್ತದೆ.

ನಿಜ, ಇದು ಧಾವಂತದ ಯುಗ. ಯಾವುದನ್ನು ಮಾಡಬೇಕಾದರೂ ನಮಗೆ ಸಮಾಧಾನ ಬೇಕು. ಆದರೆ ಇಂದು ಊಟ ಮಾಡುವವರು, ತಿಂಡಿ ತಿನ್ನುವವರೂ ಧಾವಂತಪಡುತ್ತಾರೆ. ಒಂದು ರೀತಿ ತಿನ್ನಬೇಕಲ್ಲ ಎಂದು ತಿನ್ನುತ್ತಿದ್ದೇವೆ ಎಂಬಂತೆ ಅವರ ವರ್ತನೆ ಇರುತ್ತದೆ. ನಮ್ಮಲ್ಲಿ ಮೊದಲಿನಿಂದಲೂ ಹೇಳಿಕೊಂಡು ಬರುತ್ತಿರುವುದು ಯಾವ ಕೆಲಸವನ್ನಾದರೂ ಯೋಚಿಸಿ, ವಿವೇಚನೆಯಿಂದ ಮಾಡಿ ಎಂದು. ಕನಿಷ್ಠ ಊಟ ತಿಂಡಿಯನ್ನಾದರೂ ಸಮಾಧಾನವಾಗಿ ಮಾಡಬೇಕು ಎಂದು. ನಾವು ಹಗಲಿರುಳು ಶ್ರಮಿಸುವುದೇ ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ ಎಂದು ಹೇಳುತ್ತೇವೆ. ಆದರೆ ಹೊಟ್ಟೆಗೆ ಆಹಾರ ಸೇವಿಸುವಾಗಲೂ ನಮಗೆ ವ್ಯವಧಾನವಿಲ್ಲ. ಅನೇಕ ಸಲ ಹೊಟೇಲ್‌ಗಳಲ್ಲಿ ಗಮನಿಸಿದರೆ ಗ್ರಾಹಕ ಅವನಿಗಿಷ್ಟವಾದ ತಿಂಡಿಯನ್ನು ಕೇಳುತ್ತಾನೆ, ಹೊಟೇಲ್‌ನವರು ಅದು ಸಿಗಬೇಕಾದರೆ ಹತ್ತು ನಿಮಿಷವಾಗುತ್ತದೆ ಎಂದು ಹೇಳುತ್ತಾನೆ. ಹೌದಾ, ಹಾಗಾದರೆ ಯಾವುದು ರೆಡಿ ಇದೆಯೋ ಅದನ್ನೇ ಕೊಡಿ ಎನ್ನುತ್ತಾನೆ. ತನಗೆ ಬೇಕಾದ ಆಹಾರಕ್ಕಾಗಿ ಹತ್ತು ನಿಮಿಷ ಕಾಯಲೂ ಸಿದ್ಧವಿರದ ಮನೋಭಾವ. ಅದೇ ಸಮಯದಲ್ಲಿ ಹೊಟೇಲ್‌ನವರು ನೀಡಿದ ತಿಂಡಿಯನ್ನು ತಿನ್ನಬೇಕೆನಿಸುವಷ್ಟರಲ್ಲಿ ಯಾವುದಾದರೂ ಫೋನ್ ಕರೆ ಬಂದರೆ, ಹತ್ತು ನಿಮಿಷಕ್ಕೂ ಮೀರಿ ಮಾತನಾಡುತ್ತಾರೆ. ಆ ನಂತರ ತಣ್ಣಗಾದ ತಿಂಡಿ ತಿನ್ನುತ್ತಾರೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ ಆ ಕರೆ ಅಂತಹ ಮಹತ್ವದ ಕರೆಯಾಗಿರುವುದಿಲ್ಲ. ತಿಂಡಿ ತಿಂದ ನಂತರವೂ ಮಾತನಾಡಬಹುದಾಗಿರುತ್ತದೆ. ಇದು ನಮಗೆ ನಾವೇ ಮಾಡಿಕೊಳ್ಳುವ ಮೋಸ.

ನಮ್ಮ ಆಹಾರ ಪದ್ಧತಿ ಹಾಗೂ ಆರೋಗ್ಯದ ಬಗ್ಗೆ ಕಳಕಳಿ ಇರುವವರು ಹೇಳುವ ಮಾತು ಎಂದರೆ ನಿಂತುಕೊಂಡು ಏನನ್ನೂ ತಿನ್ನಬಾರದು. ಕೊನೆಗೆ ನೀರನ್ನೂ ನಿಂತುಕೊಂಡು ಕುಡಿಯಬಾರದು ಎಂದು. ಮತ್ತೂ ಒಂದು ಮಾತು; 'ನಿಂತುಕೊಂಡು ನೀರು ಕುಡಿಯುವವರಿಗೆ ಮುಂದೆ ಮಂಡಿ ನೋವು ಗ್ಯಾರಂಟಿ. ಅಂದರೆ ನೀರು ಕುಡಿಯುವಾಗಲೂ ಸಮಾಧಾನವಾಗಿ ಕುಳಿತು ಕುಡಿಯಬೇಕು ಎಂಬುದು ಆರೋಗ್ಯದ ಹಿತನುಡಿ: ನೀರಿನ ಬಗ್ಗೆಯೇ ಹೀಗೆ ಹೇಳುವಾಗ ಆಹಾರದ ಬಗ್ಗೆ ಯೋಚಿಸಬೇಕಲ್ಲವೇ? ತಿಂದರೆ ಅದು ಮೈಗೆ ಹತ್ತುವಂತಿರಬೇಕು ಎಂಬುದು ವಿವೇಚನೆಯ ಮಾತು. ಆದರೆ ಧಾವಂತ. ನೀರಿರಲಿ, ಊಟ ತಿಂಡಿಯನ್ನೂ ನಿಂತೇ ಮಾಡುತ್ತೇವೆ. ಕುಳಿತು ತಿನ್ನಲು ಜಾಗವಿರುವುದಿಲ್ಲ, ಸ್ವಲ್ಪ ಸಮಯ ಕಾಯಬೇಕಾಗುತ್ತದೆ. ಆದರೆ ಅಷ್ಟು ಸಮಯವಿಲ್ಲ. ಹಾಗಾಗಿ ಹೇಗೋ ಹೊಟ್ಟೆ ತುಂಬಿದರೆ ಸಾಕು ಎಂದು ತಿನ್ನುವ ಜಾಯಮಾನ ಬಹುತೇಕರದ್ದು.

ಇನ್ನು ಟೀ ಕುಡಿಯುವ ಅಭ್ಯಾಸ ಇರುವವರು ಮತ್ತೊಂದು ಸಂಕಟ ಅನುಭವಿಸುತ್ತಾರೆ. ಇಂದು ಟೀ ಕುಡಿಯಲು ಟೀಸ್ಟಾಲ್‌ಗಳಿಗೆ ಹೋದರೆ ಅದು ಸಿಗರೇಟು ಸೇದುವವರ ಕಟ್ಟೆಯಾಗಿ ಮಾರ್ಪಟ್ಟಿರುತ್ತದೆ. ಟೀ ಕುಡಿಯುವ ನೆಪದಲ್ಲಿ ಸಿಗರೇಟ್ ಸೇದಲು ಅದು ಪ್ರಶಸ್ತವಾದ ಜಾಗ ಎಂದು ಬಹಳ ಜನ ತೀರ್ಮಾನಿಸಿರುತ್ತಾರೆ. ಯಾವುದೇ ಟೀ ಅಂಗಡಿಯೂ ಇದಕ್ಕೆ ಹೊರತಲ್ಲ. ಅಲ್ಲಿ ಯಾವಾಗಲೂ ಸಿಗರೇಟ್ ಹೊಗೆ ತುಂಬಿರುತ್ತದೆ. ಬೇಸರದ ಸಂಗತಿ ಎಂದರೆ ಇನ್ನೂ ಚಿಕ್ಕ ವಯಸ್ಸಿನ ಮಕ್ಕಳೂ ಅಲ್ಲಿ ಹೊಗೆ ಬಿಡಲು ಸಿದ್ಧರಾಗಿರುವುದು. 'ಸಿಗರೇಟ್ ಸೇದುವುದಕ್ಕಿಂತ ಅದರ ಹೊಗೆ ಕುಡಿಯುವುದು ಹೆಚ್ಚು ಅಪಾಯಕಾರಿ' ಎಂದು ಹೇಳಲಾಗುತ್ತದೆ. ನಾವು ಸಿಗರೇಟ್ ಸೇದುವುದಿಲ್ಲ. ಆದರೆ ಟೀ ಕುಡಿಯುವವರು, ಅದಕ್ಕಾಗಿ ಟೀ ಅಂಗಡಿಗೆ ಹೋದರೆ ಹೊಗೆ ಸೇವನೆ ಅನಿವಾರ್ಯ. ಅದು ಒಂದು ರೀತಿ ಉಚಿತ ಸೇವೆ!! ಅಲ್ಲಿ ಹತ್ತು ನಿಮಿಷ ನಿಂತರೆ ಸಾಕು ನಮ್ಮ ಬಟ್ಟೆಯೆಲ್ಲಾ ಸಿಗರೇಟಿನ ಹೊಗೆಯುಕ್ತವಾಗಿ ಮಾಡದೇ ಇರುವ ಕೆಟ್ಟ ಚಾಳಿಗೆ ಸಾಕ್ಷಿಯಾಗಿ ಪರಿಣಮಿಸುತ್ತದೆ. ಹೋಗಲಿ, ಯಾವುದಾದರೂ ಹೊಟೇಲ್ಲಿಗೆ ಹೋಗಿ ಟೀ ಕುಡಿಯಬಹುದಲ್ಲವೇ? ಎಂದರೆ, ಸಮಯವಿಲ್ಲ. ಅರ್ಜೆಂಟ್. ಹಾಗಾಗಿ ಅಲ್ಲೇ ಟೀ ಕುಡಿಯಲು ಹೋಗುತ್ತಾರೆ. ನಮಗೆ ಗೊತ್ತಿರಬೇಕು, ನಮ್ಮ ಆರೋಗ್ಯ ಒಮ್ಮೆಲೇ ಏರುಪೇರಾಗುವುದಿಲ್ಲ, ಅದು ಕ್ರಮೇಣ ಅಂತಿಮ ಹಂತದಲ್ಲಿ ಮಾತ್ರ ನಮಗೆ ಗೊತ್ತಾಗುತ್ತದೆ (ಕ್ಯಾನ್ಸರ್ ರೀತಿಯಲ್ಲಿ) ಅಷ್ಟರಲ್ಲಿ ಕಾಲ ಮೀರಿರುತ್ತದೆ. ಚಿಕಿತ್ಸೆ ನಿಧಾನವಾಗಬಹುದು ಅಥವಾ ಚಿಕಿತ್ಸೆ ಫಲಕಾರಿಯಾಗದೆಯೂ ಹೋಗಬಹುದು. ಇದರ ಬಗ್ಗೆ ನಮಗೆ ಮೊದಲೇ ಅರಿವಿರಬೇಕು.



> ಆಧುನಿಕತೆಯ ಹೆಸರಿನಲ್ಲಿ ಪುಸ್ತಕ ಓದುವುದು ಕಡಿಮೆಯಾಯಿತು. ಗ್ರಂಥಾಲಯಗಳಿಗೆ ಹೋಗುವವರ ಸಂಖ್ಯೆಯೂ ಕಡಿಮೆಯಾಗಿದೆ. ಹಿಂದೆ ಅಲ್ಲಿ ತರಿಸುವ ದಿನಪತ್ರಿಕೆ ಓದುವುದಕ್ಕಾದರೂ ಒಂದಷ್ಟು ಜನರು ಬಂದೇ ಬರುತ್ತಿದ್ದರು. ಆದರೆ ಈಗ ಅದೂ ಕಡಿಮೆಯಾಗಿದೆ. ಕೆಲವರಂತೂ ಎಲ್ಲಾ ಮಾಹಿತಿಗಳು ಮೊಬೈಲ್‌ನಲ್ಲೇ ದೊರಕುತ್ತದೆ, ನಮಗೆ ಬೇಕಾದ ಪುಸ್ತಕಗಳು ಅಲ್ಲಿಯೇ ಸಿಗುತ್ತದೆ. ಹಾಗಾಗಿ ನಾವು ಯಾಕೆ ಗ್ರಂಥಾಲಯಕ್ಕೆ ಹೋಗಿ ಸಮಯ ವ್ಯರ್ಥ ಮಾಡಿಕೊಳ್ಳಬೇಕು? ಎಂದು ಕೇಳುತ್ತಾರೆ. ಸರಿ, ಹಾಗಾದರೆ ಕಳೆದೊಂದು ವರ್ಷದಲ್ಲಿ ನಿಮ್ಮ ಆನ್‌ಲೈನ್‌ನಲ್ಲಿ ಎಷ್ಟು ಪುಸ್ತಕ ಓದಿದ್ದೀರಿ ಎಂದರೆ ಒಂದೂ ಇಲ್ಲ ಎನ್ನುತ್ತಾರೆ. ಏಕೆಂದರೆ ಸಮಯವೇ ಇಲ್ಲ !!

ಇದು ಆಹಾರಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಮತ್ತಷ್ಟು ವಿಷಯಗಳು ನಮ್ಮ ಧಾವಂತದ ಪ್ರತಿನಿಧಿಗಳಂತೆ ಕಂಡುಬರುತ್ತವೆ. ನಮ್ಮಲ್ಲಿ ಎಷ್ಟೋ ಜನರು ಮನೆಗೆ ಹಲವಾರು ದಿನಪತ್ರಿಕೆ, ವಾರಪತ್ರಿಕೆ, ಮಾಸ ಪತ್ರಿಕೆಗಳನ್ನು ತರಿಸುತ್ತಾರೆ. ಅದನ್ನು ಅಲಂಕಾರಿಕವಾಗಿ ಜೋಡಿಸಿಯೂ ಇಡುತ್ತಾರೆ. ಇದರಲ್ಲಿ ನೀವು ಎಷ್ಟು ಪತ್ರಿಕೆ ಓದುತ್ತೀರಿ ಎಂದರೆ, ಇಲ್ಲ ಯಾವುದನ್ನೂ ಪೂರ್ತಿಯಾಗಿ ಓದುವುದಿಲ್ಲ. ಅಲ್ಲಲ್ಲಿ ಕಣ್ಣು ಹಾಯಿಸುತ್ತೇನೆ ಅಷ್ಟೇ ಎನ್ನುತ್ತಾರೆ. ಏಕೆಂದರೆ ಸಮಯವಿಲ್ಲ! ಹಾಗಾದರೆ ಅಷ್ಟು ಪತ್ರಿಕೆ ಏಕೆ ತರಿಸುತ್ತೀರಿ ಎಂದರೆ ಮನೆಗೆ ಬಂದವರಿಗೆ ನಾವು ಎಷ್ಟು ನಾಗರಿಕರು, ಸಾಹಿತ್ಯಾಸಕ್ತರು ಎಂದು ಗೊತ್ತಾಗಲಿ ಎಂದು ಅವನ್ನು ತರಿಸುತ್ತೇವೆ ಎಂದು ಹೇಳುತ್ತಾರೆ. ಹಾಗಾದರೆ ಅವರಿಗೆ ಸಮಯವೇ ಇಲ್ಲವೇ? ಅದರಲ್ಲೂ ಪತ್ರಿಕೆ ಓದುವಷ್ಟೂ ಸಮಯವಿಲ್ಲವೇ? ಎಂದರೆ ಹಾಗೇನೂ ಇಲ್ಲ, ಅವರಿಗೆ ಮತ್ತೂ ಒಂದು ಮುಖ್ಯವಾದ ಕೆಲಸವಿದೆ, ಅದೆಂದರೆ ಮೊಬೈಲ್ ನೋಡುವುದು. ಅದಕ್ಕೆ ಹೆಚ್ಚಿನ ಸಮಯ ಬೇಕಾಗುತ್ತದೆ. ದಿನಕ್ಕೆ ಮೂರ್‍ನಾಲ್ಕು ಗಂಟೆಯಾದರೂ ಮೊಬೈಲ್ ನೋಡಲು ಖರ್ಚಾಗುತ್ತದೆ. ಆದರೆ ಒಂದು ಗಂಟೆ ಪತ್ರಿಕೆ ಓದಲು ಸಮಯವಿಲ್ಲ. ಇದು ನಮಗೆ ನಾವೇ ಮಾಡಿಕೊಳ್ಳುತ್ತಿರುವ ಮೋಸವಲ್ಲದೆ ಮತ್ತಿನ್ನೇನು.

ಇನ್ನು ಟಿವಿಗಳಲ್ಲಿ ಬರುವ ವಾರ್ತೆಗಳನ್ನೂ ನೋಡುವುದಿಲ್ಲ. (ಅದದೇ ಸುದ್ದಿ ತಲೆಚಿಟ್ಟು ಹಿಡಿಸುತ್ತದೆ ಎಂಬುದು ಬೇರೆ ವಿಷಯ). ನಮ್ಮ ಸಾಮಾನ್ಯ ಜ್ಞಾನ ಬೆಳೆಯಲು ಪತ್ರಿಕೆ ಓದುವುದು, ಸುದ್ದಿ ಕೇಳುವುದು ಅನಿವಾರ್ಯವಲ್ಲವೇ? ಇನ್ನು ಪುಸ್ತಕಗಳನ್ನು ಓದುವ ವಿಷಯದಲ್ಲೂ ಇದೇ ಮನೋಭಾವ ಕಾಣುತ್ತದೆ. ಈ ಹಿಂದೆ ಒಂದು ಖಾಸಗಿ ಗ್ರಂಥಾಲಯ ನಡೆಸುತ್ತಿದ್ದವರು ಈಗ ಅದನ್ನು ಮುಚ್ಚಿದ್ದಾರೆ. ಈ ಹಿಂದೆ ಸಂಜೆಯಾದರೆ ಅವರ ಗ್ರಂಥಾಲಯ ತುಂಬಿರುತ್ತಿತ್ತು. ಜನರು ಇಂತಹುದೇ ಪುಸ್ತಕ ಬೇಕು ಎಂದು ಕೇಳಿ ಪಡೆಯುತ್ತಿದ್ದರು. ಅದು ಸಿಗದಿದ್ದಾಗ ನಿರಾಶೆ ಅನುಭವಿಸುತ್ತಿದ್ದರು. ಆದರೆ ಕ್ರಮೇಣ ಗ್ರಂಥಾಲಯಕ್ಕೆ ಬರುವವರ ಸಂಖ್ಯೆ ಕ್ಷೀಣಿಸಿತು. ಅನಿವಾರ್ಯವಾಗಿ ಅವರು ಗ್ರಂಥಾಲಯವನ್ನು ಮುಚ್ಚಬೇಕಾಯಿತು. ಅಂದರೆ ಜನರಿಗೆ ಓದುವ ಹವ್ಯಾಸ ಕಡಿಮೆಯಾಯಿತು. ಜನರು ಹೇಳಿಕೊಳ್ಳುವಂತೆ ಓದಲು ಸಮಯವೇ ಇಲ್ಲ. ಹಾಗಾದರೆ ಮೊದಲು ಸಮಯವಿದ್ದದ್ದು ಈಗೇಕೆ ಇಲ್ಲ ಎಂದರೆ, ಹಿಂದೆ ಈ ಟಿವಿ, ಮೊಬೈಲ್‌ಗಳು ಇರಲಿಲ್ಲ. ಸಮಯ ಕಳೆಯಲು, ಜ್ಞಾನಾರ್ಜನೆಗೆ, ಮನರಂಜನೆ ಎಂದರೆ ಪುಸ್ತಕ ಓದುವುದೇ ಆಗಿತ್ತು. ಅದು ಎಂತಹ ಹುಚ್ಚು ಹಿಡಿಸಿತ್ತು ಎಂದರೆ ಊಟಕ್ಕೆ ಕುಳಿತಾಗಲೂ ಕೈಯಲ್ಲಿ ಪುಸ್ತಕ ಇರಲೇಬೇಕು ಎಂಬಂತಿತ್ತು. ಹಾಗೆ ಓದುವವರು ಎಂತಹ ಜ್ಞಾನ ಗಳಿಸುತ್ತಿದ್ದರು ಎಂದರೆ ಅವರು ಯಾವುದೇ ವಿಷಯದ ಬಗ್ಗೆ ಅರಿವಿರುವವರಾಗಿರುತ್ತಿದ್ದರು. ಅಂತಹ ವಿಷಯಗಳ ಬಗ್ಗೆ ನಿರರ್ಗಳವಾಗಿ ಮಾತನ್ನಾಡುತ್ತಿದ್ದರು.

ಆದರೆ ಆಧುನಿಕತೆಯ ಹೆಸರಿನಲ್ಲಿ ಪುಸ್ತಕ ಓದುವುದು ಕಡಿಮೆಯಾಯಿತು. ಗ್ರಂಥಾಲಯಗಳಿಗೆ ಹೋಗುವವರ ಸಂಖ್ಯೆಯೂ ಕಡಿಮೆಯಾಗಿದೆ. ಹಿಂದೆ ಅಲ್ಲಿ ತರಿಸುವ ದಿನಪತ್ರಿಕೆ ಓದುವುದಕ್ಕಾದರೂ ಒಂದಷ್ಟು ಜನರು ಬಂದೇ ಬರುತ್ತಿದ್ದರು. ಆದರೆ ಈಗ ಅದೂ ಕಡಿಮೆಯಾಗಿದೆ. ಕೆಲವರಂತೂ ಎಲ್ಲಾ ಮಾಹಿತಿಗಳು ಮೊಬೈಲ್‌ನಲ್ಲೇ ದೊರಕುತ್ತದೆ, ನಮಗೆ ಬೇಕಾದ ಪುಸ್ತಕಗಳು ಅಲ್ಲಿಯೇ ಸಿಗುತ್ತದೆ, ಹಾಗಾಗಿ ನಾವು ಯಾಕೆ ಗ್ರಂಥಾಲಯಕ್ಕೆ ಹೋಗಿ ಸಮಯ ವ್ಯರ್ಥ ಮಾಡಿಕೊಳ್ಳಬೇಕು? ಎಂದು ಕೇಳುತ್ತಾರೆ. ಸರಿ, ಹಾಗಾದರೆ ಕಳೆದೊಂದು ವರ್ಷದಲ್ಲಿ ನಿಮ್ಮ ಆನ್‌ಲೈನ್‌ನಲ್ಲಿ ಎಷ್ಟು ಪುಸ್ತಕ ಓದಿದ್ದೀರಿ ಎಂದರೆ ಒಂದೂ ಇಲ್ಲ ಎನ್ನುತ್ತಾರೆ. ಏಕೆಂದರೆ ಸಮಯವೇ ಇಲ್ಲ !!

ಈ ಮನೋಭಾವದಿಂದಾಗಿ ಇಂದು ಚಿತ್ರಮಂದಿರಗಳಿಗೆ ಹೋಗಿ ಚಲನಚಿತ್ರ ನೋಡುವವರ ಸಂಖ್ಯೆಯೂ ಗಣನೀಯವಾಗಿ ಕಡಿಮೆಯಾಗಿದೆ. ಮೂರು ಗಂಟೆ ಕುಳಿತುಕೊಳ್ಳಲು ಪುರುಸೊತ್ತಿಲ್ಲ. ಹಾಗಾಗಿ ಚಿತ್ರಮಂದಿರಗಳು ಒಂದೊಂದಾಗಿ ಮುಚ್ಚುತ್ತಿವೆ. ನಾನು ಗಮನಿಸಿದಂತೆ ನಮ್ಮಲ್ಲಿ ಚಲನಚಿತ್ರಗಳನ್ನು ತೋರಿಸುವ ಅನೇಕ ಟಿವಿ ಚಾನಲ್‌ಗಳಿವೆ. ಅಲ್ಲಾದರೂ ಚಿತ್ರಗಳನ್ನು ಪೂರ್ತಿಯಾಗಿ ವೀಕ್ಷಿಸುತ್ತೇವೆಯೇ ಎಂದರೆ ಅದು ಇಲ್ಲ, ಏಕೆಂದರೆ ನಮಗೆ ಪುರುಸೊತ್ತಿಲ್ಲ !!

ಹಾಗಾದರೆ ನಾವು ಸಮಯವನ್ನು ಹೇಗೆ ಉಪಯೋಗಿಸುತ್ತಿದ್ದೇವೆ ಎಂದು ಒಮ್ಮೆ ಅವಲೋಕನ ಮಾಡಿಕೊಳ್ಳೋಣ. ನಾವು ದಿನದಲ್ಲಿ ಯಾವ್ಯಾವ ಕೆಲಸಗಳನ್ನು ಮಾಡಿದ್ದೇವೆ ಎಷ್ಟು ಸಮಯ ಅದಕ್ಕಾಗಿ ವಿನಿಯೋಗಿಸಿದ್ದೇವೆ ಎಷ್ಟು ಸಮಯ ಏನೂ ಕೆಲಸ ಮಾಡದೆ ಕಾಲ ಕಳೆದಿದ್ದೇವೆ ಎಂದು ರಾತ್ರಿ ಮಲಗುವ ಮುಂಚೆ ಅವಲೋಕಿಸಿದರೆ, ಸಾಕಷ್ಟು ಸಮಯವನ್ನು ವ್ಯರ್ಥವಾಗಿಯೇ ಕಳೆದಿರುತ್ತೇವೆ. ದಿನಕ್ಕೆ ಎಷ್ಟು ಸಮಯ ಮೊಬೈಲ್ ನೋಡುವುದರಲ್ಲಿ ಕಳೆಯುತ್ತೇವೆ, ಎಷ್ಟು ಸಮಯ ಟಿವಿ ಮುಂದೆ ಕುಳಿತುಕೊಂಡಿರುತ್ತೇವೆ, ಎಷ್ಟು ಸಮಯ ನಿದ್ರೆ ಮಾಡುತ್ತೇವೆ, ಎಂಬುದರ ಲೆಕ್ಕ ಹಾಕಿದಾಗ ದಿನಕ್ಕೆ ನಾಲ್ಕಾರು ಗಂಟೆ ವ್ಯರ್ಥವಾಗಿಯೇ ಕಳೆದಿರುವುದು ಸಾಬೀತಾಗುತ್ತದೆ. ಈ ಸಮಯದಲ್ಲಿ ಪತ್ರಿಕೆಗಳನ್ನು ಓದಿದ್ದರೆ, ಪುಸ್ತಕಗಳನ್ನು ಓದಿದ್ದರೆ ನಮಗೆ ಉಪಯೋಗವಾಗುತ್ತಿರಲಿಲ್ಲವೇ? ಇಂದು ಶಾಲಾ–ಕಾಲೇಜುಗಳಲ್ಲಿ ಹಿಂದೆ ನಡೆಯುತ್ತಿದ್ದಂತೆ ಚರ್ಚಾ ಸ್ಪರ್ಧೆಗಳೇ ನಡೆಯುವುದಿಲ್ಲ. ಮಕ್ಕಳು ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಲು ತಂದೆತಾಯಿ ವಿಷಯವನ್ನು ಮಕ್ಕಳಿಗೆ ಮನದಟ್ಟು ಮಾಡಿಕೊಟ್ಟು, ಅವರನ್ನು ಸಜ್ಜುಗೊಳಿಸುತ್ತಿದ್ದರು. ಈಗ ಪುರುಸೊತ್ತಿಲ್ಲದ ಕಾರಣ ತಂದೆತಾಯಿಯರಿಗೆ ವಿಷಯದ ಅರಿವೇ ಇಲ್ಲ. ಇನ್ನು ಮಕ್ಕಳು ಹೇಗೆ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸುತ್ತಾರೆ?

ಇತ್ತೀಚೆಗೆ ಒಂದು ಸಂಗೀತ ಕಛೇರಿಗೆ ಹೋಗುವ ಅವಕಾಶ ಲಭಿಸಿತ್ತು. ಆರಂಭದಲ್ಲಿ ಕುಳಿತುಕೊಳ್ಳಲೂ ಜಾಗ ಸಿಗದಂತೆ ಸಭಾಂಗಣ ತುಂಬಿತ್ತು. ಕೇವಲ ಅರ್ಧ ಗಂಟೆಯಲ್ಲಿ ಶೇಕಡಾ ಹತ್ತರಷ್ಟು ಆಸನಗಳು ಖಾಲಿಯಾದವು. ನಂತರ ಒಂದೊಂದು ಹಾಡು ಮುಗಿದಂತೆ ಒಂದಷ್ಟು ಜನ ಎದ್ದು ಹೋಗುವುದನ್ನು ಕಾಣುವಂತಾಯಿತು. ಹಾಗಾದರೆ ಸಂಗೀತ ಚೆನ್ನಾಗಿರಲಿಲ್ಲವೇ ಎಂದರೆ ಅದು ಬಹಳ ಸೊಗಸಾಗಿತ್ತು. ಆದರೆ ಧಾವಂತದಿಂದಾಗಿ ಆನಂದಿಸಬಹುದಾದ ಮನಸ್ಸೇ ಇಲ್ಲದಿದ್ದಾಗ ಸಂಗೀತಗಾರರು ಏನಂದುಕೊಳ್ಳಬಹುದು ಎಂಬುದನ್ನೂ ಯೋಚಿಸದೆ ಜನ ಎದ್ದು ಹೋಗುತ್ತಿದ್ದರು. ಹಾಗೆ ಹೋದವರು ಮುಂದೆ ಸಮಯವನ್ನು ಹೇಗೆ ಉಪಯೋಗಿಸಿಕೊಂಡರು ಎಂದರೆ ಅವರು ಹಾಜರಾಗಿದ್ದು ಟಿವಿ ಮುಂದೆ.

ಇಂತಹ ಧಾವಂತ ನಮಗೆ ನಾವೇ ಮಾಡಿಕೊಳ್ಳುತ್ತಿರುವ ಮೋಸ. ನಮಗೆ ಸಮಯ ಸಾಕಷ್ಟಿದೆ. ಆದರೆ ಯಾವುದಕ್ಕೆ ಎಷ್ಟು ಸಮಯ ಕೊಡಬೇಕು ಎಂಬುದೇ ಗೊತ್ತಿಲ್ಲದೆ, ಪುರುಸೊತ್ತಿಲ್ಲ ಎಂದು ಹೇಳುವ ಸಬೂಬು ಬೆಳೆಸಿಕೊಂಡಿರುವುದು ಹಾಸ್ಯಾಸ್ಪದ ಅನ್ನಿಸುತ್ತದೆ.

ದೇವೇಗೌಡರ ಕುಟುಂಬದ ವಿರುದ್ಧ ಕಾಂಗ್ರೆಸ್ ಷಡ್ಯಂತರ

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರ ವಾಗ್ದಾಳಿ

ಮೈಸೂರು: ಮಾಜಿ ಸಚಿವರೂ ಆದ ಶಾಸಕ ಎಚ್.ಡಿ.ರೇವಣ್ಣ ಅವರಿಗೆ ಜನಪ್ರತಿನಿಧಿಗಳ ನ್ಯಾಯಾಲಯ ಜಾಮೀನು ಮಂಜೂರು ಮಾಡಿರುವುದಕ್ಕೆ ಹರ್ಷ ವ್ಯಕ್ತಪಡಿಸಿರುವ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ದೇವೇಗೌಡರ ಕುಟುಂಬದ ಮೇಲೆ ಷಡ್ಯಂತ್ರ ನಡೆಯುವುದು ಇದೇ ಮೊದಲೇನಲ್ಲ. ಮೊದಲಿನಿಂದಲೂ ಇಂತಹವುಗಳನ್ನು ಎದುರಿಸಿಕೊಂಡು ಬಂದಿದೆ.

ಈ ಹಿಂದೆ ದೇವೇಗೌಡರ ಮೇಲೆ ಸಿಒಡಿ ತನಿಖೆ ನಡೆಸಿದ್ದರು. ಇದೆಲ್ಲವೂ ಕಾಂಗ್ರೆಸ್ ನಾಯಕರ ಷಡ್ಯಂತರ. ಇದಕ್ಕೆಲ್ಲಾ ಹೆದರಿ ಎಲ್ಲೂ ಓಡಿ ಹೋಗಲ್ಲ. ಕಾನೂನು ಹೋರಾಟ ಮಾಡಲಾಗುತ್ತದೆ ಎಂದು ಎಂಎಲ್‌ಸಿ ಸಿ.ಎನ್. ಮಂಜೇಗೌಡ ವಾಗ್ದಾಳಿ ನಡೆಸಿದ್ದಾರೆ.



ರೇವಣ್ಣ ಅವರಿಗೆ ಜಾಮೀನು ಸಿಗುವ ಮೂಲಕ ಸತ್ಯಕ್ಕೆ ಜಯ ದೊರಕಿದೆ. ಈ ಪ್ರಕರಣದಲ್ಲಿ ರೇವಣ್ಣ ಹಾಗೂ ದೇವೇಗೌಡರ ಕುಟುಂಬವನ್ನು ಹೇಗಾದರೂ ಮಾಡಿ ಸಿಲುಕಿಸಬೇಕು ಎಂದುಕೊಂಡಿದ್ದ ಸರ್ಕಾರದ ಮಹಾ ಸಂಚು ವಿಫಲವಾಗಿದೆ ಎಂದು ಕಿಡಿಕಾರಿದರು.

ಕಾಂಗ್ರೆಸ್ ನಾಯಕರು ತೀರ ಕೀಳು ಮಟ್ಟದ ರಾಜಕೀಯ ಮಾಡುತ್ತಿದ್ದಾರೆ. ತಮ್ಮ ಲೋಪಗಳನ್ನು ಮುಚ್ಚಿಕೊಳ್ಳುವ ಸಲುವಾಗಿ ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡಿದ್ದಾರೆ. ಮತದಾರರು ಇದಕ್ಕೆ ತಕ್ಕಪಾಠ ಕಲಿಸುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಬಕಾರಿ ನೀತಿ; ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಎಎಪಿಯನ್ನೇ ಆರೋಪಿಯನ್ನಾಗಿ ಮಾಡಲಾಗುವುದು: ದೆಹಲಿ ಹೈಕೋರ್ಟ್‌ಗೆ ಇಡಿ

ನವದೆಹಲಿ, ಮೇ 14– ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಆಮ್ ಆದ್ಮಿ ಪಕ್ಷವನ್ನೇ(ಎಎಪಿ) ಆರೋಪಿಯನ್ನಾಗಿ ಮಾಡುವುದಾಗಿ ಜಾರಿ ನಿರ್ದೇಶನಾಲಯ(ಇಡಿ) ಮಂಗಳವಾರ ದೆಹಲಿ ಹೈಕೋರ್ಟ್‌ಗೆ ತಿಳಿಸಿದ್ದು, ರಾಜಕೀಯ ಪಕ್ಷವೊಂದು ಪ್ರಕರಣದಲ್ಲಿ ಆರೋಪಿಯಾಗುತ್ತಿರುವುದು ಇದೇ ಮೊದಲು.

ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಮಾಜಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರ ಜಾಮೀನು ಅರ್ಜಿಗೆ ಇಡಿ ವಿರೋಧ ವ್ಯಕ್ತಪಡಿಸಿದೆ.



ಪ್ರಕರಣ ಸಂಬಂಧ ಸಲ್ಲಿಸಲಿರುವ ಮುಂದಿನ ಚಾರ್ಜ್‌ಶೀಟ್‌ನಲ್ಲಿ ಎಎಪಿಯನ್ನು ಸಹ–ಆರೋಪಿಯನ್ನಾಗಿ ಮಾಡಲಾಗುವುದು ಎಂದು ಸಿಸೋಡಿಯಾ ಅವರ ಜಾಮೀನು ಅರ್ಜಿಯ ಕುರಿತು ವಾದ ಆಲಿಸುತ್ತಿರುವ ನ್ಯಾಯಮೂರ್ತಿ ಸ್ವರಣಾ ಕಾಂತ ಶರ್ಮಾ ಅವರಿಗೆ ಇಡಿ ವಕೀಲರು ತಿಳಿಸಿದರು.

ಪ್ರಕರಣದಲ್ಲಿ ಚಾರ್ಜ್‌ಶೀಟ್ ದಾಖಲಿಸುವ ಪ್ರಕ್ರಿಯೆಯನ್ನು ವಿಳಂಬಗೊಳಿಸಲು ಆರೋಪಿಗಳು ಸಂಘಟಿತ ಪ್ರಯತ್ನಗಳನ್ನು ಮಾಡುತ್ತಿದ್ದಾರೆ ಎಂದು ತನಿಖಾ ಸಂಸ್ಥೆಯ ವಕೀಲರು ವಾದಿಸಿದರು.

ಅವರಿಗೆ ಜಾಮೀನು ಕೋರಿ ಅರ್ಜಿ ಸಲ್ಲಿಸಿರುವ ಸಿಸೋಡಿಯಾ ಪರ ವಕೀಲರು, ಅಕ್ರಮ ಹಣ ವರ್ಗಾವಣೆ ಮತ್ತು ಭ್ರಷ್ಟಾಚಾರ ಪ್ರಕರಣದಲ್ಲಿ ಇಡಿ ಮತ್ತು ಸಿಬಿಐ ಇನ್ನೂ ಹಲವು ಜನರನ್ನು ಬಂಧಿಸುತ್ತಿವೆ ಮತ್ತು ವಿಚಾರಣೆ ಶೀಘ್ರವಾಗಿ ಮುಗಿಸುವ ಪ್ರಶ್ನೆಯೇ ಇಲ್ಲ ಎಂದು ಹೇಳಿದರು.

ಕ್ಲಿಯರೆನ್ಸ್ ಸಿಗದೆ ನನೆಗುದಿಗೆ ಬಿದ್ದ ಬಿಡಿಎ ಫ್ಲಾಟ್‌ಗಳು, 800 ಕೋಟಿ ರೂ. ಸ್ಟಕ್!

ಬೆಂಗಳೂರು, ಮೇ 14– ಸೂಕ್ತ ಸೌಲಭ್ಯಗಳೊಂದಿಗೆ ಯೋಜನೆಗಳನ್ನು ಪೂರ್ಣಗೊಳಿಸಿದ್ದರೂ, ಸರ್ಕಾರದ ವಿವಿಧ ಇಲಾಖೆಗಳಿಂದ ಕ್ಲಿಯರೆನ್ಸ್ ಸಿಗದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) ತನ್ನ ಎರಡು ಪ್ರಮುಖ ಯೋಜನೆಗಳಾದ ಕೊಮ್ಮಘಟ್ಟ ಹಂತ–3 ಮತ್ತು ಬಿಡಿಎ ವಿಲ್ಲಾ ಹುಣ್ಣಿಗೆರೆ ಯೋಜನೆಯ ಫ್ಲಾಟ್‌ಗಳನ್ನು ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲ. ಹಲವು ತಿಂಗಳಿಂದ ಬಿಡಿಎಗೆ ಅಗತ್ಯ ಮಂಜೂರಾತಿ ನೀಡದ ಕಾರಣ ಸರ್ಕಾರದ ವಿವಿಧ ಇಲಾಖೆಗಳನ್ನು ಅಧಿಕಾರಿಗಳು ದೂರುತ್ತಿದ್ದಾರೆ. ಪರಿಣಾಮವಾಗಿ ಬಿಡಿಎ ಹೂಡಿಕೆ ಮಾಡಿದ 800 ಕೋಟಿ ರೂ. ನನೆಗುದಿಗೆ ಬಿದ್ದಿದೆ. ಕುಂಬಳಗೋಡಿನ ಕೊಮ್ಮಘಟ್ಟ ಹಂತ–3 ಯೋಜನೆಯು 2BHK ಮತ್ತು 3BHKಯ 600 ಫ್ಲಾಟ್‌ಗಳನ್ನು ಹೊಂದಿದೆ ಎಂದು ಬಿಡಿಎ ಮೂಲಗಳು ತಿಳಿಸಿವೆ. ಈ ಯೋಜನೆ ಪೂರ್ಣಗೊಂಡು ಒಂದು ವರ್ಷವಾಗಿದೆ. ಆದರೆ, ವಿದ್ಯುತ್ ತಪಾಸಣಾ ನಿರ್ದೇಶನಾಲಯದಿಂದ ಅನುಮತಿ ಮತ್ತು ಅಗ್ನಿಶಾಮಕ ಇಲಾಖೆ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನಿರಾಕ್ಷೇಪಣಾ ಪ್ರಮಾಣಪತ್ರವಿಲ್ಲದೆ ಹಂಚಿಕೆ ಪ್ರಕ್ರಿಯೆ ಮುಂದುವರಿಸಲು ನಮಗೆ ಸಾಧ್ಯವಾಗುತ್ತಿಲ್ಲ. ಇಲ್ಲಿ 500 ಕೋಟಿ ರೂ. ಹೂಡಿಕೆ ಮಾಡಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಡಿಇಎಲ್‌ಇಡಿ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು,ಮೇ 14– 2024–25ನೇ ಸಾಲಿನ ಡಿ.ಇಎಲ್.ಇಡಿಯ ಪ್ರವೇಶಾತಿ ಪ್ರಕ್ರಿಯೆಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ದ್ವಿತೀಯ ಪಿ.ಯು.ಸಿ. ಪರೀಕ್ಷಾ ಫಲಿತಾಂಶದಲ್ಲಿ ಸಾಮಾನ್ಯ ಹಾಗೂ ಇತರೆ ಅಭ್ಯರ್ಥಿಗಳು ಶೇ. 50 ರಷ್ಟು, ಪ.ಜಾತಿ ಅಥವಾ ಪ.ಪಂಗಡ ವಿದ್ಯಾರ್ಥಿಗಳು ಶೇ. 45 ರಷ್ಟು ಅಂಕಗಳನ್ನು ಪಡೆದಿರಬೇಕು. ಸಾಮಾನ್ಯ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕ 150 ಹಾಗೂ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ರೂ.50 ಆಗಿರುತ್ತದೆ.

ಪ.ಜಾತಿ ಅಥವಾ ಪ.ಪಂಗಡದ ವಿದ್ಯಾರ್ಥಿಗಳಿಗೆ ಯಾವುದೇ ದಾಖಲಾತಿ ಶುಲ್ಕ ಇರುವುದಿಲ್ಲ. ಸಾಮಾನ್ಯ ಹಾಗೂ ಇತರೆ ವರ್ಗದವರಿಗೆ ದಾಖಲಾತಿ ಶುಲ್ಕ ರೂ. 3015 ಇರುತ್ತದೆ. (ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಪ್ರತಿ ವರ್ಷವೂ ಸರ್ಕಾರದ ವತಿಯಿಂದ ಪ್ರೋತ್ಸಾಹ ಧನ ರೂ. 25000 ದೊರೆಯುತ್ತದೆ.) ಅರ್ಜಿ ಸಲ್ಲಿಸಲು ಜೂ.5 ಕೊನೆಯ ದಿನ. ಆಸಕ್ತರು ದೂ.ಸಂ: 9845621719, 9880977918, 9353326738, 9448611655 ಅನ್ನು ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವಾರಣಾಸಿಯಲ್ಲಿ ಪ್ರಧಾನಿ ಮೋದಿ ನಾಮಪತ್ರ ಸಲ್ಲಿಕೆ



ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆ!

ವಾರಣಾಸಿ, ಮೇ 14– 2024ರ ಲೋಕಸಭೆ ಚುನಾವಣೆಗೆ ಉತ್ತರ ಪ್ರದೇಶದ ವಾರಣಾಸಿ ಲೋಕಸಭಾ ಕ್ಷೇತ್ರದಿಂದ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ನಾಮಪತ್ರ ಸಲ್ಲಿಸಿದ್ದಾರೆ, ಮೂರನೇ ಅವಧಿಗೆ ದಾಖಲೆಯ ಅಂತರದಿಂದ ಗೆಲುವಿನ ಉತ್ಸಾಹದ ನಿರೀಕ್ಷೆಯಲ್ಲಿದ್ದಾರೆ. ಪ್ರಧಾನಿ ಮೋದಿಯವರು ಪ್ರತಿನಿಧಿಸುತ್ತಿರುವ ವಾರಣಾಸಿ ಕ್ಷೇತ್ರದಲ್ಲಿ ಜೂನ್ 1ರಂದು ಸಾರ್ವತ್ರಿಕ ಚುನಾವಣೆಯ ಏಳನೇ ಮತ್ತು ಕೊನೆಯ ಹಂತದ ಮತದಾನ ನಡೆಯಲಿದೆ.

ಸತತ ಮೂರನೇ ಬಾರಿಗೆ ತಮ್ಮ ಪಕ್ಷದ ಗೆಲುವಿನ ವಿಶ್ವಾಸವನ್ನು ವ್ಯಕ್ತಪಡಿಸಿದ ಪ್ರಧಾನಿ ಮೋದಿ, ಸಂಸತ್ತಿನ ಚುನಾವಣೆಯ ಫಲಿತಾಂಶ ಘೋಷಣೆ ನಂತರ ಮುಂದಿನ ತಿಂಗಳು ಜಿ–7 ಶೃಂಗಸಭೆಯಲ್ಲಿ ಭಾಗವಹಿಸುವುದಾಗಿ ಹೇಳಿದ್ದಾರೆ.

ತಮ್ಮ ಲೋಕಸಭಾ ಕ್ಷೇತ್ರವಾದ ವಾರಣಾಸಿಯಿಂದ ನಾಮಪತ್ರ ಸಲ್ಲಿಸುವ ಮುನ್ನ ವಿಶೇಷ ಸಂದರ್ಶನದಲ್ಲಿ ಪ್ರಧಾನಿ ಮೋದಿ, ನನಗೆ ಈಗಾಗಲೇ (ಜಿ–7ಗೆ) ಆಹ್ವಾನ ಬಂದಿದೆ. ನಾನು ಶೃಂಗಸಭೆಗೆ ತಯಾರಿ ನಡೆಸುತ್ತಿದ್ದೇನೆ. ಪ್ರಮಾಣ ವಚನ ಸ್ವೀಕಾರ ಸಮಾರಂಭದ ನಂತರ ಅಲ್ಲಿಗೆ ಹೋಗುತ್ತೇನೆ ಎಂದಿದ್ದಾರೆ.

ನಾಮಪತ್ರ ಸಲ್ಲಿಕೆಗೂ ಮುನ್ನ ಪ್ರಧಾನಿ ಮೋದಿ ಗಂಗಾನದಿಯ ದಶಾಶ್ವಮೇಧ ಘಾಟ್‌ನಲ್ಲಿ ಪ್ರಾರ್ಥನೆ ಸಲ್ಲಿಸಿದರು. ನಮೋ ಘಾಟ್‌ಗೆ ಕ್ರೂಸ್ ಹತ್ತುವ ಮುನ್ನ ಸ್ನಾನ ಮಾಡಿದರು. ಇಂದು ಗಂಗಾ ಸಪ್ತಮಿಯ ಶುಭದಿನವಾಗಿದ್ದು, ಘಾಟ್‌ನಲ್ಲಿ ಗಂಗಾ ಆರತಿ ಮಾಡಿದರು. ಕಾಲ ಭೈರವ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಿದರು.

ವಾರಣಾಸಿ ಕ್ಷೇತ್ರ ಭಾರತೀಯ ಜನತಾ ಪಕ್ಷ ಮತ್ತು ಪ್ರಧಾನಿ ಮೋದಿಯವರ ಭದ್ರಕೋಟೆಯಾಗಿದೆ. ಅವರು 2014 ಮತ್ತು 2019ರ ಲೋಕಸಭೆ ಚುನಾವಣೆಯಲ್ಲಿ ಎರಡು ಬಾರಿ ಗೆದ್ದಿದ್ದರು.

ವಾರಣಾಸಿಯಲ್ಲಿ ಪ್ರಧಾನಿ ಮೋದಿ ವಿರುದ್ಧ ಉತ್ತರ ಪ್ರದೇಶ ಕಾಂಗ್ರೆಸ್ ಮುಖ್ಯಸ್ಥ ಅಜಯ್ ರೈ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ. ಲೋಕಸಭೆಯಲ್ಲಿ ಅಜಯ್ ರೈ ಅವರು ಪ್ರಧಾನಿ ಮೋದಿ ಅವರನ್ನು ಎದುರಿಸುತ್ತಿರುವುದು ಇದು ಮೂರನೇ ಬಾರಿ.

2019ರ ಲೋಕಸಭಾ ಚುನಾವಣೆಯಲ್ಲಿ, ಪಿಎಂ ಮೋದಿ ಅವರು 6,74,664ಕ್ಕೂ ಹೆಚ್ಚು ಮತಗಳೊಂದಿಗೆ ಗೆದ್ದಿದ್ದರು. ಶೇಕಡಾ 63.6ರಷ್ಟು ಮತಗಳನ್ನು ಗಳಿಸಿದ್ದರು. 2014ರಲ್ಲಿ, ಪ್ರಧಾನಿ ಮೋದಿ ಗುಜರಾತ್‌ನ ವಡೋದರಾ ಮತ್ತು ಉತ್ತರ ಪ್ರದೇಶದ ವಾರಣಾಸಿ ಈ ಎರಡು ಲೋಕಸಭಾ ಸ್ಥಾನಗಳಿಗೆ ಸ್ಪರ್ಧಿಸಿದ್ದರು.



ಗಂಗಾ ಮಾತೆ ನನ್ನನ್ನು ದತ್ತು ತೆಗೆದುಕೊಂಡಿದ್ದಾಳೆ

ವಾರಣಾಸಿ, ಮೇ 14– ಗಂಗಾ ಸಪ್ತಮಿಯ ಶುಭ ಸಂದರ್ಭದಲ್ಲಿ ಗಂಗಾ ಆರತಿ ಮತ್ತು ಗಂಗೆಗೆ ಪ್ರಾರ್ಥನೆ ಸಲ್ಲಿಸಿದ ನಂತರ ಪ್ರಧಾನಿ, ನಮೋ ಘಾಟ್‌ಗೆ ವಿಹಾರ ಯಾತ್ರೆ ಕೈಗೊಂಡರು. ಈ ವೇಳೆ ಕ್ರೂಸ್‌ನಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ನೀಡಿದ ಸಂದರ್ಶನದಲ್ಲಿ, ಗಂಗಾ ಮಾತೆ ನನ್ನನ್ನು ದತ್ತು ಪಡೆದುಕೊಂಡಿದ್ದಾಳೆ. ವಾರಣಾಸಿಯೊಂದಿಗೆ 10 ವರ್ಷಗಳ ಬಾಂಧವ್ಯವನ್ನು ಹೊಂದಿದ್ದೇನೆ ಎಂದು ಹೇಳಿದರು. 10 ವರ್ಷಗಳ ಹಿಂದೆ ಕಾಶಿಗೆ ಬಂದಾಗ ಹೇಳಿದ್ದೆ, ಗಂಗಾ ಮಾತೆ ನನ್ನನ್ನು ಕರೆದಿದ್ದಾಳೆ ಎಂದರು. ಕಳೆದ 10 ವರ್ಷಗಳಲ್ಲಿ ಗಂಗೆ ನನ್ನನ್ನು ದತ್ತು ತೆಗೆದುಕೊಂಡಿದ್ದಾಳೆ, ಎಲ್ಲವನ್ನೂ ದೇವರ ಪೂಜೆ ಎಂದು ಪರಿಗಣಿಸಿ ಮಾಡುತ್ತೇನೆ. ಕಳೆದ 10 ವರ್ಷಗಳಲ್ಲಿ, ಕಾಶಿಯ ಜನರು ನನ್ನನ್ನು ಬನಾರಸಿಯನ್ನಾಗಿ ಮಾಡಿದ್ದಾರೆ. ನನ್ನ ಜವಾಬ್ದಾರಿಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ ಎಂದು ನಾನು ಭಾವಿಸುತ್ತೇನೆ. 140 ಕೋಟಿ ಜನತೆಗೆ ನನ್ನ ವಂದನೆಗಳು ಎಂದರು.

ಬೇರೆ ರೈಲಿಗೆ ಹತ್ತಿ ಇಳಿಯುವ ವೇಳೆ ಮಹಿಳೆ ಸಾವು; 8 ಲಕ್ಷ ಪರಿಹಾರ ನೀಡುವಂತೆ ಹೈಕೋರ್ಟ್ ಸೂಚನೆ



ಬೆಂಗಳೂರು, ಮೇ 14– ರೈಲ್ವೆ ಕ್ಲೈಮ್ಸ್ ಟ್ರಿಬ್ಯುನಲ್ ತೀರ್ಪನ್ನು ರದ್ದುಗೊಳಿಸಿದ ಕರ್ನಾಟಕ ಹೈಕೋರ್ಟ್, 2014ರ ಫೆಬ್ರವರಿಯಲ್ಲಿ ರೈಲು ಹತ್ತಲು ಯತ್ನಿಸಿ, ದುರಂತ ಸಾವು ಕಂಡ ಮಹಿಳೆಯ ಕುಟುಂಬಕ್ಕೆ ಎಂಟು ಲಕ್ಷ ರೂಪಾಯಿ ಪರಿಹಾರವನ್ನು ನೀಡಿದೆ.

ಜಯಮ್ಮ ಮತ್ತು ಆಕೆಯ ಸಹೋದರಿ ರತ್ನಮ್ಮ ಎಂಬುವವರು ಅಶೋಕಪುರಂ (ಮೈಸೂರು)ನಿಂದ ಹೋಗುವ ತಿರುಪತಿ ಪ್ಯಾಸೆಂಜರ್ ರೈಲಿನ ಬದಲು ಟುಟಿಕೋರಿನ್ ಎಕ್ಸ್‌ಪ್ರೆಸ್ ರೈಲು ಹತ್ತಿದ್ದಾರೆ. ರೈಲು ಚಲಿಸಲು ಪ್ರಾರಂಭಿಸುತ್ತಿದ್ದಂತೆ ತಮ್ಮ ತಪ್ಪಿನ ಅರಿವಾಗಿ, ಗಾಬರಿಗೊಂಡು ರೈಲಿನಿಂದ ಇಳಿಯಲು ಪ್ರಯತ್ನಿಸಿದ್ದಾರೆ. ಈ ವೇಳೆ ಜಯಮ್ಮ ಪ್ಲಾಟ್‌ಫಾರ್ಮ್‌ನಲ್ಲಿ ಬಿದ್ದು, ಗಂಭೀರವಾಗಿ ಗಾಯಗೊಂಡಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರಂಭದಲ್ಲಿ, ರೈಲ್ವೆ ಕ್ಲೈಮ್ಸ್ ಟ್ರಿಬ್ಯುನಲ್, ಮುಂದಿನ ನಿಲ್ದಾಣದವರೆಗೆ ಪ್ರಯಾಣವನ್ನು ಮುಂದುವರಿಸುವುದು ಅಥವಾ ಅಲರಾಂ ಸರಪಳಿಯನ್ನು ಎಳೆಯುವುದು ಮುಂತಾದ ಲಭ್ಯವಿರುವ ಆಯ್ಕೆಗಳನ್ನು ಬಳಸಿಕೊಳ್ಳುವಲ್ಲಿ ಜಯಮ್ಮ ವಿಫಲರಾಗಿದ್ದಾರೆ ಎಂದು ಉಲ್ಲೇಖಿಸಿ, ಕುಟುಂಬದ ಅರ್ಜಿಯನ್ನು ತಿರಸ್ಕರಿಸಿತ್ತು.

ಅಲ್ಲದೆ, ಭಾರತೀಯ ರೈಲ್ವೆ ಕಾಯ್ದೆಯ ಸೆಕ್ಷನ್ 124–ಎ ಅಡಿಯಲ್ಲಿ ಜಯಮ್ಮ ಅವರ ಸಾವನ್ನು 'ಸ್ವಯಂ–ಘೋಷಿತ ಗಾಯ' ಎಂದು ಪರಿಗಣಿಸಿತು. ಆ ಮೂಲಕ ಪರಿಹಾರವನ್ನು ಟ್ರಿಬ್ಯುನಲ್ ನಿರಾಕರಿಸಿತು

ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರು ನ್ಯಾಯಮಂಡಳಿಯ ವ್ಯಾಖ್ಯಾನವನ್ನು ಒಪ್ಪಲಿಲ್ಲ. ಸುಪ್ರೀಂಕೋರ್ಟ್ ದೃಢಪಡಿಸಿದಂತೆ ಜಯಮ್ಮ ಅವರು ರೈಲ್ವೆ ಪ್ರಯಾಣಿಕರಾಗಿದ್ದು, ಅವರ ಸಾವು 'ಅಹಿತಕರ ಘಟನೆಯಿಂದ' ಸಂಭವಿಸಿದೆ ಎಂದು ಒತ್ತಿ ಹೇಳಿದರು. ರೈಲ್ವೆ ಟ್ರಿಬ್ಯುನಲ್ ಸೆಕ್ಷನ್ 124–ಎ ಮೇಲೆ ಅವಲಂಬಿತವಾಗಿದ್ದು, ಈ ಪ್ರಕರಣದಲ್ಲಿ ಅದನ್ನು ತಪ್ಪಾಗಿ ಅನ್ವಯಿಸಲಾಗಿದೆ ಎಂದು ನ್ಯಾಯಾಧೀಶರು ಹೇಳಿದರು. ಪರಿಣಾಮವಾಗಿ, ನ್ಯಾಯಾಲಯವು ಇತ್ತೀಚೆಗೆ ಶೇ.7ರಷ್ಟು ಬಡ್ಡಿಯೊಂದಿಗೆ ನಾಲ್ಕು ಲಕ್ಷ ರೂ. ಪರಿಹಾರ ಪಾವತಿಸಲು ರೈಲ್ವೆಗೆ ಆದೇಶ ನೀಡಿತು. ಕುಟುಂಬಕ್ಕೆ ನೀಡಲಾಗುವ ಅಂತಿಮ ಮೊತ್ತವು ಬಡ್ಡಿ ಸೇರಿದಂತೆ ಎಂಟು ಲಕ್ಷಕ್ಕಿಂತ ಕಡಿಮೆಯಿಲ್ಲ ಎಂದು ಖಚಿತಪಡಿಸಿತು.

ವಾರ ಕಾಲ ಬಿರುಗಾಳಿ ಸಹಿತ ಮಳೆ

ಮೈಸೂರು, ಮೇ 14(ಎಸ್‌ಬಿಡಿ)– ಭಾರತೀಯ ಹವಾಮಾನ ಇಲಾಖೆ ಪ್ರಕಾರ ಹಳೇ ಮೈಸೂರು ಭಾಗದಲ್ಲಿ ಇನ್ನೂ ಒಂದು ವಾರ ಬಿರುಗಾಳಿ ಸಹಿತ ಮಳೆಯಾಗಲಿದೆ. ಮೈಸೂರು, ಕೊಡಗು, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಯಲ್ಲಿ ಗಂಟೆಗೆ 40–50 ಕಿ.ಮೀ. ವೇಗದಲ್ಲಿ ಗಾಳಿ ಬೀಸಲಿದ್ದು, ಗುಡುಗು ಸಹಿತ ಮಳೆಯಾಗಲಿದೆ. ಮೇ 16 ಹಾಗೂ 17ರಂದು ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಪ್ರಕಟಣೆ ತಿಳಿಸಿದೆ.

ಸಾರ್ವಜನಿಕ ಪ್ರಕಟಣೆ
ಸೇಲ್ ಡೀಡ್ ದಾಖಲೆಗಳು ಕಳೆದಿದೆ

ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಬೊಮ್ಮೂರು ಅಗ್ರಹಾರದಲ್ಲಿರುವ ಹಂಸ ಹೋಲಿ ಸ್ಟಿಕ್ ಹರ್ಮಿಟೇಜ್ ಪ್ರೈವೇಟ್ ಲಿಮಿಟೆಡ್ ಒಡೆತನದ ಆಸ್ತಿಗೆ ಸಂಬಂಧಿಸಿದ ನಿರ್ಣಾಯಕ ದಾಖಲೆಗಳು, ಆಸ್ತಿ ಐಡಿ ಸಂಖ್ಯೆ: 15210 0700300320080 ಮತ್ತು ಆಸ್ತಿ ಸಂಖ್ಯೆಗಳು: 88/C-88/C2-88/C3-88/CS-88/C4-88/C6-88/C7-88 ವಿಸ್ತೀರ್ಣ 1555.49 ಚ.ಮೀ., ಪ್ರಸ್ತುತ ಕಳೆದಿದೆ.

ಮೇಲೆ ತಿಳಿಸಿದ ಆಸ್ತಿಯನ್ನು ಕಾನೂನು ಬದ್ಧವಾಗಿ ಕೆ.ಕೆ. ಸುಬ್ರಮಣಿ S/o ಲೇಟ್॥ ಎಂ.ಎಸ್. ಕೃಷ್ಣೋಜಿ ರಾವ್, ಕಾವೇರಿ ಸನ್ನಿಧಿ, ಬೊಮ್ಮೂರು ಅಗ್ರಹಾರ ಗ್ರಾಮ, ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲೂಕು, ಇಲ್ಲಿ ವಾಸವಿರುವ ಇವರು 12ನೇ ಏಪ್ರಿಲ್ 2019 ರಂದು ಶ್ರೀರಂಗಪಟ್ಟಣ ಉಪ ನೋಂದಣಾ ಧಿಕಾರಿಗಳ ಕಛೇರಿಯಲ್ಲಿ ಪಡೆದಿರುತ್ತಾರೆ.

ಮೇಲಿನ ದಾಖಲೆಗಳನ್ನು ಬಳಸಿಕೊಳ್ಳುವ ಅಥವಾ ಕುಶಲತೆಯಿಂದ ಮಾಡುವ ಯಾವುದೇ ಪ್ರಯತ್ನಗಳನ್ನು ಶೂನ್ಯ ಮತ್ತು ಅನೂರ್ಜಿತಗೊಳಿಸುತ್ತದೆ ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ. ಮೂಲ ದಾಖಲೆಗಳಿಲ್ಲದೆ ಆಸ್ತಿ ವಹಿವಾಟಿನ ದೃಢೀಕರಣವನ್ನು ಖಾತರಿಪಡಿಸಲಾಗುವುದಿಲ್ಲ. ಆದ್ದರಿಂದ, ಮೇಲೆ ತಿಳಿಸಲಾದ ಆಸ್ತಿಗೆ ಸಂಬಂಧಿಸಿದ ಮೂಲ ದಾಖಲೆಗಳನ್ನು ಹೊಂದಿರುವ ಯಾರಾದರೂ ದಯಮಾಡಿ ಅವುಗಳನ್ನು ಈ ಕೆಳಗಿನ ವಿಳಾಸಕ್ಕೆ ಸಾಧ್ಯವಾದಷ್ಟು ಬೇಗ ಹಿಂತಿರುಗಿಸಲು ನಾವು ಕೋರುತ್ತೇವೆ.

ರಾಕೇಶ ಶಿವರಾಮ, ಹಂಸ ಹೋಲಿಸ್ಟಿಕ್ ಹರ್ಮಿಟೇಜ್ ಪ್ರೈವೇಟ್ ಲಿಮಿಟೆಡ್ 76, ಕಾವೇರಿ ಸನ್ನಿದಿ, ಬೊಮ್ಮೂರು ಅಗ್ರಹಾರ, ಶ್ರೀರಂಗಪಟ್ಟಣ 571438 ಮಂಡ್ಯ
ಮೊ:9591497095

ಮೈಸೂರು ಮಿತ್ರ – ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ನಿಧನ



ಕೃಷ್ಣೇಗೌಡ ಕೆಂಬಿ, ಕೂಗನಹಳ್ಳಿ

ಇವರು ದಿ: 14.05.2024 ಮಂಗಳವಾರ ದೈವಾಧೀನರಾಗಿದ್ದು, ಮೃತರ ಅಂತ್ಯಕ್ರಿಯೆಯನ್ನು ದಿ:15.05.2024 ಬುಧವಾರ ಬೆಳಗ್ಗೆ 11 ಗಂಟೆಗೆ ಕೂಗನಹಳ್ಳಿ ಗ್ರಾಮದಲ್ಲಿ ನೆರವೇಸಲಾಗುವುದು.
ದುಃಖತಪ್ತರು: ಮೃತರ ಪತ್ನಿ, ಮಕ್ಕಳು ಹಾಗೂ ಅಳಿಯಂದಿರು

ಬೆಂಗಳೂರು–ಮೈಸೂರು ಹಳೇ ಹೆದ್ದಾರಿ ಕೆಲಕಾಲ ಜಲಾವೃತ...



ಸೋಮವಾರ ರಾತ್ರಿ ಸುರಿದ ಭಾರಿ ಮಳೆಯಿಂದ ಮೈಸೂರು–ಬೆಂಗಳೂರು ಹಳೇ ಹೆದ್ದಾರಿಯ ಶ್ರೀರಂಗಪಟ್ಟಣದ ಬಳಿ ಭಾರಿ ಪ್ರಮಾಣದಲ್ಲಿ ನೀರು ನಿಂತು ವಾಹನ ಸವಾರರು ಪರದಾಡುವಂತಾಯಿತು. ಮೈಸೂರಿನಿಂದ ಬೆಂಗಳೂರು ಕಡೆಗೆ ತೆರಳುವ ಮಾರ್ಗದಲ್ಲಿ ಈ ಪ್ರಮಾಣದ ನೀರು ನಿಂತಿತ್ತು. ರಾತ್ರಿಯಿಂದ ಬೆಳಗ್ಗೆವರೆಗೂ ವಾಹನಗಳು ಸಂಚರಿಸಲು ಪ್ರಯಾಸ ಪಡಬೇಕಾಯಿತು. ವಿಷಯ ತಿಳಿದ ಶ್ರೀರಂಗಪಟ್ಟಣ ಪುರಸಭೆ ಅಧಿಕಾರಿಗಳು ತಕ್ಷಣ ಜೆಸಿಬಿ ಸಹಾಯದಿಂದ ನೀರು ಹರಿದು ಹೋಗಲು ಉಂಟಾಗಿದ್ದ ತಡೆಯನ್ನು ತೆರವುಗೊಳಿಸಿದ ನಂತರ ನೀರು ಹರಿದುಹೋಗಿ ಸುಗಮ ಸಂಚಾರಕ್ಕೆ ಅನುಕೂಲವಾಯಿತು.

ಚಂದ್ರವನ ಆಶ್ರಮದಲ್ಲಿ ಯೋಗೋತ್ಸವ ಯಶಸ್ವಿ



ಪ್ರತಿಯೊಬ್ಬರ ಬದುಕಿನಲ್ಲೂ ಯೋಗ ನಿರಂತರ ಅಭ್ಯಾಸವಾಗಬೇಕು: ಡಾ.ಕುಮಾರ

ಶ್ರೀರಂಗಪಟ್ಟಣ, ಮೇ 14– ಯೋಗಾಭ್ಯಾಸದಿಂದ ಅನೇಕ ರೋಗಗಳನ್ನು ದೂರವಿಡಬಹುದಾಗಿದ್ದು, ಪ್ರತಿಯೊಬ್ಬರ ಬದುಕಿನಲ್ಲೂ ಯೋಗವು ನಿರಂತರ ಅಭ್ಯಾಸವಾಗಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.



ಶ್ರೀರಂಗಪಟ್ಟಣದ ಡಿ.ಎಂ.ಎಸ್ ಚಂದ್ರವನದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವತಿಯಿಂದ ಆಯೋಜಿಸಲಾಗಿದ್ದ ಯೋಗೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ, ಯೋಗದ ಪಿತಾಮಹ ಪತಂಜಲಿ ಮಹರ್ಷಿ ಮತ್ತು ಧನ್ವಂತರಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು.

ಜೂನ್ 21ರಂದು ವಿಶ್ವ ಯೋಗ ದಿನಾಚರಣೆಯನ್ನು ಆಚರಿಸಲಾಗುವುದು. ಮುಂಚಿತವಾಗಿಯೇ ಇಂದು ಯೋಗೋತ್ಸವ ಕಾರ್ಯಕ್ರಮವನ್ನು ಆಚರಿಸುತ್ತಿದ್ದು, ಪ್ರತಿಯೊಬ್ಬರೂ ಕೂಡ ಯೋಗದ ಬಗ್ಗೆ ಅಭಿರುಚಿಯನ್ನು ಅಳವಡಿಸಿಕೊಳ್ಳುವ ಮೂಲಕ ತಮ್ಮ ಬದುಕಿನ ಭಾಗವನ್ನಾಗಿಸಿಕೊಳ್ಳಬೇಕು ಎಂದರು.

ಭಾರತ ದೇಶ ಯೋಗದಲ್ಲಿ ಇಡೀ ವಿಶ್ವಕ್ಕೆ ಗುರುವಾಗಿದೆ. ಯೋಗವು ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದ್ದು, ದೇಹ, ಮನಸ್ಸು ಮತ್ತು ಆತ್ಮವನ್ನು ಒಂದುಗೂಡಿಸುವ ಪ್ರಕ್ರಿಯೆಯೇ ಯೋಗವಾಗಿದೆ. ಪ್ರತಿಯೊಬ್ಬರು ಮನೆಯಲ್ಲಿ ಯೋಗಾಭ್ಯಾಸ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ದೇಶ ಆಧುನಿಕ, ಯಾಂತ್ರಿಕ ಹಾಗೂ ತಾಂತ್ರಿಕವಾಗಿ ಮುಂದೆ ಇದ್ದು, ಪ್ರತಿಯೊಬ್ಬರೂ ಒತ್ತಡದ ಜೀವನವನ್ನು ನಡೆಸುತ್ತಿದ್ದಾರೆ. ಯೋಗವನ್ನು ರೂಢಿಸಿಕೊಳ್ಳುವ ಮೂಲಕ ಒತ್ತಡವನ್ನು ದೂರ ಮಾಡಬಹುದು. ಒಳ್ಳೆಯ ಆಲೋಚನೆ ಹಾಗೂ ಒಳ್ಳೆಯ ಕಾರ್ಯಗಳನ್ನು ಮಾಡಲು ಯೋಗದಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ಬೇಬಿಮಠ ಮತ್ತು ಚಂದ್ರವನ ಆಶ್ರಮದ ಪೀಠಾಧಿಪತಿ ಶ್ರೀ ತ್ರಿನೇತ್ರ ಮಹಂತ ಶಿವಯೋಗಿಸ್ವಾಮಿ ಮಾತನಾಡಿ, ಯೋಗವೆಂದರೆ ತಮ್ಮ ಯೋಗ್ಯತೆಗಳನ್ನು ಹೆಚ್ಚು ಮಾಡುವ ಅಂಶ. ಯೋಗದಲ್ಲಿ ಆರೋಗ್ಯವಿದೆ, ಆರೋಗ್ಯದಿಂದ ಉತ್ತಮ ಬದುಕು ನಡೆಸಲು ಸಾಧ್ಯ. ಕೋವಿಡ್ ಸಂದರ್ಭದಲ್ಲಿ ಅನೇಕ ಜನರು ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದಾಗ, ಪ್ರಾಣಾಯಾಮವನ್ನು ಮಾಡುವ ಮೂಲಕ ಅನೇಕ ಜನರು ಗುಣಮುಖರಾಗಿದ್ದಾರೆ ಎಂದರು.

ಯೋಗವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವವರು ಸಾಧಕರಾಗುತ್ತಾರೆ. ಯಾರು ಯೋಗವನ್ನು ಅಳವಡಿಸಿಕೊಳ್ಳುವುದಿಲ್ಲವೋ ಅವರು ಬಾಧಕರಾಗುವರು. ಯೋಗವೆಂಬುದು ಒಂದು ಸಂಪತ್ತಾಗಿದ್ದು, ಅದನ್ನು ಯಾರು ಇಟ್ಟುಕೊಳ್ಳುತ್ತಾರೋ ಅವರು ಕಡೆಯವರೆಗೂ ಆರೋಗ್ಯದಲ್ಲಿ ಶ್ರೀಮಂತರಾಗಿರುತ್ತಾರೆ. ಯಾರು ಯೋಗದ ಸಂಪತ್ತನ್ನು ಇಟ್ಟುಕೊಳ್ಳುವುದಿಲ್ಲವೋ ಅವರು ಎಷ್ಟೇ ಹಣವಂತರಾದರೂ ಆರೋಗ್ಯದ ವಿಷಯದಲ್ಲಿ ಬಡವರಾಗಿರುತ್ತಾರೆ. ಆದ್ದರಿಂದ ಪ್ರತಿಯೊಬ್ಬರೂ ಯೋಗ ಮಾಡುವುದು ಉತ್ತಮ ಎಂದು ಹೇಳಿದರು.

ವೇದಿಕೆಯ ಮೇಲಿದ್ದ ಎಲ್ಲಾ ಅತಿಥಿಗಣ್ಯರು ತಾಡಸನ, ಅರ್ಧ ಚಕ್ರಾಸನ, ಉದ್ದಂಡಾಸನ, ಪದ್ಮಾಸನ, ಪರ್ವತಾಸನ, ನಾಡಿ ಶೋಧನಾ ಪ್ರಾಣಾಯಾಮ ಯೋಗಗಳನ್ನು ಮಾಡುವ ಮೂಲಕ ಕಾರ್ಯಕ್ರಮಕ್ಕೆ ಮೆರಗು ತಂದರು. 10ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ನಡೆದ ಯೋಗೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಶಾಲಾ–ಕಾಲೇಜು ವಿದ್ಯಾ ಸಂಸ್ಥೆಗಳಿಂದ ಹಲವಾರು ವಿದ್ಯಾರ್ಥಿಗಳು ಯೋಗದಲ್ಲಿ ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ಜಾಥಾ ಮೆರವಣಿಗೆ ಮೂಲಕ ಯೋಗದ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಡಾ.ಅಹಲ್ಯಾ ಎಸ್, ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್. ನಾಗರಾಜು, ಎಸ್ಪಿ ಎನ್.ಯತೀಶ್, ಜಿ.ಪಂ. ಸಿಇಓ ಶೇಕ್ ತನ್ವೀರ್ ಆಸಿಫ್, ಜಿಲ್ಲಾ ಆಯುಷ್ ಅಧಿಕಾರಿ ಡಾ.ಸೀತಾಲಕ್ಷ್ಮಿ, ಮೈಸೂರಿನ ಜಿ.ಎ.ಆರ್.ಸಿ.ಯ ಸಹಾಯಕ ನಿರ್ದೇಶಕ ಡಾ.ಲಕ್ಷ್ಮೀನಾರಾಯಣ ಶೆಣಯ್, ಪುರಸಭೆಯ ಮುಖ್ಯ ಅಧಿಕಾರಿ ಎಂ.ರಾಜಣ್ಣ, ತ್ರಿನೇತ್ರ ಅಂತರಾಷ್ಟ್ರೀಯ ಯೋಗ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಎನ್. ನಾಗೇಶ್, ಪ್ರಾಂಶುಪಾಲೆ ಡಾ.ಮಧುಮತಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಭಗೀರಥ ಮಹರ್ಷಿಯ ಮೌಲ್ಯ ಅಳವಡಿಸಿಕೊಳ್ಳಿ



ಮಂಡ್ಯ, ಮೇ 14– ಭಗೀರಥ ಮಹರ್ಷಿಗಳು ಹಿಂದಿನ ಕಾಲದ ಸಮಾಜದಲ್ಲಿ ಮಹಾನ್ ಚಿಂತಕರಾಗಿದ್ದವರು. ಅವರ ಆದರ್ಶ ಹಾಗೂ ಮೌಲ್ಯಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಛೇರಿಯ ಸಭಾಂಗಣದಲ್ಲಿ ನಡೆದ ಭಗೀರಥ ಮಹರ್ಷಿ ಜಯಂತಿ ಕಾರ್ಯಕ್ರಮದಲ್ಲಿ ಭಗೀರಥ ಮಹರ್ಷಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದ ಅವರು, ಇಂದು ನಾಡಿನ ಮಹಾಪುರುಷರಾದ ಭಗೀರಥ ಮಹರ್ಷಿಯ ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ. ಗಂಗೆಯನ್ನು ತನ್ನ ತಪಸ್ಸಿನ ಫಲವಾಗಿ ಭೂ ಲೋಕಕ್ಕೆ ಕರೆ ತಂದಂತಹ ಮಹಾನ್ ಪುರುಷ ಭಗೀರಥ ಮಹರ್ಷಿ ಎಂಬ ಐತಿಹಾಸಿಕ ಹಿನ್ನೆಲೆಯಿದೆ. ಅಂದಿನ ಸಮಾಜಕ್ಕೆ ಸಾಕಷ್ಟು ಕೊಡುಗೆಯನ್ನು ಅವರು ನೀಡಿದ್ದು, ಭಗೀರಥರ ನಿಷ್ಠೆ, ದೃಢವಿಶ್ವಾಸ, ಛಲ ಹಾಗೂ ಸತತ ಪ್ರಯತ್ನದ ಗುಣವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಎಲ್ಲರ ಜೀವನದಲ್ಲಿ ಪ್ರಯತ್ನ ಎಂಬುದು ನಿರಂತರವಾಗಿರಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು ಮಾತನಾಡಿ, ಭಗೀರಥ ಮಹರ್ಷಿಯು ಒಳ್ಳೆಯ ತಪಸ್ಸು ಹಾಗೂ ತಮ್ಮ ಸತತ ಪ್ರಯತ್ನಗಳ ಮೂಲಕ ಗಂಗೆಯನ್ನು ಭೂಲೋಕಕ್ಕೆ ತಂದು, ಇಡೀ ಭರತ ಖಂಡವನ್ನು ಪವಿತ್ರ ಭೂಮಿಯನ್ನಾಗಿ ಮಾಡಿದ್ದಾರೆ. ಈ ಮೂಲಕ ಅಂದಿನ ಕೃಷಿಕ ಸಮಾಜದ ಉದ್ಧಾರಕ್ಕೆ ಕಾರಣಕರ್ತರಾಗಿದ್ದಾರೆ ಎಂದು ಪ್ರಸಿದ್ಧ ಪುರಾಣಗಳಿಂದ ತಿಳಿಯಬಹುದು. ಪ್ರಸ್ತುತ ಗಂಗಾ ನದಿಯು ಜಗತ್ತಿನ ಶ್ರೇಷ್ಠ ನದಿಯಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ವಿವಿಧ ಸಂಘ ಸಂಸ್ಥೆಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ಸೊಳ್ಳೇಪುರದಲ್ಲಿ ಕರಿಬೀರೇಶ್ವರ ಮುತ್ತಿನ ಪಲ್ಲಕ್ಕಿ ಉತ್ಸವ



ಕಿಕ್ಕೇರಿ, ಮೇ 14– ಹೋಬಳಿಯ ಸೊಳ್ಳೇಪುರ ಗ್ರಾಮದಲ್ಲಿ ಅರೆಕಲ್ಲಮ್ಮ ದೇವರ ದೊಡ್ಡಹಬ್ಬ ಕರಿಬೀರೇಶ್ವರ ದೇವರ ಮುತ್ತಿನ ಪಲ್ಲಕ್ಕಿ ಉತ್ಸವ ಗ್ರಾಮ ಪ್ರವೇಶದೊಂದಿಗೆ ಸಂಭ್ರಮ ಸಡಗರದಿಂದ ಆರಂಭವಾಯಿತು.

ಸೋಮವಾರ ಆರಂಭವಾಗಿ ಮೂರು ದಿನಗಳವರೆಗೆ ವಿಜೃಂಭಣೆಯಿಂದ ಉತ್ಸವ ನಡೆಯಲಿದ್ದು ಇಡೀ ಊರಿನ ಗ್ರಾಮಸ್ಥರು ಅತಿಥಿಗಳನ್ನು ಬರಮಾಡಿಕೊಂಡು ಸತ್ಕಾರ ಮಾಡಲು ತುದಿಗಾಲಲ್ಲಿ ನಿಂತಿದ್ದರು. 10 ವರ್ಷಕ್ಕೊಮ್ಮೆ ನಡೆಯುವ ಅರೆಕಲ್ಲಮ್ಮದೇವಿಯ ಹಬ್ಬಕ್ಕೆ ಕೋಟಿ ರೂ.ಗಳಿಗೂ ಅಧಿಕವಾಗಿ ಹಣ ವೆಚ್ಚ ಮಾಡಲಾಗುತ್ತದೆ. ಜಿಲ್ಲೆಗೆ ಬಲು ದೊಡ್ಡ ಹಬ್ಬದಂತೆ ಆಚರಿಸುವ ರೈತಾಪಿ ಜನತೆ ದೇವಿಗೆ ವಿಶೇಷವಾಗಿ ಕುರಿ, ಮೇಕೆ ಬಲಿ ನೀಡಿ ಆರಾಧಿಸುವ ಹಬ್ಬವಾಗಿದೆ. ಇಡೀ ಗ್ರಾಮದ ಜನತೆ ಪ್ರತ್ಯೇಕವಾಗಿ ಹಣವನ್ನು ಕೂಡಿಟ್ಟು ಆಚರಿಸುವ ಹಬ್ಬಕ್ಕೆ ದೂರದ ಊರುಗಳಿಂದ ನೆಂಟರಿಷ್ಟರು, ಸ್ನೇಹಿತರು ಆಗಮಿಸುತ್ತಿರುವುದು ಕಂಡು ಬಂದಿತು.

ಮಳೆಯ ಆರ್ಭಟದಲ್ಲಿ ಕರಿಬೀರೇಶ್ವರ ದೇವರ ಮೆರವಣಿಗೆ ನಡೆಸಲಾಯಿತು. ಹಾಸನದ ದುದ್ದ ಬಳಿಯಿಂದ ದೇವರ ಉತ್ಸವ ಮೂರ್ತಿಯನ್ನು ಅಡ್ಡಪಲ್ಲಕ್ಕಿಯೊಂದಿಗೆ ತರಲಾಯಿತು. ತದನಂತರ ಗ್ರಾಮದಲ್ಲಿ ಪೂಜಿಸಿ ಮುತ್ತಿನ ಪಲ್ಲಕ್ಕಿ ಮೇಲೆ ಕೂರಿಸಲಾಯಿತು. ದೇವರಿಗೆ ಹೆಜ್ಜೆಗೊಂದು ಈಡು ಗಾಯಿ ಒಡೆಯಲಾಯಿತು. ಮಂಗಳವಾದ್ಯ, ಬಾಣ ಬಿರುಸುವಿನೊಂದಿಗೆ ಗ್ರಾಮದಲ್ಲಿ ಮೆರವಣಿಗೆ ಮಾಡಲಾಯಿತು. ದೇವರ ಭಂಟರಾದ ಸೋಮದೇವರ ಕುಣಿತ ಆಕರ್ಷಿಸಿತು.

ದೇವರ ಒಕ್ಕಲಿನವರು ಗದ್ದುಗೆ ನಿರ್ಮಿಸಿಕೊಂಡು ಕುರಿ, ಮೇಕೆ ಬಲಿ ನೀಡಿ ಇಷ್ಟಾರ್ಥ ಸಿದ್ಧಿ, ಸಮಗ್ರವಾಗಿ ಮಳೆ, ಬೆಳೆ ಸಿಗಲು ಪ್ರಾರ್ಥಿಸಿದರು. ಮಂಗಳವಾರ ಬೆಳಿಗ್ಗೆ ಕರಿಬೀರೇಶ್ವರ ದೇವರಿಗೆ ಮಡಿಲುತುಂಬಿ ಸ್ವಸ್ಥಾನಕ್ಕೆ ಅರ್ಚಕರೊಂದಿಗೆ ಬೀಳ್ಕೊಡುಗೆ ನೀಡಲಾಯಿತು. ಗ್ರಾಮಸ್ಥರು ಪಕ್ಷಬೇಧ ಮರೆತು ಒಗ್ಗಟ್ಟಿನಿಂದ ದೇವರಿಗೆ ಹಣ್ಣು, ಕಾಯಿ ಅರ್ಪಿಸಿ ಆರತಿ ಬೆಳಗಿ ಸಂಭ್ರಮದಿಂದ ಬರಮಾಡಿಕೊಂಡರು.

ಇಂದಿನಿಂದ ನೀರು ಸರಬರಾಜು ವ್ಯತ್ಯಯ

ಮಂಡ್ಯ, ಮೇ 14– ಮಂಡ್ಯ ನಗರ ನೀರು ಸರಬರಾಜು ವ್ಯವಸ್ಥೆ ನಿರ್ವಹಣೆಯಡಿ ಶ್ರೀರಂಗಪಟ್ಟಣ ಸಮೀಪವಿರುವ ಮೂಲಸ್ಥಾವರದ ಹತ್ತಿರ ಜೋರು ಮಳೆ ಗಾಳಿಯಿಂದಾಗಿ ಕೆಇಬಿ ವತಿಯಿಂದ ಅಳವಡಿಸಲಾಗಿದ್ದ ವಿದ್ಯುತ್ ಕೇಬಲ್ ದುರಸ್ಥಿಗೊಂಡಿರುವುದರಿಂದ ಮೂಲಸ್ಥಾವರಕ್ಕೆ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಆದುದರಿಂದ ಮೇ 14 ರಂದು ನಿಗದಿತ ಪ್ರಮಾಣದಲ್ಲಿ ಮಂಡ್ಯ ನಗರಕ್ಕೆ ನೀರನ್ನು ಪಂಪು ಮಾಡಲು ಸಾಧ್ಯವಾಗುವುದಿಲ್ಲ. ಮಂಡ್ಯ ನಗರದ ಸಾರ್ವಜನಿಕರಿಗೆ ಮೇ 15 ಮತ್ತು 16 ರಂದು ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ನೀರು ಬಂದ ವೇಳೆ ಶೇಖರಿಸಿಟ್ಟುಕೊಂಡು ಜಲಮಂಡಳಿಯೊಂದಿಗೆ ಸಹಕರಿಸಬೇಕೆಂದು ಮಂಡ್ಯ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೇಸ್ ಕೋರ್ಸ್ ಜಿಎಸ್‌ಟಿ ಹೆಚ್ಚಳ; ಸುಪ್ರೀಂ ಮೊರೆ ಹೋಗಲು ತೀರ್ಮಾನ



ಮೈಸೂರು, ಮೇ 14– ರೇಸ್ ಕೋರ್ಸ್‌ಗೆ ಸಂಬಂಧಪಟ್ಟಂತೆ ಜಿಎಸ್‌ಟಿ ಹೆಚ್ಚಳ ಮಾಡಿರುವುದರ ವಿರುದ್ಧ ಸುಪ್ರೀಂಕೋರ್ಟ್‌ಗೆ ರಿಟ್ ಸಲ್ಲಿಸಲು ತೀರ್ಮಾನಿಸಲಾಗಿದೆ.

ಊಟಿಯ ಖಾಸಗಿ ಹೋಟೆಲ್‌ನಲ್ಲಿ ಟರ್ಫ್ ಅಥಾರಿಟಿ ಆಫ್ ಇಂಡಿಯಾ ಅಧ್ಯಕ್ಷರೂ ಆದ ಮೈಸೂರು ರೇಸ್ ಕ್ಲಬ್ ಅಧ್ಯಕ್ಷ ಕೆ.ಎಂ.ಚಂದ್ರೇಗೌಡ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು.

ರೇಸ್ ಕೋರ್ಸ್‌ಗೆ ಸಂಬಂಧಿಸಿದಂತೆ ಶೇ.28ರಷ್ಟು ಜಿಎಸ್‌ಟಿ ಹೆಚ್ಚಳ, ಸ್ಟೇಟ್ ಅಕೌಂಟ್, ರಾಷ್ಟ್ರದಲ್ಲಿನ ರೇಸ್ ಕೋರ್ಸ್‌ಗಳ ಆಡಳಿತಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಜಿಎಸ್‌ಟಿ ಹೆಚ್ಚಳಕ್ಕೆ ಸಂಬಂಧಿಸಿದಂತೆ ಕೆಲ ದಿನಗಳಲ್ಲೇ ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಸಲಾಗುವುದು ಎಂದು ಚಂದ್ರೇಗೌಡ ತಿಳಿಸಿದ್ದಾರೆ.

ಬಾಂಬೆ, ಕೊಲ್ಕತ್ತಾ, ಚೆನ್ನೈ, ಹೈದರಾಬಾದ್, ಬೆಂಗಳೂರು ಸೇರಿದಂತೆ ಭಾರತದ 7 ಟರ್ಫ್ ಅಥಾರಿಟಿಗಳ ಅಧ್ಯಕ್ಷರು, ಕಾರ್ಯದರ್ಶಿಗಳಲ್ಲಿ ಕೆಲವರು ಖುದ್ದು ಹಾಗೂ ಮತ್ತೆ ಕೆಲವರು ಜೂಮ್ ಮೀಟಿಂಗ್‌ನಲ್ಲಿ ಪಾಲ್ಗೊಂಡಿದ್ದರು.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಮೇ 14–ಇತ್ತೀಚೆಗೆ ಪ್ರಕಟವಾದ ಎಸ್‌ಎಸ್‌ಎಲ್‌ಸಿ (ಸಿಬಿಎಸ್‌ಇ) ಫಲಿತಾಂಶದಲ್ಲಿ ಮೈಸೂರು ಕೌಟಿಲ್ಯ ವಿದ್ಯಾಲಯದ ವಿದ್ಯಾರ್ಥಿನಿ ದಿಯಾ ಪ್ರಕಾಶ್ ಶೇ.91.20ರಷ್ಟು ಅಂಕಗಳೊಂದಿಗೆ ಅತ್ಯುನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಈಕೆ ಮೈಸೂರು ಕೆ.ಆರ್.ಬ್ಯಾಂಕ್ ಉದ್ಯೋಗಿ ಪ್ರಕಾಶ್ ಹಾಗೂ ಸಂಧ್ಯಾ ಪ್ರಕಾಶ್ ದಂಪತಿ ಪುತ್ರಿ.

ಪೆನ್‌ಡ್ರೈವ್ ಪ್ರಕರಣ: ಲಿಖಿತ್‌ಗೌಡ, ಚೇತನ್ ಜಾಮೀನು ಅರ್ಜಿ ವಜಾ

ಹಾಸನ: ಸಂಸದ ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾದ ಅಶ್ಲೀಲ ವೀಡಿಯೋ ವೈರಲ್ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಲಿಖಿತ್ ಗೌಡ ಹಾಗೂ ಚೇತನ್ ಪರ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ.

ಹಾಸನದ ಒಂದನೇ ಅಧಿಕ ಹಿರಿಯ ಸಿವಿಲ್ ನ್ಯಾಯಾಲಯ ಜಾಮೀನು ಅರ್ಜಿ ವಜಾಗೊಳಿಸಿ ಆದೇಶ ನೀಡಿದೆ. ಮೇ 12ರಂದು ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿ ಲಿಖಿತ್ ಹಾಗೂ ಚೇತನ್‌ರನ್ನು ಎಸ್‌ಐಟಿ ಪೊಲೀಸರು ವಶಕ್ಕೆ ಪಡೆದಿದ್ದು, ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ. ಪೆನ್‌ಡ್ರೈವ್ ಇಟ್ಟುಕೊಂಡಿದ್ದ ಆರೋಪದಲ್ಲಿ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ. ಸೋಮವಾರ ಆರೋಪಿಗಳ ಪರ ವಕೀಲರು ನ್ಯಾಯಾಲಯಕ್ಕೆ ಜಾಮೀನು ಅರ್ಜಿ ಸಲ್ಲಿಸಿದ್ದರು. ಇಂದು ವಿಚಾರಣೆ ನಡೆಸಿದ ನ್ಯಾಯಾಲಯ ಜಾಮೀನು ಅರ್ಜಿಯನ್ನು ವಜಾಗೊಳಿಸಿದೆ.

ಅಪಘಾತದಲ್ಲಿ ಗಾಯಗೊಂಡಿದ್ದ ಬೈಕ್ ಸವಾರ ಸಾವು



ಕೊಳ್ಳೇಗಾಲ, ಮೇ 14–ಸೋಮವಾರ ಕಾರು ಮತ್ತು ಬೈಕ್ ನಡುವೆ ಡಿಕ್ಕಿ ಸಂಭವಿಸಿ ತೀವ್ರವಾಗಿ ಗಾಯಗೊಂಡಿದ್ದ ಬೈಕ್ ಸವಾರ ಮಂಗಳವಾರ ಮೃತಪಟ್ಟಿದ್ದಾರೆ.

ತಮಿಳುನಾಡು ಧರ್ಮಪುರಿ ಜಿಲ್ಲೆ ಪೆನ್ನಾನಗರ ತಾಲೂಕಿನ ದೊರೆಸ್ವಾಮಿ (54) ಮೃತಪಟ್ಟಿದ್ದು, ಈತ ಸೋಮವಾರ ಮಧ್ಯಾಹ್ನ ತಮ್ಮ ಮಗಳನ್ನು ನೋಡಲು ಜಾಗೇರಿ ಗ್ರಾಮಕ್ಕೆ ಬೈಕ್‌ನಲ್ಲಿ ಬರುತ್ತಿದ್ದರು. ಈ ವೇಳೆ ತಾಲೂಕಿನ ಮಧುವನಹಳ್ಳಿ ಗ್ರಾಮದ ಸಮೀಪ ಬೈಕ್ ಮತ್ತು ಕಾರು ನಡುವೆ ಮುಖಾಮುಖಿ ಡಿಕ್ಕಿಯಾಗಿದೆ. ಪರಿಣಾಮ ತೀವ್ರ ಗಾಯಗೊಂಡಿದ್ದ ದೊರೆಸ್ವಾಮಿಯನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ದಾಖಲು ಮಾಡಲಾಗಿತ್ತು ಆದರೆ, ಚಿಕಿತ್ಸೆ ಫಲಕಾರಿಯಾಗದೇ ಮಂಗಳವಾರ ಮುಂಜಾನೆ ಮೃತಪಟ್ಟಿದ್ದಾರೆ.

ಈ ಸಂಬಂಧ ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಭಾರಿ ಮಳೆ–ಗಾಳಿಗೆ ಮೈಸೂರಲ್ಲಿ ನೆಲಕ್ಕುರುಳಿದ 50ರಿಂದ 60 ಮರಗಳು

• 140ರಿಂದ 150 ಮರಗಳಲ್ಲಿ ಮುರಿದು ಬಿದ್ದ ರೆಂಬೆ-ಕೊಂಬೆ • ಅರಣ್ಯ ಇಲಾಖೆ ಅಂದಾಜು

ಮೈಸೂರು, ಮೇ 14(ಪಿಎಂ)– ಇತ್ತೀಚೆಗೆ ಸುರಿದ ಭಾರಿ ಮಳೆ ಹಾಗೂ ಗಾಳಿಗೆ ಮೈಸೂರು ನಗರದಲ್ಲಿ 50ರಿಂದ 60 ಮರಗಳು ಬುಡಸಹಿತ ನೆಲಕ್ಕುರುಳಿದ್ದರೆ, 140 ರಿಂದ 150 ಮರಗಳ ರೆಂಬೆ–ಕೊಂಬೆಗಳು ಮುರಿದು ಬಿದ್ದಿವೆ.

ಇನ್ನು ಮೈಸೂರಿನ ನಜರ್‌ಬಾದಿನ ಮಿರ್ಜಾ ರಸ್ತೆಬದಿಯ ಹೆಚ್ಚಿನ ಮರಗಳಲ್ಲಿ ಕೊಂಬೆಗಳು ಮುರಿದು ಬಿದ್ದಿದ್ದು, ಈ ಪ್ರಮಾಣದಲ್ಲಿ ಕೊಂಬೆಗಳು ಮುರಿದಿರುವುದೇ ಇಲ್ಲಿಯೇ ಹೆಚ್ಚೆಂದು ಸಾರ್ವಜನಿಕರು ಅಚ್ಚರಿ ವ್ಯಕ್ತಪಡಿಸಿದ್ದಾರೆ.





ಮೈಸೂರಿನ ನಜರ್‌ಬಾದಿನ ಮಿರ್ಜಾ ರಸ್ತೆಬದಿಯ ಮರಗಳ ರೆಂಬೆ ಕೊಂಬೆಗಳು ಇತ್ತೀಚೆಗೆ ಸುರಿದ ಮಳೆಗಾಳಿಗೆ ಮುರಿದಿರುವುದು. ಮತ್ತೊಂದು ಚಿತ್ರದಲ್ಲಿ ಇದೇ ರಸ್ತೆ ಬದಿಯ ಮರಗಳ ಬುಡದಲ್ಲಿ ನೀರು ಇಂಗಲು ಸ್ಥಳವಿಲ್ಲದೆ ಕಾಂಕ್ರಿಟ್ ಹಾಗೂ ಡಾಂಬರು ಆವರಿಸಿರುವುದನ್ನು ಕಾಣಬಹುದು.

ಮಿರ್ಜಾ ರಸ್ತೆಯ ಎರಡೂ ಬದಿಗಳಲ್ಲಿ ಸಾಲಾಗಿ ಬೆಳೆದು ನಿಂತಿರುವ ಮರಗಳು ಇಲ್ಲಿನ ಪ್ರಾಕೃತಿಕ ಸೌಂದರ್ಯಕ್ಕೆ ಸಾಕ್ಷಿಯಾಗಿವೆ. ಆದರೆ ಇತ್ತೀಚೆಗೆ ಸುರಿದ ಗಾಳಿ ಸಹಿತ ಮಳೆಗೆ ಇಲ್ಲಿನ ಮರಗಳ ಕೊಂಬೆಗಳು ಹೆಚ್ಚಿನ ಸಂಖ್ಯೆಯಲ್ಲಿ ಮುರಿದು ಬಿದ್ದಿವೆ. ಹಾರ್ಡಿಂಗ್ ವೃತ್ತದಿಂದ (ಜಯ ಚಾಮರಾಜ ಒಡೆಯರ್ ವೃತ್ತ) ಎಫ್‌ಕೆ ಇರಾನಿ ವೃತ್ತದವರೆಗಿನ ಈ ರಸ್ತೆಯಲ್ಲಿ ಎರಡೂ ಬದಿಯ ಫುಟ್‌ಪಾತ್‌ಗಳಲ್ಲಿ ಇಂಟರ್‌ಲ್ಯಾಕ್ ಟೈಲ್ಸ್ ಹಾಕಲಾಗಿದೆ. ಜೊತೆಗೆ ರಸ್ತೆಯ ಡಾಂಬರು ಸಹ ಈ ಮರಗಳ ಬುಡದ ಭಾಗದವರೆಗೆ ಬಹುತೇಕ ಇದೆ. ಹೀಗಾಗಿ ಈ ಮರಗಳ ಬುಡದಲ್ಲಿ ನೀರು ಇಂಗಲು ಅವಕಾಶ ತೀರಾ ಕಡಿಮೆಯಾಗಿದೆ. ಇದು ಮರಗಳು ದುರ್ಬಲಗೊಳ್ಳಲು ಕಾರಣವಾಗಲಿದೆ ಎನ್ನುತ್ತಾರೆ ಪರಿಸರವಾದಿಗಳು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ (ಮೈಸೂರು ತಾಲೂಕು) ವಲಯ ಅರಣ್ಯಾಧಿಕಾರಿ ಕೆ.ಸುರೇಂದ್ರ, ಮೈಸೂರು ನಗರದಲ್ಲಿ 50ರಿಂದ 60 ಬುಡಸಹಿತ ನೆಲಕ್ಕುರುಳಿದ್ದ ಮರಗಳಲ್ಲಿ ಗುಲ್‌ಮೊಹರ್, ಆಕಾಶಮಲ್ಲಿಗೆ, ಫೆಲ್ಟೋಫಾರಂ ಜಾತಿ ಮರಗಳೇ ಹೆಚ್ಚು. ರೆಂಬೆ–ಕೊಂಬೆ ಮುರಿದು ಬಿದ್ದಿರುವುದರಲ್ಲಿಯೂ ಇವುಗಳದ್ದೇ ಬಹುಪಾಲು ಎಂದು ಮಾಹಿತಿ ನೀಡಿದರು.

ಮರಗಳು ರಭಸದಿಂದ ಬೀಸುವ ಗಾಳಿಗೆ ತಡೆಯೊಡ್ಡಿ ಅದರ ತೀವ್ರತೆ ಕಡಿಮೆಗೊಳಿಸುವ ಮೂಲಕ ನಮ್ಮನ್ನು ರಕ್ಷಣೆ ಮಾಡುತ್ತವೆ. ಹಾಗಾಗಿ ಮಾನವರ ಪ್ರಾಣ ಹಾಗೂ ಆಸ್ತಿಪಾಸ್ತಿ ಹಾನಿ ತಡೆಗಟ್ಟುವಲ್ಲಿ ಮರಗಳ ಪಾತ್ರ ಮಹತ್ವದ್ದು. ಮರಗಳು ಮಳೆ ನೀರನ್ನು ಇಂಗಿಸುವ ಮೂಲಕ ಭೂಮಿಯ ಅಂತರ್ಜಲ ಮಟ್ಟವನ್ನು ಹೆಚ್ಚಿಸುತ್ತವೆ. ಮರ ಬೀಳುವುದು ಕೇವಲ ಶೇ.1ರಷ್ಟು ಮಾತ್ರ, ಉಳಿದ 99ರಷ್ಟು ಮರಗಳು ನೆಲಕ್ಕುರುಳುವುದಿಲ್ಲ ಎಂದು ತಿಳಿಸಿದರು.

ಈ ಮುಂಗಾರು ಮಳೆ ಸಂದರ್ಭದಲ್ಲಿ ಗಾಳಿ ತೀವ್ರತೆ ಹೆಚ್ಚಿರುತ್ತದೆ. ಇದು ಸುಳಿಗಾಳಿಯಾಗಿದ್ದು, ಮರಕ್ಕೆ ಸುತ್ತುವರೆಯುತ್ತದೆ. ಜೂನ್‌ನಿಂದ ಗಾಳಿ ತೀವ್ರತೆ ಕಡಿಮೆಯಾಗುತ್ತದೆ. ಆ ಬಳಿಕ ಮರಗಳು ನೆಲಕ್ಕುರುಳುವುದು ತೀರಾ ಕಡಿಮೆಯಾಗಲಿದೆ. ಪ್ರಸ್ತುತದಲ್ಲಿ ಗುಲ್‌ಮೊಹರ್, ಆಕಾಶ ಮಲ್ಲಿಗೆ, ಫೆಲ್ಟೋಫಾರಂ ಈ ಮೂರು ಜಾತಿ ಮರಗಳೇ ಏಕೆ ಬಿದ್ದಿವೆ ಎಂಬುದಕ್ಕೆ ಕಾರಣ ಹೆಚ್ಚಿನ ಪ್ರಮಾಣದಲ್ಲಿ ಇರುವ ಮರಗಳು ಈ ಮೂರು ಜಾತಿಯವೇ ಆಗಿವೆ ಎಂದರು.

ಮಾನವನಿಗಾಗಿ ಪ್ರಾಣ ತ್ಯಾಗ ಮಾಡುವ ಮರ!: ಗಾಳಿ ತೀವ್ರತೆಯನ್ನು ಮರಗಳು ತಡೆಯುತ್ತವೆ ಹಾಗೂ ವೇಗವಾಗಿ ಹರಿಯುವ ಮಳೆ ನೀರನ್ನು ತಡೆ ಹಿಡಿದು ಇಂಗುವಂತೆ ಮಾಡುತ್ತವೆ. ಇದರಿಂದ ಅಂತರ್ಜಲ ಮಟ್ಟ ಹೆಚ್ಚಳಕ್ಕೆ ಪೂರಕ ವಾತಾವರಣ ಸೃಷ್ಟಿಸುತ್ತವೆ. ಒಟ್ಟಾರೆ ಗಾಳಿಗೆ ನೆಲಕ್ಕುರುಳುವ ಮರಗಳು ತಾನು ನೊಂದು–ಬೆಂದು ಪ್ರಾಣ ತ್ಯಾಗ ಮಾಡುವ ಮೂಲಕ ಮಾನವನ ಪ್ರಾಣ ಹಾಗೂ ಆಸ್ತಿಪಾಸ್ತಿಗೆ ರಕ್ಷಣೆ ನೀಡುತ್ತದೆ ಎಂದು ಭಾವನಾತ್ಮಕ ವಿಶ್ಲೇಷಣೆ ನೀಡಿದರು.

ಮರದ ಬುಡದಲ್ಲಿ ಕಾಂಕ್ರೀಟ್, ಡಾಂಬರು ಹಾಕುವುದು ಸೂಕ್ತವಲ್ಲ. ಇದರಿಂದ ನೀರು ಇಂಗಲು ಸಾಧ್ಯವಿಲ್ಲ. ಜೊತೆಗೆ ಇದರಿಂದ ಹಾನಿ ಇದ್ದೇ ಇದೆ. ಜೊತೆಗೆ ಮರಗಳಿಗೆ ಲೈಟಿಂಗ್ಸ್ ಹಾಕುವುದು, ಮೊಳೆ ಒಡೆಯುವುದು, ತಂತಿ ಕಟ್ಟುವುದು ಸರಿಯಲ್ಲ. ಇದರಿಂದ ಮರದ ಆ ಭಾಗವು ಒಣಗಲು ಹಾಗೂ ಕೊಳೆಯಲು ಪ್ರಾರಂಭವಾಗುತ್ತದೆ. ಆ ಮೂಲಕ ಮರಗಳು ಸೊರಗುವಂತಾಗುತ್ತದೆ. ಹೀಗೆ ಮರದ ಕೊಂಬೆಗಳು ದುರ್ಬಲಗೊಂಡು ಬೀಳುವ ಸಾಧ್ಯತೆ ಹೆಚ್ಚಾಗುತ್ತದೆ ಎಂದು ಹೇಳಿದರು.

ಮರಗಳಿಗೆ ಹಾನಿ ಮಾಡಿದರೆ ಕ್ರಮ: ಮರಗಳಿಗೆ ಮೊಳೆ ಒಡೆಯುವುದು, ತಂತಿ ಕಟ್ಟುವುದು ಹಾಗೂ ಲೈಟಿಂಗ್ಸ್ ಹಾಕುವುದು ಸರಿಯಲ್ಲವೆಂದು ಕಳೆದ ಫೆಬ್ರವರಿಯಿಂದ ಅರಣ್ಯ ಇಲಾಖೆ ಜಾಗೃತಿ ಮೂಡಿಸುತ್ತಿದೆ. ಮುಂದಿನ ದಿನಗಳಲ್ಲಿ ಕಠಿಣ ಕ್ರಮ ಜರುಗಿಸಲಾಗುತ್ತದೆ. ಇದರಿಂದ ಮರದ ಮೇಲೆ ಉಂಟಾಗುವ ದುಷ್ಪರಿಣಾಮವನ್ನು ಸಾರ್ವಜನಿಕರು ಸ್ವಯಂ ಪ್ರೇರಿತವಾಗಿ ಅರ್ಥ ಮಾಡಿಕೊಳ್ಳಬೇಕು ಎಂದು ಕೋರಿದರು.

ಬಿರುಗಾಳಿ–ಮಳೆ ಆರ್ಭಟ; ಚೆಸ್ಕಾಂಗೆ 2.5 ಕೋಟಿ ನಷ್ಟ

ಮೈಸೂರು, ಮೇ 14(ಎಂಕೆ)– ಮೈಸೂರಿನಾದ್ಯಂತ ವರುಣನ ಅಬ್ಬರಕ್ಕೆ ಚೆಸ್ಕಾಂ ತತ್ತರಿಸಿದ್ದು, ನಿಗಮಕ್ಕೆ ಬರೋಬ್ಬರಿ 2.5 ಕೋಟಿ ರೂ. ನಷ್ಟ ಉಂಟಾಗಿದೆ.



ಮೇ 3 ರಂದು ಸುರಿದ ಬಾರೀ ಗಾಳಿ–ಮಳೆಗೆ ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿ ಮುರಿದು ಬಿದ್ದಿರುವ ವಿದ್ಯುತ್ ಕಂಬಗಳು

ಇತ್ತೀಚಿನ ದಿನಗಳಲ್ಲಿ ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗುತ್ತಿದೆ. ಮೇ 3 ರಂದು ಸುರಿದ ಅಬ್ಬರದ ಮಳೆ ಸೇರಿದಂತೆ ಇಲ್ಲಿಯವರೆಗೆ ಬಿದ್ದ ಮಳೆಗೆ 874 ವಿದ್ಯುತ್ ಕಂಬಗಳು ನೆಲಕ್ಕುರುಳಿದರೆ, 85 ಟ್ರಾನ್ಸ್‌ಫಾರ್ಮರ್‌ಗಳು, 14 ಕಿ.ಮೀ ಉದ್ದದ ವಿದ್ಯುತ್ ತಂತಿಗೆ ಹಾನಿಯಾಗಿದೆ.

ಮೈಸೂರು ನಗರದಲ್ಲೇ 372 ವಿದ್ಯುತ್ ಕಂಬಗಳು, 75 ಟ್ರಾನ್ಸ್‌ಫಾರ್ಮರ್‌ಗಳು, 14 ಕಿ.ಮೀ ಉದ್ದದ ವಿದ್ಯುತ್ ತಂತಿಗೆ ಹಾನಿಯಾಗಿದ್ದು, ಚೆಸ್ಕಾಂಗೆ 1.28 ಕೋಟಿ ರೂ. ನಷ್ಟವಾಗಿದೆ. ಹಾಗೆಯೇ ನಂಜನಗೂಡು ತಾಲೂಕಿನಲ್ಲಿ 79 ವಿದ್ಯುತ್ ಕಂಬಗಳು, ಟಿ.ನರಸೀಪುರ ತಾಲೂಕಿನಲ್ಲಿ 174 ವಿದ್ಯುತ್ ಕಂಬಗಳು ಮತ್ತು 6 ಟ್ರಾನ್ಸ್‌ಫಾರ್ಮರ್‌ಗಳು, ಹುಣಸೂರು ತಾಲೂಕಿನಲ್ಲಿ 80 ವಿದ್ಯುತ್ ಕಂಬಗಳು ಹಾಗೂ 2 ಟ್ರಾನ್ಸ್‌ಫಾರ್ಮರ್‌ಗಳು, ಹೆಚ್.ಡಿ.ಕೋಟೆ ತಾಲೂಕಿನಲ್ಲಿ 55 ವಿದ್ಯುತ್ ಕಂಬಗಳು ಹಾಗೂ 2 ಟ್ರಾನ್ಸ್‌ಫಾರ್ಮರ್‌ಗಳಿಗೆ ಹಾನಿಯಾಗಿದೆ.

ಹಾಗೆಯೇ ಸರಗೂರು ತಾಲೂಕಿನಲ್ಲಿ 41 ವಿದ್ಯುತ್ ಕಂಬಗಳು, ಕೆ.ಆರ್.ನಗರ ತಾಲೂಕಿನಲ್ಲಿ 9, ಸಾಲಿಗ್ರಾಮ ತಾಲೂಕಿನಲ್ಲಿ 15 ಹಾಗೂ ಪಿರಿಯಾಪಟ್ಟಣ ತಾಲೂಕಿನಲ್ಲಿ 49 ವಿದ್ಯುತ್ ಕಂಬಗಳು ಧರೆಗುಳಿವೆ. ಒಟ್ಟಾರೆ 2,05,25,000 ರೂ. ಮೌಲ್ಯದ ವಿದ್ಯುತ್ ಪರಿಕರಗಳು ಗಾಳಿ–ಮಳೆಗೆ ಹಾನಿಯಾಗಿದೆ ಎಂದು ಚೆಸ್ಕಾಂ ಸೂಪರಿಟೆಂಡೆಂಟ್ ಇಂಜಿನಿಯರ್(ಎಸ್‌ಇ) ಸುನೀಲ್ ಕುಮಾರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

> ಪೂರ್ವ ಮುಂಗಾರಿನಲ್ಲಿ ಗಾಳಿ ವೇಗ ಹೆಚ್ಚಾಗಿರುವುದರಿಂದ ಮರಗಳು ಹಾಗೂ ಅದಕ್ಕನುಗುಣವಾಗಿ ವಿದ್ಯುತ್ ಕಂಬಗಳು ಮುರಿದು ಬೀಳುವುದು ಸಾಮಾನ್ಯ. ಮೇ 3ರ ನಂತರದ ದಿನಗಳಲ್ಲಿ ಸುರಿದ ಮಳೆಗೆ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿಲ್ಲ. ನಂತರದ ದಿನಗಳಲ್ಲಿ ಗಾಳಿಯ ಬೇಗ ಕಡಿಮೆಯಾಗಲಿದ್ದು, ಆರಂಭದಲ್ಲಾಗುವಂತಹ ಮಟ್ಟದಲ್ಲಿ ಸಮಸ್ಯೆಗಳಾಗುವುದಿಲ್ಲ. ಹಾಗೆಂಯೇ ಪಾಲಿಕೆಯಿಂದ ಎತ್ತರದ ಮತ್ತು ಗಟ್ಟಿ ಇಲ್ಲದ ಮರಗಳ ರೆಂಬೆ–ಕೊಂಬೆಗಳನ್ನು ತೆರವು ಮಾಡಲಾಗುತ್ತಿದೆ.
>
> - ಸುನೀಲ್ ಕುಮಾರ್, ಚೆಸ್ಕಾಂ ಸೂಪರಿಟೆಂಡೆಂಟ್ ಇಂಜಿನಿಯರ್(ಎಸ್‌ಇ)



ಮರಗಳದ್ದೇ ಸಮಸ್ಯೆ: ವಿದ್ಯುತ್ ಕಂಬಗಳು ಮುರಿದು ಬೀಳಲು ಮರಗಳೇ ಕಾರಣ. ಪೂರ್ವ ಮುಂಗಾರಿನಲ್ಲಿ ಗಾಳಿಯ ವೇಗ ಹೆಚ್ಚು. ಹಾಗಾಗಿ ದೊಡ್ಡ ದೊಡ್ಡ ಮರದ ರೆಂಬೆ–ಕೊಂಬೆಗಳು ಮುರಿದು ವಿದ್ಯುತ್ ತಂತಿಯ ಮೇಲೆ ಬಿದ್ದರೆ, ಕಂಬಗಳು ಮುರಿದು ಬೀಳಲಿವೆ. ಸ್ಟ್ಯಾಂಡರ್ಡ್ ಆಧಾರದ ವಿದ್ಯುತ್ ಕಂಬಗಳನ್ನು ನಿಲ್ಲಿಸಲಾಗಿದ್ದು, ಆದರೆ ಮರಗಳದ್ದೇ ಸಮಸ್ಯೆ ಎಂದು ತಿಳಿಸಿದರು.

ನಗರದಲ್ಲೇ ಹೆಚ್ಚು: ಮೈಸೂರು ನಗರದಲ್ಲೇ ವಿದ್ಯುತ್ ಕಂಬಗಳು ಹಾಗೂ ಟ್ರಾನ್ಸ್‌ಫಾರ್ಮರ್‌ಗಳು ಹೆಚ್ಚಾಗಿ ಹಾಳಾಗಿವೆ. ಅದರಲ್ಲೂ ಮೇ 3 ರಂದು ಸುರಿದ ಭಾರಿ ಗಾಳಿ–ಮಳೆಗೆ ಉಂಟಾದ ಹಾನಿಯೇ ಹೆಚ್ಚು. ಅಂದಿನಿಂದಲೂ ನಗರಪಾಲಿಕೆಯೊಂದಿಗೆ ಪರಸ್ಪರ ಚರ್ಚಿಸಿ ಎತ್ತರದ ಮರದ ರೆಂಬೆ–ಕೊಂಬೆಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಮೈಸೂರಿನ ಕೃಷ್ಣರಾಜ ಕ್ಷೇತ್ರದಲ್ಲಿ ಒಂದೇ ವರ್ಷದಲ್ಲಿ 700 ಕೋಟಿಯ ಅಭಿವೃದ್ಧಿ

ರಿಪೋರ್ಟ್ ಕಾರ್ಡ್ ಬಿಡುಗಡೆ ಮಾಡಿದ ಶಾಸಕ ಟಿ.ಎಸ್.ಶ್ರೀವತ್ಸ


●ಗೋಬರ್ ಗ್ಯಾಸ್ ಮೂಲಕ ವಿದ್ಯುತ್ ● ರಾಜಕಾಲುವೆಗಳಿಗೆ ಕಾಯಕಲ್ಪ
●4 ವರ್ಷದಲ್ಲಿ ವಸತಿರಹಿತರ ಕ್ಷೇತ್ರ ●ಎಕ್ಸೆಲ್ ಪ್ಲಾಂಟ್ ಕಸಕ್ಕೆ ಶೀಘ್ರವೇ ಮುಕ್ತಿ

ಮೈಸೂರು, ಮೇ 14(ಬಿಎಲ್‌ಯು) –ಕಳೆದ ಒಂದು ವರ್ಷದ ಅವಧಿಯಲ್ಲಿ ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ 700 ಕೋಟಿ ರೂಪಾಯಿ ವೆಚ್ಚದ ಅಭಿವೃದ್ಧಿ ಕಾರ್ಯ ಮಾಡಿರುವುದಾಗಿ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಒಂದು ವರ್ಷದಲ್ಲಿ ಕೃಷ್ಣರಾಜ ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಗಳು ಹಾಗೂ ತಮ್ಮ ಕನಸಿನ ಯೋಜನೆಗಳ ವಿವರ ನೀಡಿದರು.

ನಾನು ಶಾಸಕನಾಗಿ ವರ್ಷವಾಗಿದ್ದು, ಇಲ್ಲಿತನಕ ನಿರಂತರವಾಗಿ ಕ್ಷೇತ್ರದಲ್ಲಿ ಪಾದಯಾತ್ರೆ ಮಾಡಿದ್ದೇನೆ. ಈ ವೇಳೆ ನನ್ನ ದೂರವಾಣಿ ಸಂಖ್ಯೆ, ನನ್ನ ಆಪ್ತ ಸಹಾಯಕರ ದೂರವಾಣಿ ಸಂಖ್ಯೆ ಹಾಗೂ ಕಚೇರಿ ವಿಳಾಸವಿರುವ 60 ಸಾವಿರಕ್ಕೂ ಹೆಚ್ಚು ಕಾರ್ಡ್‌ಗಳನ್ನು ಮನೆ ಮನೆಗೂ ವಿತರಣೆ ಮಾಡಿದ್ದೇನೆ. ಈ ಮೂಲಕ ಜನರ ಸಮಸ್ಯೆ ಪರಿಹಾರ ಮಾಡಲು ಪ್ರಯತ್ನಿಸಿದ್ದೇನೆ ಎಂದು ತಿಳಿಸಿದರು.

ವಸತಿರಹಿತರ ಕ್ಷೇತ್ರ: ಕಳೆದ ಎರಡು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಆಶ್ರಯ ಯೋಜನೆಯ ಗುಂಪು ಮನೆ ಯೋಜನೆಯ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಲಾಗಿ ಇದೇ ಮಾರ್ಚ್ 14 ರಂದು ಶಂಕುಸ್ಥಾಪನೆ ನೆರವೇರಿಸಲಾಯಿತು. ಲಲಿತಾದ್ರಿಪುರದಲ್ಲಿ 940 ಆಶ್ರಯ ಯೋಜನೆಯ ಗುಂಪು ಮನೆ ಯೋಜನೆಯನ್ನು 350 ಕೋಟಿ ರೂಪಾಯಿಯಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಖಾಸಗಿ ಕಂಪನಿಗೆ ಟೆಂಡರ್ ಕೂಡ ನೀಡಲಾಗಿದೆ. ಲಲಿತಾದ್ರಿಪುರ ವರುಣ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕಾರಣ ವರುಣ ಕ್ಷೇತ್ರದ ವಸತಿರಹಿತರಿಗೆ 500 ಮನೆ ಸೇರಿದಂತೆ ಒಟ್ಟು 1460 ಗುಂಪು ಮನೆ ನಿರ್ಮಾಣ ಮಾಡಲಾಗುತ್ತಿದೆ ಈ ಮೂಲಕ ಮುಂದಿನ 4 ವರ್ಷದಲ್ಲಿ ಕೃಷ್ಣರಾಜ ಕ್ಷೇತ್ರವನ್ನು ವಸತಿರಹಿತರ ಕ್ಷೇತ್ರವಾಗಿ ಮಾಡಲಾಗುವುದು ಎಂದು ಶ್ರೀವತ್ಸ ಭರವಸೆ ನೀಡಿದರು.



ಶಾಸಕರಾಗಿ ಒಂದು ವರ್ಷ ಪೂರೈಸಿದ ಮೈಸೂರಿನ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ಬಿಜೆಪಿ ಮುಖಂಡರು ಅಭಿನಂದಿಸಿದರು.

ಇದಲ್ಲದೆ ವಿಶ್ವೇಶ್ವರನಗರದ ಎಕ್ಸೆಲ್ ಪ್ಲಾಂಟ್‌ನಲ್ಲಿರುವ 7 ಲಕ್ಷ ಟನ್ ಕಸ ತೆರವುಗೊಳಿಸುವ 60 ಕೋಟಿ ರೂ. ಯೋಜನೆ ಕೈಗೆತ್ತಿಕೊಂಡಿದ್ದು, ಚುನಾವಣಾ ನೀತಿ ಸಂಹಿತೆ ಪ್ರಕ್ರಿಯೆ ಅಂತ್ಯಗೊಂಡ ನಂತರ ಕಾಮಗಾರಿ ಆರಂಭಿಸಲಾಗುವುದು. ಅಲ್ಲಿರುವ ಕಸವನ್ನು ಗೊಬ್ಬರ ಸೇರಿದಂತೆ ಇತರೆ ಉಪಯೋಗಕ್ಕೆ ಬಳಸಿಕೊಳ್ಳಲಾಗುವುದು ಎಂದು ಹೇಳಿದರು.

ರಸ್ತೆ ಅಭಿವೃದ್ಧಿ: ಕಳೆದ ಒಂದು ವರ್ಷದ ಅವಧಿಯಲ್ಲಿ ಕೃಷ್ಣರಾಜ ಕ್ಷೇತ್ರದಲ್ಲಿ 50 ಕೋಟಿ ವೆಚ್ಚದಲ್ಲಿ ವಿವಿಧ ರಸ್ತೆ ಅಭಿವೃದ್ಧಿ ಮಾಡಲಾಗಿದೆ. ಜೆ.ಪಿ.ನಗರದ 3.50 ಕೋಟಿ ವೆಚ್ಚದಲ್ಲಿ ಪದವಿ ಕಾಲೇಜಿನ ಕಟ್ಟಡ ನಿರ್ಮಾಣ ಮಾಡಲಾಗಿದೆ. ಹಾಸ್ಟೆಲ್‌ನಲ್ಲಿ ಹೆಚ್ಚುವರಿ ಕೊಠಡಿ ನಿರ್ಮಾಣಕ್ಕೆ 7.75 ಕೋಟಿ ವೆಚ್ಚ ಮಾಡಲಾಗಿದೆ. ಕಂಸಾಳೆ ಮಹದೇವಯ್ಯ ವೃತ್ತದಿಂದ ರಾಮಾನುಜ ರಸ್ತೆಯ ಎಂ.ಜಿ. ರಸ್ತೆ ಜಂಕ್ಷನ್ ತನಕ 1.39 ಕೋಟಿ ವೆಚ್ಚದಲ್ಲಿ ಒಳಚರಂಡಿ ನಿರ್ಮಾಣ ಮಾಡಲಾಗಿದೆ. ಇದರಿಂದ ಸುತ್ತಮುತ್ತಲ ಜನರ ಒಳಚರಂಡಿ ಸಮಸ್ಯೆ ಪರಿಹಾರ ಮಾಡಲಾಗಿದೆ ಎಂದು ಶ್ರೀವತ್ಸ ತಿಳಿಸಿದರು.

ಕೃಷ್ಣರಾಜ ಕ್ಷೇತ್ರದ ವಿವಿಧ ಸ್ಥಳಗಳಲ್ಲಿ 74 ಲಕ್ಷ ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಿಸಲಾಗಿದೆ. ಇಟ್ಟಿಗೆಗೂಡು, ರೈಲ್ವೆ ಕ್ವಾಟ್ರರ್ಸ್, ಕನಕಗಿರಿ ಸೇರಿದಂತೆ ಇತರೆಡೆ ಶುದ್ಧ ಕುಡಿಯುವ ನೀರು ಘಟಕ ಸ್ಥಾಪಿಸಲಾಗಿದೆ. ಅಶೋಕಪುರಂ, ಹುಡ್ಕೋ ಕಾಲೋನಿ, ನೆಲ್ಲೂರು ಶೆಡ್, ರಾಜೀವ್ ಗಾಂಧಿ ಕಾಲೋನಿ ಸೇರಿದಂತೆ ಇತರೆಡೆ 3 ಕೋಟಿ ವೆಚ್ಚದಲ್ಲಿ ರಸ್ತೆ, ಚರಂಡಿ ಸೇರಿದಂತೆ ಇತರೆ ಅಭಿವೃದ್ಧಿ ಕಾರ್ಯ ಮಾಡಲಾಗಿದೆ ಎಂದರು.

ಕೃಷ್ಣರಾಜ ಕ್ಷೇತ್ರದಲ್ಲಿ ಗೋವು ಸಾಕಾಣಿಕೆ ಹೆಚ್ಚಾಗಿರುವ ಕಾರಣ ಸಗಣಿ ಸಂಗ್ರಹಿಸಿ ಅದರಿಂದ ಗೋಬರ್ ಗ್ಯಾಸ್ ತಯಾರಿಸಿ ಪ್ರಾಯೋಗಿಕವಾಗಿ ಮನೆಗಳಿಗೆ ವಿದ್ಯುತ್ ನೀಡುವ ಯೋಜನೆ ಸಿದ್ಧಪಡಿಸಲಾಗಿದೆ. ರಾಜಕಾಲುವೆಗಳಿಗೆ ಕಾಯಕಲ್ಪ ನೀಡುವ ಯೋಜನೆ ಕೂಡ ರೂಪಿಸಲಾಗಿದೆ ಎಂದು ಶ್ರೀವತ್ಸ ತಿಳಿಸಿದರು.

ಈಗ ನಾನು ಮಾಡಿರುವ 700 ಕೋಟಿ ರೂ. ವೆಚ್ಚದ ಬಹುತೇಕ ಯೋಜನೆಗಳು ಬಿಜೆಪಿ ಸರ್ಕಾರ ಅಧಿಕಾರದಲ್ಲಿರುವಾಗ ಮಂಜೂರಾಗಿತ್ತು. ಈ ಸರ್ಕಾರದ ಅವಧಿಯಲ್ಲಿ ಕೆಲವು ಯೋಜನೆಗಳು ಮಾತ್ರ ಮಂಜೂರಾಗಿದೆ ಎಂದರು.

ಮಾಜಿ ಮೇಯರ್ ಸುನಂದ ಪಾಲನೇತ್ರ, ಶಿವಕುಮಾರ್, ಬಿಜೆಪಿ ಮುಖಂಡರಾದ ಮೋಹನ್, ಜೋಗಿ ಮಂಜು, ಗೋಪಾಲರಾಜೇ ಅರಸ್, ಗಿರಿಧರ್, ಕೇಬಲ್ ಮಹೇಶ್ ಪತ್ರಿಕಾಗೋಷ್ಠಿಯಲ್ಲಿದ್ದರು.

ಕೆ.ಸಿ.ನಗರ, ಜೆ.ಸಿ.ನಗರ ಖಾತಾ ಸಮಸ್ಯೆಗೆ ಅದಾಲತ್

ಮೈಸೂರಿನ ಕೆ.ಸಿ.ನಗರ ಹಾಗೂ ಜೆ.ಸಿ.ನಗರದಲ್ಲಿ ಎದುರಾಗಿರುವ ನಿವೇಶನಗಳ ಖಾತಾ ಸಮಸ್ಯೆ ಪರಿಹಾರ ಮಾಡಲು ಶೀಘ್ರವೇ ಅದಾಲತ್ ಆಯೋಜಿಸಲಾಗುವುದು ಎಂದು ಶ್ರೀವತ್ಸ ತಿಳಿಸಿದರು. ಕೆ.ಸಿ.ನಗರ ಹಾಗೂ ಜೆ.ಸಿ.ನಗರ ಸರ್ವೆ ನಂ.4ರ ವ್ಯಾಪ್ತಿಯಲ್ಲಿ ಬರುತ್ತದೆ. ಆದರೆ ಆ ಬಡಾವಣೆಯ ನಿವೇಶನಗಳಿಗೆ ಖಾತೆ ಮಾಡಿಕೊಡಲು ತಾಂತ್ರಿಕ ತೊಂದರೆಗಳು ಎದುರಾಗಿದೆ ಎಂದರು. ಈ ಹಿನ್ನೆಲೆಯಲ್ಲಿ ಶೀಘ್ರವೇ ಅದಾಲತ್ ಆಯೋಜಿಸಿ ಖಾತಾ ಸಮಸ್ಯೆ ಪರಿಹಾರ ಮಾಡಲಾಗುವುದು ಎಂದು ಶ್ರೀವತ್ಸ ಹೇಳಿದರು.

ಗ್ಯಾರಂಟಿಗೆ ಹಣ ಕೊಟ್ಟು ಅಭಿವೃದ್ಧಿಗೆ ಅಡ್ಡಿ

ರಾಜ್ಯ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಹಣ ನೀಡುತ್ತಿರುವ ಕಾರಣ ಆರ್ಥಿಕ ಸಂಕಷ್ಟದ ಹಿನ್ನೆಲೆ ಕ್ಷೇತ್ರದ ಹಲವು ಅಭಿವೃದ್ಧಿ ಕಾರ್ಯಗಳನ್ನು ತಡೆ ಹಿಡಿದಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ದೂರಿದರು.

ಹಣದ ಕೊರತೆಯಿಂದ ಹಲವು ಅಭಿವೃದ್ಧಿ ಕಾಮಗಾರಿಗಳು ಆರಂಭವಾಗಿಲ್ಲ, ಇನ್ನು ಕೆಲವು ಅಭಿವೃದ್ಧಿ ಕಾಮಗಾರಿಗಳು ಅರ್ಧಕ್ಕೆ ನಿಂತಿವೆ. ಹಣದ ಕೊರತೆ ಕಾರಣ ಕಾಮಗಾರಿಗಳ ಸರ್ಕಾರವೇ ತಡೆ ಹಿಡಿದಿದೆ ಎಂದು ಆಪಾದಿಸಿದರು.

ನಾನು ಬಿಜೆಪಿ ಶಾಸಕನಾಗಿರುವ ಕಾರಣ ಕೃಷ್ಣರಾಜ ಕ್ಷೇತ್ರದ ಬಗ್ಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಮಲತಾಯಿ ಧೋರಣೆ ತಳೆದಿದೆ. ನಮ್ಮ ಕ್ಷೇತ್ರಕ್ಕೆ ನೀಡಿದ್ದ 45 ಕೋಟಿ ರೂಪಾಯಿಗಳನ್ನು ಹಿಂದಿನ ನಗರಪಾಲಿಕೆ ಆಯುಕ್ತರು ಬೇರೆ ಕ್ಷೇತ್ರಕ್ಕೆ ನೀಡಿದ್ದಾರೆ. ಕಾಂಗ್ರೆಸ್ ಶಾಸಕರಿರುವ ಕ್ಷೇತ್ರಕ್ಕೆ ಎಷ್ಟಾದರೂ ಹಣ ನೀಡಲಿ, ಆದರೆ ನಮ್ಮ ಕ್ಷೇತ್ರಕ್ಕೆ ನೀಡಿದ ಅನುದಾನವನ್ನು ಬೇರೆ ಕ್ಷೇತ್ರಕ್ಕೆ ನೀಡುವುದು ಎಷ್ಟರ ಮಟ್ಟಿಗೆ ಸರಿ ಎಂದು ಶ್ರೀವತ್ಸ ಪ್ರಶ್ನಿಸಿದರು. ಅಧಿಕಾರಿಗಳು ನಮ್ಮ ವೇಗಕ್ಕೆ ಸ್ಪಂದಿಸುತ್ತಿಲ್ಲ. ಭಾನುವಾರ ಸೇರಿದಂತೆ ಸರ್ಕಾರಿ ರಜೆ ದಿನದಂದು ಫೋನ್ ಕರೆ ಸ್ವೀಕರಿಸುವುದಿಲ್ಲ. ಸಾರ್ವಜನಿಕ ಸೇವೆಯ ಜವಾಬ್ದಾರಿಯುತ ಸ್ಥಾನದಲ್ಲಿರುವ ಅಧಿಕಾರಿಗಳು ತಮಗೆ ಈ ಕೆಲಸ ಸಾಧ್ಯವಾಗುವುದಿಲ್ಲವೆಂದರೆ ಬೇರೆ ಇಲಾಖೆಗೆ ವರ್ಗಾವಣೆ ಮಾಡಿಸಿಕೊಳ್ಳಲಿ ಎಂದು ಸೂಚನೆ ನೀಡಲಾಗಿದೆ ಎಂದರು.

ಕೃಷ್ಣರಾಜ ಕ್ಷೇತ್ರದಲ್ಲಿ ಹಫ್ತಾ ವಸೂಲಿ

ಕೃಷ್ಣರಾಜ ಕ್ಷೇತ್ರದಲ್ಲಿ ಹಫ್ತಾ ವಸೂಲಿ, ಪುಂಡ ಪೋಕರಿಗಳ ಕಾಟ, ರೌಡಿಗಳ ಹೊಡೆದಾಟ ಹೆಚ್ಚಾಗಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಆರೋಪಿಸಿದರು.

ಇತ್ತೀಚೆಗೆ ಅಗ್ರಹಾರದಲ್ಲಿ ಹಾಡಹಗಲೇ ಯುವಕನೊಬ್ಬನನ್ನು ಹತ್ಯೆ ಮಾಡಲಾಯಿತು. ಈ ಹಿನ್ನೆಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಡದಂತೆ ಕ್ರಮ ಕೈಗೊಳ್ಳುವಂತೆ ನಗರ ಪೊಲೀಸ್ ಆಯುಕ್ತರೊಡನೆ ಮಾತನಾಡಿದ್ದೇನೆ ಎಂದರು.

ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟರೆ ಆಯಾ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್‌ಗಳನ್ನೇ ಹೊಣೆಗಾರರನ್ನಾಗಿ ಮಾಡುವಂತೆ ಮನವಿ ಮಾಡಿದ್ದೇನೆ ಎಂದು ತಿಳಿಸಿದರು. ಶೀಘ್ರದಲ್ಲೇ ಕೆ.ಆರ್.ಕ್ಷೇತ್ರದ ಎಲ್ಲಾ ಪೊಲೀಸ್ ಠಾಣೆಗಳ ಇನ್ಸ್‌ಪೆಕ್ಟರ್‌ಗಳ ಸಭೆ ಕರೆದು ಕಾನೂನು ಮತ್ತು ಸುವ್ಯವಸ್ಥೆ ಗಟ್ಟಿಗೊಳಿಸುವ ಬಗ್ಗೆ ಚರ್ಚೆ ಮಾಡಲಾಗುವುದು ಎಂದು ಶ್ರೀವತ್ಸ ಹೇಳಿದರು.

ಕಡೇ ಘಳಿಗೆಯಲ್ಲಿ ಮೈಸೂರು ವಾಸ್ತವ್ಯ ಕೈಬಿಟ್ಟ ಸಿದ್ದರಾಮಯ್ಯ



ಮೈಸೂರು, ಮೇ 14(ಬಿಎಲ್‌ಯು) – ಮೈಸೂರಿಗೆ ಮಂಗಳವಾರ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಕಡೆ ಘಳಿಗೆಯಲ್ಲಿ ಮೈಸೂರು ವಾಸ್ತವ್ಯ ರದ್ದು ಮಾಡಿದರು. ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಹಾಗೂ ನೈರುತ್ಯ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಕೆ. ಮಂಜುನಾಥ್ ನಾಮಪತ್ರ ಸಲ್ಲಿಸುವಾಗ ಭಾಗಿಯಾಗಿದ್ದ ಸಿದ್ದರಾಮಯ್ಯ ಇಂದು ಮೈಸೂರಲ್ಲೇ ವಾಸ್ತವ್ಯ ಹೂಡಬೇಕಿತ್ತು.

ಇಂದು ರಾತ್ರಿ ಮೈಸೂರಿನಲ್ಲೇ ವಾಸ್ತವ್ಯ ಹೂಡಿ ನಾಳೆ ನಗರದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗಬೇಕಿತ್ತು. ಈ ಸಂಬಂಧ ಮುಖ್ಯಮಂತ್ರಿಗಳ ಕಚೇರಿ ಅಧಿಕೃತ ಕಾರ್ಯಕ್ರಮ ಪಟ್ಟಿ ಕೂಡ ಪ್ರಕಟಿಸಿತ್ತು.

ಆದರೆ ಕಡೇ ಘಳಿಗೆಯಲ್ಲಿ ಸಿದ್ದರಾಮಯ್ಯ ಮೈಸೂರು ವಾಸ್ತವ್ಯ ರದ್ದು ಮಾಡಿದರು. ನಾಮಪತ್ರ ಸಲ್ಲಿಸಿದ ನಂತರ ರಾಮಕೃಷ್ಣನಗರದ ತಮ್ಮ ನಿವಾಸದಲ್ಲಿ ಭೋಜನ ಸ್ವೀಕರಿಸಿದ ಸಿದ್ದರಾಮಯ್ಯ, ಮೈಸೂರು ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ಮರಳಿದರು. ಸಾಮಾನ್ಯವಾಗಿ ತಮ್ಮ ತವರು ಜಿಲ್ಲೆ ಮೈಸೂರಿಗೆ ಬಂದರೆ ಸಿದ್ದರಾಮಯ್ಯ ಹೀಗೆ ದಿಢೀರ್ ಕಾರ್ಯಕ್ರಮ ರದ್ದು ಮಾಡಿದ ಉದಾಹರಣೆ ಇಲ್ಲ. ಆದರೆ ಇಂದು ಮೈಸೂರು ವಾಸ್ತವ್ಯ ರದ್ದು ಮಾಡಿ ಬೆಂಗಳೂರಿಗೆ ತುರ್ತಾಗಿ ಮರಳಿದ್ದು ಕುತೂಹಲ ಮೂಡಿಸಿದೆ.

ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ; ಡಿಸಿಎಂ ಡಿಕೆಶಿ ವಿಶ್ವಾಸ

●ಪ್ರಜ್ವಲ್ ಪ್ರಕರಣಕ್ಕೆ ಎಸ್‌ಐಟಿ ಉತ್ತರಿಸುತ್ತೆ ●ನನ್ನ ಹೆಸರೇಳಿದರೆ ಮಾಧ್ಯಮಗಳು ಸುದ್ದಿ ಹಾಕುತ್ತವೆ...!



ಬೆಂಗಳೂರು, ಮೇ14(ಕೆಎಂಶಿ)–ಈ ಬಾರಿ ಲೋಕಸಭಾ ಚುನಾವಣೆಯಲ್ಲಿ 'ಐಎನ್‌ಡಿಐಎ' ಒಕ್ಕೂಟದ ಪರ ಅಲೆಯಿದ್ದು, ಕೇಂದ್ರದಲ್ಲಿ ಸರ್ಕಾರ ರಚನೆ ಮಾಡಲಿದೆ ಎಂದು ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಹಾರಾಷ್ಟ್ರ ಮುಖ್ಯಮಂತ್ರಿ ಕರ್ನಾಟಕದಲ್ಲಿ ಆಪರೇಷನ್ ಮಾಡುವ ಬಗ್ಗೆ ಮಾತನಾಡಿದ್ದಾರೆ. ಆ ರಾಜ್ಯದಲ್ಲಿ ಅವರ ಸರ್ಕಾರವೇ ಬಿದ್ದು ಹೋಗುವ ಸ್ಥಿತಿಯಲ್ಲಿದೆ. ಅವರ ಊಹೆಗಳೆಲ್ಲಾ ರಿವರ್ಸ್ ಆಗಲಿವೆ ಎಂದರು.

ಮಾಜಿ ಸಚಿವ ಎಚ್.ಡಿ. ರೇವಣ್ಣ ವಿರುದ್ಧದ ಮಹಿಳೆ ಅಪಹರಣಕ್ಕೆ ಸಂಬಂಧಿಸಿದ ಆಡಿಯೋ ವಿಡಿಯೋ ಬಗ್ಗೆ ತನಿಖೆ ನಡೆಸುತ್ತಿರುವ ಎಸ್‌ಐಟಿ ಉತ್ತರ ನೀಡುತ್ತದೆ. ಘಟನೆ ಬಗ್ಗೆ ತಮಗೇನೂ ಗೊತ್ತಿಲ್ಲ. ನನ್ನ ಹೆಸರು ಬಳಸಿದರೆ ಮಾಧ್ಯಮಗಳು ಸುದ್ದಿ ಹಾಕುತ್ತವೆ ಎಂಬ ಕಾರಣಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಡಿ.ಕೆ.ಶಿವಕುಮಾರ್ ಕುತಂತ್ರ ಎಂಬ ಆರ್.ಅಶೋಕ್ ಮತ್ತು ಅಶ್ವಥ್ ನಾರಾಯಣ ಅವರ ಆರೋಪಗಳಿಗೆ ಸೂಕ್ತ ಸಮಯದಲ್ಲಿ ಉತ್ತರ ಕೊಡೋಣ ಎಂದರು.

ಎಲ್‌ಟಿಟಿಇ ಮೇಲಿನ ನಿಷೇಧ ಮತ್ತೆ 5 ವರ್ಷ ವಿಸ್ತರಣೆ



ನವದೆಹಲಿ, ಮೇ 14– ಪ್ರಭಾಕರನ್ ನೇತೃತ್ವದ ಎಲ್‌ಟಿಟಿಇ ಸಂಘಟನೆ ಮೇಲಿನ ನಿಷೇಧವನ್ನು ಕೇಂದ್ರ ಸರ್ಕಾರ ಮತ್ತೆ ಐದು ವರ್ಷಗಳ ಕಾಲ ವಿಸ್ತರಿಸಿದೆ.

ಎಲ್‌ಟಿಟಿಇ ಮೇಲೆ ವಿಧಿಸಲಾಗಿದ್ದ ನಿಷೇಧ'ವನ್ನು ಕೇಂದ್ರವು ಮಂಗಳವಾರ ಇನ್ನೂ ಐದು ವರ್ಷಗಳವರೆಗೆ ವಿಸ್ತರಿಸಿದ್ದು, ಅದು ಜನಸಾಮಾನ್ಯರಲ್ಲಿ ಪ್ರತ್ಯೇಕತಾ ಪ್ರವೃತ್ತಿಯನ್ನು ಬೆಳೆಸುತ್ತಿದೆ ಮತ್ತು ಭಾರತದಲ್ಲಿ, ವಿಶೇಷವಾಗಿ ತಮಿಳುನಾಡಿನಲ್ಲಿ ಅದಕ್ಕೆ ಬೆಂಬಲದ ನೆಲೆಯನ್ನು ಹೆಚ್ಚಿಸುತ್ತಿದೆ ಎನ್ನಲಾಗಿದೆ.

ಎಲ್‌ಟಿಟಿಇ ಇನ್ನೂ ದೇಶದ ಸಮಗ್ರತೆ ಮತ್ತು ಭದ್ರತೆಗೆ ಧಕ್ಕೆ ತರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು, 1967ರ ಕಾನೂನುಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯಿದೆಯ ಸೆಕ್ಷನ್ 3ರ ಉಪ–ವಿಭಾಗ (1) ಮತ್ತು (3) ಅನ್ನು ಅನ್ವಯಿಸಿ ಕೇಂದ್ರ ಗೃಹ ಸಚಿವಾಲಯವು ನಿಷೇಧವನ್ನು ವಿಧಿಸಲಾಗಿದೆ ಎಂದು ಅಧಿಸೂಚನೆಯಲ್ಲಿ ಗೃಹ ಸಚಿವಾಲಯವು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟಿದೆ.

ಮೇ, 2009ರಲ್ಲಿ ಶ್ರೀಲಂಕಾದಲ್ಲಿ ಸೋಲಿನ ನಂತರವೂ, ಎಲ್‌ಟಿಟಿಇಯು 'ಈಳವ್' (ತಮಿಳರಿಗೆ ಸ್ವತಂತ್ರ ದೇಶ) ಪರಿಕಲ್ಪನೆಯನ್ನು ಕೈಬಿಟ್ಟಿಲ್ಲ ಮತ್ತು ನಿಧಿ ಸಂಗ್ರಹಣೆಯನ್ನು ಕೈಗೊಳ್ಳುವ ಮೂಲಕ 'ಈಳಂ' ಉದ್ದೇಶಕ್ಕಾಗಿ ರಹಸ್ಯವಾಗಿ ಕೆಲಸ ಮಾಡುತ್ತಿದೆ ಮತ್ತು ಪ್ರಚಾರ ಚಟುವಟಿಕೆಗಳು ಮತ್ತು ಉಳಿದಿರುವ ಎಲ್‌ಟಿಟಿಇ ನಾಯಕರು ಅಥವಾ ಕಾರ್ಯಕರ್ತರು ಚದುರಿದ ಕಾರ್ಯಕರ್ತರನ್ನು ಮರುಸಂಘಟಿಸಲು ಮತ್ತು ಸ್ಥಳೀಯವಾಗಿ ಮತ್ತು ಅಂತರ ರಾಷ್ಟ್ರೀಯವಾಗಿ ಸಂಘಟನೆಯನ್ನು ಪುನರುತ್ಥಾನಗೊಳಿಸಲು ಪ್ರಯತ್ನಗಳನ್ನು ಆರಂಭಿಸಿದ್ದಾರೆ ಎನ್ನಲಾಗಿದೆ.

ಹಾರೋಹಳ್ಳಿ ಶಾಲೆಯಲ್ಲಿ ಬೇಸಿಗೆ ಶಿಬಿರ ಉದ್ಘಾಟನೆ



ಮೈಸೂರು, ಮೇ 14–ಬೇಸಿಗೆ ಶಿಬಿರಗಳು ಮಕ್ಕಳಲ್ಲಿ ಪರಿಸರ ಪ್ರಜ್ಞೆ ಬೆಳೆಸಲು ಒತ್ತು ನೀಡಬೇಕು. ಆ ಮೂಲಕ ಗಿಡ ಮರಗಳ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಟಿ.ಸತೀಶ್ ಜವರೇಗೌಡ ಕರೆ ನೀಡಿದರು.

ತಾಲೂಕಿನ ಮೆಲ್ಲಹಳ್ಳಿ–ಹಾರೋಹಳ್ಳಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಆರ್‌ಎಲ್‌ಹೆಚ್‌ಪಿ ಸ್ವಯಂ ಸೇವಾ ಸಂಸ್ಥೆ ಹಾಗೂ ಹಿರಿಯ ಪ್ರಾಥಮಿಕ ಶಾಲೆ ಸಹಯೋಗದೊಂದಿಗೆ ಎರಡೂ ಸರ್ಕಾರಿ ಶಾಲಾ ಮಕ್ಕಳಿಗೆ ಆಯೋಜಿಸಿರುವ ಹತ್ತು ದಿನಗಳ ಬೇಸಿಗೆ ಶಿಬಿರವನ್ನು ಗಿಡಕ್ಕೆ ನೀರೆರೆದು ಉದ್ಘಾಟಿಸಿ ಮಾತನಾಡಿದರು.

ಪ್ರಕೃತಿಯ ಮೇಲೆ ದಿನೇ ದಿನೇ ಶೋಷಣೆ ಹೆಚ್ಚುತ್ತಿದೆ. ಇದರಿಂದಾಗಿ ಭೂಮಿಯ ವಿಪರೀತ ತಾಪಮಾನ ಏರಿದೆ. ಮಳೆಯ ಪ್ರಮಾಣವೂ ತಗ್ಗಿದೆ. ಬರಗಾಲ ಬಾರದಂತೆ ತಡೆಯಲು ಗಿಡಗಳ ನೆಡುವ ಮತ್ತು ಪೋಷಿಸುವ ಕಾರ್ಯಕ್ಕೆ ಮಕ್ಕಳ ತೊಡಗಿಸಿ, ಅವರಲ್ಲಿ 'ಪರಿಸರ ಪ್ರೀತಿ'ಯ ಜಾಗೃತಗೊಳಿಸಿ ಉತ್ತೇಜಿಸಬೇಕಿದೆ ಎಂದರು.

ಕೇವಲ ಮನೋರಂಜನೆ ಕೊಡುವುದಷ್ಟೇ ಬೇಸಿಗೆ ಶಿಬಿರಗಳ ಉದ್ದೇಶವಾಗಬಾರದು. ಕಲೆ, ಸಾಹಿತ್ಯ, ಸಂಸ್ಕೃತಿಯ ಜೊತೆಗೆ ಸ್ವಚ್ಛತೆ, ಆರೋಗ್ಯ, ನೀರಿನ ಮಿತಬಳಕೆ ಮತ್ತು ಸಂರಕ್ಷಣೆಯ ಕುರಿತು ತಿಳಿವಳಿಕೆ ಮೂಡಿಸುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಹಾರೋಹಳ್ಳಿ ಕಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಸಂತೋಷ್ ಬಿ.ಶೆಟ್ಟಿ ಮಾತನಾಡಿ, ನಗರಗಳಲ್ಲಿ ಬೇಸಿಗೆ ಶಿಬಿರಕ್ಕೆ ಸಾವಿರಾರು ರೂಗಳ ಶುಲ್ಕ ಪಾವತಿ ಮಾಡಬೇಕು. ಆದರೆ, ನಾವು ಗ್ರಾಮೀಣ ಮಕ್ಕಳಿಗೂ ಬೇಸಿಗೆ ಶಿಬಿರದ ಪ್ರಯೋಜನ ಲಭಿಸಲೆಂದು ಪ್ರತಿದಿನ ವಿಶೇಷ ಊಟೋಪಚಾರದ ಜೊತೆಗೆ ಉಚಿತ ಶಿಬಿರ ಆಯೋಜಿಸಿದ್ದು ಸದ್ಬಳಕೆ ಮಾಡಿಕೊಳ್ಳುವಂತೆ ತಿಳಿಸಿದರು. ಅಧ್ಯಕ್ಷತೆಯನ್ನು ಮೆಲ್ಲಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕಿ ಪಿ.ಎನ್.ವೀಣಾ ವಹಿಸಿದ್ದರು. ವೇದಿಕೆಯಲ್ಲಿ ಶಿಕ್ಷಕಿಯರಾದ ಲೀನಾ ಡಿಸೋಜ, ಶುಭ ಹಾಗೂ ಆರ್.ಎಲ್.ಹೆಚ್.ಪಿ. ಸಂಸ್ಥೆಯ ಸರಸ್ವತಿ ಉಪಸ್ಥಿತರಿದ್ದರು.

ಶಿವರಾಂಪೇಟೆ, ದೇವರಾಜ ಮಾರುಕಟ್ಟೆಯಲ್ಲಿ ಪಾಲಿಕೆ ಕಾರ್ಯಾಚರಣೆ

8 ಅಂಗಡಿಗಳಲ್ಲಿ 200 ಕೆ.ಜಿ. ಪ್ಲಾಸ್ಟಿಕ್ ವಶ; 38,100 ರೂ. ದಂಡ ವಸೂಲಿ



ಮೈಸೂರು, ಮೇ 14(ಆರ್‌ಕೆ)– ಮೈಸೂರಿನ ಶಿವರಾಂಪೇಟೆ, ದೇವರಾಜ ಮಾರುಕಟ್ಟೆಯಲ್ಲಿ ದಾಳಿ ನಡೆಸಿದ ನಗರಪಾಲಿಕೆ ಅಧಿಕಾರಿಗಳು, 8 ಅಂಗಡಿಗಳಿಂದ 200 ಕೆ.ಜಿ. ಪ್ಲಾಸ್ಟಿಕ್ ಪದಾರ್ಥ ವಶಪಡಿಸಿಕೊಂಡು, 38,100 ರೂ. ದಂಡ ವಿಧಿಸಿದ್ದಾರೆ.

ಪ್ಲಾಸ್ಟಿಕ್ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಮೇರೆಗೆ ನಗರಪಾಲಿಕೆ ಆಯುಕ್ತೆ ಡಾ.ಎನ್.ಎನ್.ಮಧು ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿದಾಗ 8 ಅಂಗಡಿಗಳಲ್ಲಿ ನಿಷೇಧಿತ ಪ್ಲಾಸ್ಟಿಕ್ ಪದಾರ್ಥ ಮಾರುತ್ತಿದ್ದುದು ಕಂಡು ಬಂದ ಹಿನ್ನೆಲೆಯಲ್ಲಿ ದಂಡ ವಸೂಲಿ ಮಾಡಿದ್ದಾರೆ.

ನಗರಪಾಲಿಕೆ ವಲಯ ಕಚೇರಿ–6ರ ವಲಯಾಧಿಕಾರಿ ವಾಣಿ ಆಳ್ವ, ಪರಿಸರ ಇಂಜಿನಿಯರ್ ಮೈತ್ರಿ, ಹೆಲ್ತ್ ಇನ್ಸ್‌ಪೆಕ್ಟರ್‌ಗಳಾದ ಮಂಜು ಕುಮಾರ, ಕೃಷ್ಣ, ಬಸವರಾಜು ಹಾಗೂ ಅಭಯ ತಂಡದ ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಬೋಗಾದಿ ಪಪಂ ವ್ಯಾಪ್ತಿಯ ಮಳೆ ಹಾನಿಗೆ ಸಂಪರ್ಕಿಸಿ 0821–2331099

ಮೈಸೂರು, ಮೇ 14(ಬಿಎಲ್‌ಯು)–ಮೈಸೂರಿನ ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮಳೆ ಅನಾಹುತಗಳು ಸಂಭವಿಸಿದರೆ ಸಾರ್ವಜನಿಕರು ಪಟ್ಟಣ ಪಂಚಾಯಿತಿಯ ಸಹಾಯವಾಣಿ ಸಂಪರ್ಕಿಸುವಂತೆ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿ ಕುರಿಯಕೋಸ್.ಸಿ ಸಲಹೆ ನೀಡಿದ್ದಾರೆ. ಮಳೆಯಿಂದ ಮನೆಗಳಿಗೆ ಹಾನಿ, ಕುಡಿಯುವ ನೀರು, ಬೀದಿದೀಪಗಳು ಹಾಗೂ ಒಳಚರಂಡಿ ಸಂಪರ್ಕದ ಸಮಸ್ಯೆಗಳು, ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿ, ಮರ ಹಾಗೂ ವಿದ್ಯುತ್ ಕಂಬಗಳು ಉರುಳುವುದು ಸೇರಿದಂತೆ ಪ್ರಾಕೃತಿಕ ವಿಕೋಪಗಳು ಸಂಭವಿಸಿದರೆ ಕಚೇರಿಯ ಸಹಾಯವಾಣಿ 0821–2331099 ಸಂಪರ್ಕಿಸುವಂತೆ ಕುರಿಯಕೋಸ್ ತಿಳಿಸಿದ್ದಾರೆ.

ಮುಂಬೈಯಲ್ಲಿ ಹೋರ್ಡಿಂಗ್ ಕುಸಿತ: ಮೃತರ ಸಂಖ್ಯೆ 14ಕ್ಕೆ ಏರಿಕೆ

70ಕ್ಕೂ ಅಧಿಕ ಮಂದಿಗೆ ಗಾಯ, ರಕ್ಷಣೆಗೆ ಎನ್‌ಡಿಆರ್‌ಎಫ್ ತಂಡ



ಮುಂಬೈ, ಮೇ 14– ವಾಣಿಜ್ಯ ನಗರಿ ಮುಂಬೈಯ ಘಾಟ್ಕೋಪರ್ ಪ್ರದೇಶದಲ್ಲಿ ಹೋರ್ಡಿಂಗ್ ಕುಸಿದು ಬಿದ್ದು ಮೃತಪಟ್ಟವರ ಸಂಖ್ಯೆ 14ಕ್ಕೆ ಏರಿದ್ದು, 74 ಜನರು ಗಾಯಗೊಂಡಿದ್ದಾರೆ ಎಂದು ಮಹಾನಗರ ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ನಿನ್ನೆ (ಸೋಮವಾರ) ಮುಂಬೈಯಲ್ಲಿ ಸಾಯಂಕಾಲ ಭಾರಿ ಧೂಳು ಬಿರುಗಾಳಿ ಮತ್ತು ಅಕಾಲಿಕ ಮಳೆ ಸುರಿಯಿತು. ಈ ಸಂದರ್ಭದಲ್ಲಿ ಭಾರಿ ಗಾಳಿಗೆ ಘಾಟ್‌ಕೋಪರ್‌ನ ಪೆಟ್ರೋಲ್ ಪಂಪ್‌ನಲ್ಲಿ 100 ಅಡಿ ಎತ್ತರದ ಅಕ್ರಮವಾಗಿ ಅಳವಡಿಸಿದ್ದ ಜಾಹೀರಾತು ಫಲಕ ಮುರಿದು ಬಿದ್ದಿದೆ.

ಛೇಡಾ ನಗರ ಮೂಲದ ಪೆಟ್ರೋಲ್ ಪಂಪ್‌ನಲ್ಲಿ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗಳು ನಡೆಯುತ್ತಿವೆ ಎಂದು ಬೃಹನ್ ಮುಂಬೈ ಮುನ್ಸಿಪಲ್ ಕಾರ್ಪೊರೇಷನ್ ಅಧಿಕಾರಿಗಳು ಹೇಳುತ್ತಿದ್ದಾರೆ. ಮೃತರ ಸಂಖ್ಯೆ 12ಕ್ಕೆ ಏರಿದೆ, ಗಾಯಗೊಂಡವರ ಸಂಖ್ಯೆ 74ಕ್ಕೆ ಏರಿದ್ದು, ಗಾಯಗೊಂಡವರಲ್ಲಿ 31 ಜನರನ್ನು ರಾಜವಾಡಿ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ ಮತ್ತು 35 ಜನರು ಚಿಕಿತ್ಸೆ ಪಡೆಯುತ್ತಿದ್ದಾರೆ, ಅವರಲ್ಲಿ ಒಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ಬಿಎಂಸಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಇನ್ನೂ ಎಂಟು ಗಾಯಾಳುಗಳು ಮೂರು ಖಾಸಗಿ ಮತ್ತು ಮಹಾನಗರಪಾಲಿಕೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದರು.

ಅಂಬೇಡ್ಕರನ್ನು ಜನ ಪರಿಪೂರ್ಣವಾಗಿ ಅರ್ಥ ಮಾಡಿಕೊಂಡಿಲ್ಲ

'ವಿಮೋಚನ ದರ್ಶನ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಚಿಂತಕ ನಾ.ದಿವಾಕರ ವಿಷಾದ

ಮೈಸೂರು, ಮೇ 14(ಎಂಟಿವೈ)– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆ, ವಿಚಾರಗಳನ್ನಷ್ಟೇ ತಿಳಿದುಕೊಂಡಿರುವ ಜನ, ಅವರನ್ನು ಪರಿಪೂರ್ಣವಾಗಿ ಅರ್ಥ ಮಾಡಿಕೊಳ್ಳುವಲ್ಲಿ ವಿಫಲರಾಗಿದ್ದಾರೆ ಎಂದು ಚಿಂತಕ, ಬರಹಗಾರ ನಾ.ದಿವಾಕರ ವಿಷಾದಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಶಾಲೆಯ ಸಭಾಂಗಣದಲ್ಲಿ ದಲಿತ ಸಾಹಿತ್ಯ ಪರಿಷತ್, ಪ್ರಗತಿಪರ ಸಂಘಟನೆಗಳ ಸಮನ್ವಯ ವೇದಿಕೆ, ಚಳವಳಿ ಪ್ರಕಾಶನ ಸಹಯೋಗದಲ್ಲಿ ಡಾ.ಕೆ.ಪಿ.ಮಹಾಲಿಂಗು ಕಲ್ಕುಂದ ಅವರ 'ವಿಮೋಚನ ದರ್ಶನ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇದುವರೆಗೂ ಡಾ.ಅಂಬೇಡ್ಕರ್ ಅವರನ್ನು ಪರಿಪೂರ್ಣವಾಗಿ ಅರ್ಥ ಮಾಡಿಕೊಂಡಿರುವವರು ಯಾರೂ ಇಲ್ಲ. ಅಂಬೇಡ್ಕರ್ ಚಿಂತನೆ ಕುರಿತು ಅನೇಕ ಸಂಶೋಧನೆ, ಅಧ್ಯಯನ ನಡೆದಿವೆ. ಅನೇಕ ಭಾಷೆಯಲ್ಲಿ ಸಾಹಿತ್ಯ, ಕೃತಿಗಳು ಪ್ರಕಟಗೊಂಡಿವೆ. ಆದರೆ ಅವರನ್ನು ಎಲ್ಲರೂ ಅರ್ಥ ಮಾಡಿಕೊಂಡಿಲ್ಲ ಎಂಬ ಕೊರತೆ ಇದೆ. ಅಂಬೇಡ್ಕರ್ ಎಂದ ತಕ್ಷಣವೇ ಸಂವಿಧಾನ, ಅದರ ಮೂಲಕ ನೀಡುವ ಸಮಾನತೆ, ಸಾಮಾಜಿಕ ನ್ಯಾಯ, ಭ್ರಾತೃತ್ವ, ಸವಲತ್ತು, ಸೌಲಭ್ಯವಷ್ಟೇ ಎಂದು ತಿಳಿದುಕೊಂಡಿದ್ದೇವೆ. ಆದರೆ ಅಂಬೇಡ್ಕರರನ್ನು ಸಂಪೂರ್ಣವಾಗಿ ಅರ್ಥೈಸಿ ಕೊಂಡಿಲ್ಲ ಎಂದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಶಾಲೆಯ ಸಭಾಂಗಣದಲ್ಲಿ ಮಂಗಳವಾರ ಲೇಖಕ ಡಾ.ಕೆ.ಪಿ.ಮಹಾಲಿಂಗು ಕಲ್ಕುಂದ ಅವರ 'ವಿಮೋಚನಾ ದರ್ಶನ' ಕೃತಿಯನ್ನು ಚಿಂತಕ, ಬರಹಗಾರ ನಾ.ದಿವಾಕರ ಬಿಡುಗಡೆ ಮಾಡಿದರು.

ವರ್ತಮಾನ ತಿಳಿದುಕೊಳ್ಳಲು ಅಂಬೇಡ್ಕರ್ ಅವರನ್ನು ತಿಳಿದುಕೊಳ್ಳಬೇಕು. ರಾಜಕೀಯ ಅಂಬೇಡ್ಕರ್, ಸಾಮಾಜಿಕ ಅಂಬೇಡ್ಕರ್, ಧಾರ್ಮಿಕ ಅಂಬೇಡ್ಕರ್ ಹೀಗೆ ವಿವಿಧ ಆಯಾಮದಲ್ಲಿ ಅರ್ಥ ಮಾಡಿಕೊಳ್ಳಬೇಕು. ಬುದ್ಧ, ಬಸವಣ್ಣರಿಂದ ಹಿಡಿದು ಅನೇಕ ಮಹನೀಯರು ಸಮಾಜ ಸುಧಾರಣೆಗೆ ಪ್ರಯತ್ನಿಸಿ ವಿಫಲರಾದರು. ಆದರೆ ಅಂಬೇಡ್ಕರ್ ಮಾತ್ರ ವೈಚಾರಿಕ, ವೈಜ್ಞಾನಿಕ ನೆಲೆಯಲ್ಲಿ ಸಮಾಜ ಸುಧಾರಣೆಗೆ ಪ್ರಯತ್ನಿಸಿ ಯಶಸ್ಸು ಕಂಡವರು. ದಕ್ಷಿಣ ಭಾರತದಲ್ಲಿ ಪೆರಿಯಾರ್ ಈ ರೀತಿ ದೃಷ್ಟಿಕೋನ ಹೊಂದಿದ್ದರು ಎಂದರು.

ಇಷ್ಟಾಗಿಯೂ ಅಂಬೇಡ್ಕರ್ ದೇಶದ ಜನರ ಮನದೊಳಗೆ ಇಲ್ಲ. ಆ ಸ್ಥಾನದಲ್ಲಿ ಮನುಸ್ಮೃತಿ ಬೇರೂರಿದೆ. ಮನುಸ್ಮೃತಿಯ ಯಜಮಾನಿ, ಪಿತೃಪ್ರಧಾನ ವ್ಯವಸ್ಥೆ, ಸ್ತ್ರೀ ಶೋಷಣೆ, ಜಾತಿ ವ್ಯವಸ್ಥೆ ವಿವಿಧ ಸಾಮಾಜಿಕ ಸಮಸ್ಯೆಗಳು ಮುಂದುವರಿಯುತ್ತಿವೆ. ಆದರೆ ಸಮಾಜ ಸುಧಾರಣೆ ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ. ಸ್ವಾತಂತ್ರ್ಯ ಬಳಿಕ ಅಂಬೇಡ್ಕರ್ ಮೊದಲ ಸ್ತ್ರೀವಾದಿ. ಪಿತೃಪ್ರಧಾನ ವ್ಯವಸ್ಥೆ ಭೇದಿಸುವ ಮೂಲಕ ಮಹಿಳಾ ಸುಧಾರಣೆಗೆ ಪ್ರಯತ್ನಿಸಿದರು. ಅವರಿಗಾಗಿಯೇ ಸಂವಿಧಾನದ ಮೂಲಕ ಕಾನೂನು ರೂಪಿಸಿದವರು ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ದಲಿತ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಡಾ.ಅರ್ಜುನ ಗೊಳಸಂಗಿ, ಕೃತಿಕಾರ ಡಾ.ಕೆ.ಪಿ.ಮಹಾಲಿಂಗು ಕಲ್ಕುಂದ, ದಸಂಸ ಮುಖಂಡ ಹರಿಹರ ಆನಂದಸ್ವಾಮಿ, ಪ್ರಗತಿಪರ ಸಂಘಟನೆಗಳ ಸಮನ್ವಯ ವೇದಿಕೆಯ ಅಧ್ಯಕ್ಷ ಸೋಮಯ್ಯ ಮಲೆಯೂರು, ಪ್ರದೇಶಾಭಿವೃದ್ಧಿ ಮಂಡಳಿ ನಿರ್ದೇಶಕ ಡಿ.ಚಂದ್ರಶೇಖರಯ್ಯ, ಮುಕ್ತ ವಿವಿ ಹಾಸನ ಪ್ರಾದೇಶಿಕ ನಿರ್ದೇಶಕ ಪಿ.ಜಗದೀಶ್ ಇತರರಿದ್ದರು.

> ❝ ಸಾಮಾಜಿಕ ಸಮಸ್ಯೆಗಳು, ಜಾತಿ ಪದ್ಧತಿ, ಶ್ರೇಷ್ಠ–ಕನಿಷ್ಠ, ಭಾರತದ ಒಳ ಸುಳಿವು ಅರ್ಥ ಮಾಡಿಕೊಳ್ಳಲು 'ಅಂಬೇಡ್ಕರ್ ಮಸೂರ ಕನ್ನಡ' ಬೇಕು. 1980ರ ಬಳಿಕವೇ ಅಂಬೇಡ್ಕರ್ ಪರಿಚಯವಾಯಿತು. ನಂತರವೇ ಅವರು ಆವರಿಸಿಕೊಂಡರು. ಇದು ಅಗತ್ಯವಾಗಿತ್ತು ಅವರ ಚಿಂತನೆ ಬಿಟ್ಟು ಬೇರೆ ಯೋಚನೆ ಮಾಡಲು ಆಗುವುದಿಲ್ಲ. ದೇಶದ ಕರಾಳತೆ, ಅನ್ಯಾಯ, ಶೋಷಣೆಯ ಆಯಾಮ, ಸಾಮಾಜಿಕ ಸಮಸ್ಯೆಗಳು, ಸಾಂಸ್ಕೃತಿಕ ಸವಾಲುಗಳ ಮೇಲೆ ಪಿತೃಪ್ರಧಾನವೇ ಆವರಿಸಿಕೊಂಡಿದೆ. ಇದನ್ನು ಅರ್ಥಮಾಡಿಕೊಳ್ಳಲು, ಮೀರಲು ಅಂಬೇಡ್ಕರ್ ಚಿಂತನೆ ಅಗತ್ಯ. **–ನಾ.ದಿವಾಕರ**

ಬಾಡಗ ಬಾಣಂಗಾಲ ವ್ಯಾಪ್ತಿ ಕಾಡಾನೆ ಸೆರೆ ಕಾರ್ಯಾಚರಣೆ

ಸ್ಥಳಕ್ಕೆ ಶಾಸಕ ಎ.ಎಸ್.ಪೊನ್ನಣ್ಣ ಭೇಟಿ, ಅರಣ್ಯಾಧಿಕಾರಿಗಳಿಂದ ಮಾಹಿತಿ



ಕಾಡಾನೆ ಸೆರೆ ಕಾರ್ಯಾಚರಣೆ ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಎ.ಎಸ್.ಪೊನ್ನಣ್ಣ ಅರಣ್ಯಾಧಿಕಾರಿಗಳಿಂದ ಮಾಹಿತಿ ಪಡೆದರು.

ಸಿದ್ದಾಪುರ, ಮೇ 14–ಬಾಡಗ ಬಾಣಂಗಾಲ ವ್ಯಾಪ್ತಿ ನಿರಂತರವಾಗಿ ದಾಳಿ ನಡೆಸಿ ಅಪಾರ ಪ್ರಮಾಣದ ಕೃಷಿ ಫಸಲು ನಷ್ಟ ಹಾಗೂ ಕಾರ್ಮಿಕರು, ಬೆಳೆಗಾರರಲ್ಲಿ ಆತಂಕ ಸೃಷ್ಟಿಸುತ್ತಿರುವ ಮೂರು ಕಾಡಾನೆಗಳ ಸೆರೆಗೆ ಅರಣ್ಯಾಧಿಕಾರಿಗಳು ಮಂಗಳವಾರ ಮೊದಲ ಹಂತದ ಕಾರ್ಯಾಚರಣೆ ಆರಂಭಿಸಿದ್ದಾರೆ.

ಬಾಡಗ ಬಾಣಂಗಾಲ ವ್ಯಾಪ್ತಿಯ ಕಾಫಿ ತೋಟಗಳಲ್ಲಿ ದುಬಾರೆ ಹಾಗೂ ಮತ್ತಿಗೋಡು ಶಿಬಿರದ ಅಭಿಮನ್ಯು, ಭೀಮಾ, ಮಹೇಂದ್ರ, ಹರ್ಷ, ಧನಂಜಯ, ಅಶ್ವತ್ಥಾಮ ಸಾಕಾನೆಗಳೊಂದಿಗೆ ವನ್ಯಜೀವಿ ವೈದ್ಯರಾದ ರಮೇಶ್, ಚಟ್ಟಿಯಪ್ಪ, ಶಾರ್ಪ್ ಶೂಟರ್ ರಂಜನ್ ಸೇರಿದಂತೆ ನೂರಕ್ಕೂ ಹೆಚ್ಚು ಅರಣ್ಯ ಸಿಬ್ಬಂದಿ ತಂಡ ಕಾಡಾನೆಗಳ ಚಲನವಲನ ಪತ್ತೆಗೆ ಮುಂದಾಗಿದ್ದಾರೆ.

ಕಾಡಾನೆ ಸೆರೆ ಕಾರ್ಯಾಚರಣೆ ಸ್ಥಳಕ್ಕೆ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಭೇಟಿ ನೀಡಿ, ಅರಣ್ಯಾಧಿಕಾರಿಗಳಿಂದ ಮಾಹಿತಿ ಪಡೆದರು. ಉಪಟಳ ನೀಡುತ್ತಿರುವ ಒಂದು ಕಾಡಾನೆ ಸೆರೆ ಹಾಗೂ ಎರಡು ಆನೆಗಳಿಗೆ ರೇಡಿಯೋ ಕಾಲರ್ ಅಳವಡಿಸುವ ಕಾರ್ಯಾಚರಣೆಗೆ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ತಂಡ ಮುಂದಾಗಿದೆ. ಕಾಡುಪ್ರಾಣಿಗಳ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ವೈಜ್ಞಾನಿಕ ಕಾರ್ಯ ಯೋಜನೆ ರೂಪಿಸಿದ್ದು, ಮುಂದಿನ ದಿನಗಳಲ್ಲಿ ಸಮಸ್ಯೆ ಬಗೆಹರಿಯಲಿದೆ ಎಂದು ತಿಳಿಸಿದರು.

ಡಿಸಿಎಫ್ ಜಗನ್ನಾಥ್ ಮಾತನಾಡಿ, ಮೊದಲ ದಿನದ ಕಾರ್ಯಾಚರಣೆಯಲ್ಲಿ ಕಾಡಾನೆಗಳ ಗುರುತು ಪತ್ತೆ ಹಚ್ಚಲಾಗಿದೆ. ಕಾರ್ಯಾಚರಣೆ ಮುಂದುವರಿಸಲಾಗುವುದು ಎಂದರು.

ಈ ಸಂದರ್ಭ ಎಸಿಎಫ್ ಗೋಪಾಲ್, ನೆಹರು, ಆರ್‌ಎಫ್‌ಓಗಳಾದ ಗಂಗಾಧರ, ದೇವಯ್ಯ, ಡಿಆರ್‌ಎಫ್‌ಓ ಶ್ರೀನಿವಾಸ್, ಉಮಾಶಂಕರ್, ದೇವರಾಜ್, ಆರ್‌ಆರ್‌ಟಿ ಸಿಬ್ಬಂದಿ ಹಾಜರಿದ್ದರು.

ಹಾರಂಗಿ ನಾಲೆಯಲ್ಲಿ ಅಪರಿಚಿತ ಶವ ಪತ್ತೆ

ಕುಶಾಲನಗರ, ಮೇ 14–ಸಮೀಪದ ಕೂಡಿಗೆ ಬಳಿಯ ಕಣಿವೆ ಗ್ರಾಮದ ಹಾರಂಗಿ ನಾಲೆಯಲ್ಲಿ ಮಂಗಳವಾರ ಅಪರಿಚಿತ ಯುವಕನ ಶವ ಪತ್ತೆಯಾಗಿದೆ.

ಮೃತನಿಗೆ ಸುಮಾರು 23 ರಿಂದ 26 ವರ್ಷವಾಗಿದ್ದು, ಯಾವುದೇ ಹೆಸರು ಅಥವಾ ವಿಳಾಸ ಪತ್ತೆಯಾಗಿಲ್ಲ. ಈತ ನಾಲೆ ಮೇಲಿಂದ ನೀರಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕುಶಾಲನಗರ ಗ್ರಾಮಾಂತರ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ವಾರಸುದಾರರು ಇದ್ದಲ್ಲಿ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆ ಸಂಪರ್ಕಿಸಬಹುದು.

ಮೇ 17, ಅದಾಲತ್

ಮಡಿಕೇರಿ: ಪ್ರಸಕ್ತ ಸಾಲಿನ ಮೈಸೂರು ವಿಭಾಗ ಮಟ್ಟದ ಪಿಂಚಣಿ ಅದಾಲತ್ ಕಾರ್ಯಕ್ರಮ ಮೇ 17ರಂದು ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾಧಿಕಾರಿ ಕಚೇರಿಯ ವಿಸಿ ಸಭಾಂಗಣದಲ್ಲಿ ವೆಬಿನಾರ್ ಮೂಲಕ ನಡೆಯಲಿದೆ. ಈ ಸಂಬಂಧ ಕುಂದು ಕೊರತೆಗಳು ಇದ್ದಲ್ಲಿ ನಿವೃತ್ತ ರಾಜ್ಯ ಸರ್ಕಾರಿ ನೌಕರರು ತಮ್ಮ ಅಹವಾಲುಗಳನ್ನು ಮೇ 15ರೊಳಗೆ ಕೊಡಗು ಜಿಲ್ಲೆಯ ಉಪ ನಿರ್ದೇಶಕರು, ಜಿಲ್ಲಾ ಖಜಾನೆ ಕೊಠಡಿ ಸಂಖ್ಯೆ 10, (ದೂಸಂ: 08272–225654) ಜಿಲ್ಲಾಡಳಿತ ಭವನ, ಮಡಿಕೇರಿ ಈ ವಿಳಾಸಕ್ಕೆ ಸಲ್ಲಿಸಬಹುದು ಎಂದು ಜಿಲ್ಲಾ ಖಜಾನೆ ಉಪ ನಿರ್ದೇಶಕ ರಘುನಾಥ್ ತಿಳಿಸಿದ್ದಾರೆ.

ನಾಮಫಲಕದಲ್ಲಿ ಶೇ.60ರಷ್ಟು ಕನ್ನಡ ಕಡ್ಡಾಯ

• ಅನುಷ್ಠಾನಕ್ಕೆ ಡಿಸಿ ವೆಂಕಟ್ ರಾಜಾ ಸೂಚನೆ • ಅಧಿಕಾರಿಗಳೊಂದಿಗೆ ವಿಡಿಯೋ ಸಂವಾದ

ಮಡಿಕೇರಿ, ಮೇ 14– ಕನ್ನಡ ಭಾಷೆ ಸಮಗ್ರ ಅಭಿವೃದ್ಧಿ ತಿದ್ದುಪಡಿ ವಿಧೇಯಕಕ್ಕೆ ಈಗಾಗಲೇ ಒಪ್ಪಿಗೆ ದೊರೆತಿದ್ದು, ಜಿಲ್ಲೆಯ ಎಲ್ಲಾ ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳು, ವಹಿವಾಟು ಕೇಂದ್ರಗಳು, ಉದ್ಯಮಗಳ ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡ ಭಾಷೆ ಇರಲೇಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್‌ರಾಜಾ ತಾಕೀತು ಮಾಡಿದರು.

ನಾಮಫಲಕಗಳಲ್ಲಿ ಕನ್ನಡ ಕಡ್ಡಾಯ ಅನುಷ್ಠಾನ ಸಂಬಂಧ ಅಧಿಕಾರಿಗಳೊಂದಿಗೆ ಮಂಗಳವಾರ ನಡೆದ ವಿಡಿಯೋ ಸಂವಾದದಲ್ಲಿ ಮಾತನಾಡಿದ ಅವರು, ಕನ್ನಡ ಭಾಷೆ ಸಮಗ್ರ ಅಭಿವೃದ್ಧಿಗೆ ಜಾರಿಯಾಗಿರುವ ಅಧಿ ನಿಯಮವನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕು. ಜಿಲ್ಲೆಯ ಗಡಿಭಾಗ ಸೇರಿದಂತೆ ನಗರ, ಪಟ್ಟಣ ಹಾಗೂ ಎಲ್ಲೆಡೆ ಅಳವಡಿಸಿರುವ ನಾಮಫಲಕದಲ್ಲಿ ಕಡ್ಡಾಯವಾಗಿ ಶೇ.60 ರಷ್ಟು ಕನ್ನಡಕ್ಕೆ ಪ್ರಥಮ ಆದ್ಯತೆ ನೀಡಬೇಕು. ಈ ನಿಟ್ಟಿನಲ್ಲಿ ಸ್ಥಳೀಯ ಸಂಸ್ಥೆಗಳು ಹಾಗೂ ಸಂಬಂಧಪಟ್ಟ ಇಲಾಖೆಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.



ಜಿಲ್ಲಾಧಿಕಾರಿ ವೆಂಕಟ್‌ರಾಜಾ

> ಈಗಾಗಲೇ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗಿದ್ದು, ನಾಮಫಲಕದಲ್ಲಿ ಶೇ.60ರಷ್ಟು ಕನ್ನಡ ಭಾಷೆ ಬಳಕೆ ಸಂಬಂಧಿಸಿದಂತೆ ನಗರದ 150 ಅಂಗಡಿಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ. ಅನುಷ್ಠಾನ ಸಂಬಂಧ ತಂಡ ರಚಿಸಲಾಗಿದೆ. ಈ ಬಗ್ಗೆ ವರದಿ ನೀಡಲಾಗುವುದು.
>
> -ವಿಜಯ್, ನಗರಸಭೆ ಪೌರಾಯುಕ್ತ, ಮಡಿಕೇರಿ

ಜಿಲ್ಲೆಯ ಸಾರ್ವಜನಿಕ ಸ್ಥಳಗಳಲ್ಲಿನ ನಾಮಫಲಕದಲ್ಲಿ ಕನ್ನಡ ಬಳಕೆ ಕಡ್ಡಾಯ ಅನುಷ್ಠಾನದ ಬಗ್ಗೆ ದೂರುಗಳು ಬರುತ್ತಿದ್ದು, ಈ ಬಗ್ಗೆ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಮತ್ತೊಮ್ಮೆ 7 ದಿನ ಕಾಲಾವಕಾಶ ನೀಡಿ, ಅನುಷ್ಠಾನಕ್ಕೆ ಮುಂದಾಗಬೇಕು. ಜಿಲ್ಲೆಯ ಎಲ್ಲಾ ಅಂಗಡಿ, ಹೋಟೆಲ್, ವಾಣಿಜ್ಯ ಸಂಕೀರ್ಣ, ಕೈಗಾರಿಕೋದ್ಯಮ, ಶಾಲಾ– ಕಾಲೇಜು, ಸರ್ಕಾರಿ ಕಚೇರಿಗಳು ಹಾಗೂ ಪ್ರವಾಸೋದ್ಯಮ ಕೇಂದ್ರಗಳ ನಾಮ ಫಲಕಗಳಲ್ಲಿ ಕನ್ನಡ ಬಳಕೆ ಕಡ್ಡಾಯವಾಗಿದ್ದು, ಈ ಸಂಬಂಧ ಆಯಾ ಇಲಾಖೆ ವ್ಯಾಪ್ತಿಯ ಅಧಿಕಾರಿಗಳು ತ್ವರಿತವಾಗಿ ಅನುಷ್ಠಾನಗೊಳಿಸಬೇಕು ಎಂದು ಆದೇಶಿಸಿದರು.

ಸ್ಥಳೀಯ ಪ್ರಾಧಿಕಾರಗಳಿಂದ ಅನುಮತಿ, ಮಂಜೂರಾತಿ ಪಡೆದ ಎಲ್ಲಾ ಸಂಸ್ಥೆ ಗಳಿಗೂ ಈ ಕಾಯ್ದೆ ಅನ್ವಯವಾಗಲಿದೆ. ಖಾಸಗಿ ಶಾಲಾ–ಕಾಲೇಜು, ಆಸ್ಪತ್ರೆ, ಪ್ರಯೋಗಾಲಯ, ಮನರಂಜನಾ ಕೇಂದ್ರ, ಹೋಟೆಲ್ ಸೇರಿದಂತೆ ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ನಾಮಫಲಕದಲ್ಲಿ ಶೇ.60ರಷ್ಟು ಕನ್ನಡ ಇರಬೇಕು ಎಂದು ನಿರ್ದೇಶನ ನೀಡಿದರು.

ಜಿಪಂ ಸಿಇಓ ವರ್ಣಿತ್ ನೇಗಿ ಮಾತನಾಡಿ, ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡ ಭಾಷೆ ಬಳಕೆ ಸಂಬಂಧಿಸಿದಂತೆ ತಾಪಂ ಮತ್ತು ಗ್ರಾಪಂ ಮೂಲಕ ತ್ವರಿತ ಕ್ರಮ ಕೈಗೊಳ್ಳಲಾಗುವುದು ಎಂದರು.

ಮಾಹಿತಿ ನೀಡಿದ ಅಧಿಕಾರಿಗಳು

ಸಂವಾದದಲ್ಲಿ ಕೈಗಾರಿಕಾ ಇಲಾಖೆ ಜಂಟಿ ನಿರ್ದೇಶಕ ದಿನೇಶ್, ನಗರಾಭಿವೃದ್ಧಿ ಯೋಜನಾ ಶಾಖೆ ನಿರ್ದೇಶಕ ಬಿ.ಬಸಪ್ಪ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಎಂ.ಚಂದ್ರಕಾಂತ್, ತಾಪಂ ಇಓ ಎಂ.ನಾಗಮಣಿ, ಪುರಸಭೆ ಮುಖ್ಯಾಧಿಕಾರಿಗಳಾದ ಕೃಷ್ಣಪ್ರಸಾದ್ (ಕುಶಾಲನಗರ), ಚಂದ್ರಕುಮಾರ್ (ವಿರಾಜಪೇಟೆ), ಸೋಮವಾರಪೇಟೆ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಲೋಕ್ಯ ನಾಯಕ್, ತಹಶೀಲ್ದಾರ್‌ಗಳು ನಾಮ ಫಲಕಗಳಲ್ಲಿ ಕನ್ನಡ ಅನುಷ್ಠಾನ ಸಂಬಂಧ ಹಲವು ಮಾಹಿತಿ ನೀಡಿದರು.

ಜಿಲ್ಲೆಯ ಸಂಸ್ಕೃತಿ ಉಳಿವಿಗೆ ಎಲ್ಲಾ ಜನಾಂಗ ಮುಖ್ಯ

ನಾಪೋಕ್ಲು, ಮೇ 14–ಜಿಲ್ಲೆಯ ವಿಶಿಷ್ಟ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ಪ್ರತಿಯೊಂದು ಜನಾಂಗದ ಪಾತ್ರ ಪ್ರಮುಖ ಎಂದು ಶಾಸಕ ಎ.ಎಸ್. ಪೊನ್ನಣ್ಣ ಅಭಿಪ್ರಾಯಪಟ್ಟರು.

ಕಕ್ಕಬೆಯ ಪ್ರೌಢಶಾಲಾ ಮೈದಾನದಲ್ಲಿ ಕೊಡಗು ಕಣಿಯ ವಿದ್ಯಾ ಅಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ ಕಣಿಯ ಜನಾಂಗದ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದ ವಿವಿಧ ಸಾಮುದಾಯಗಳ ಸಂಖ್ಯೆ ಕಡಿಮೆ ಇದ್ದರೂ ವಾರ್ಷಿಕ ಕ್ರೀಡಾಕೂಟ ಆಯೋಜಿಸುವ ಮೂಲಕ ಸಾಮುದಾಯವನ್ನು ಒಗ್ಗೂಡಿಸುವುದು ಹೆಮ್ಮೆಯ ವಿಷಯ. ಜಿಲ್ಲೆಯ ಪ್ರತಿಯೊಂದು ಜನಾಂಗ ತನ್ನದೇ ಆದ ಆಚಾರ–ವಿಚಾರ ಪದ್ಧತಿ, ಪರಂಪರೆಯನ್ನು ಹೊಂದಿದೆ. ಒಂದು ಜನಾಂಗವನ್ನು ಬಿಟ್ಟು ಜಿಲ್ಲೆ ಒಂದಾಗಲು ಸಾಧ್ಯವಿಲ್ಲ, ಎಲ್ಲರೂ ಒಟ್ಟಾದರೆ ಮಾತ್ರ ಜಿಲ್ಲೆಯ ಸಂಸ್ಕೃತಿ, ಆಚಾರ–ವಿಚಾರ ಬೆಳೆಯಲು ಸಾಧ್ಯ ಎಂದರು.



ಕಕ್ಕಬೆಯ ಪ್ರೌಢಶಾಲಾ ಮೈದಾನದಲ್ಲಿ ನಡೆದ ಕಣಿಯ ಜನಾಂಗದ ವಾರ್ಷಿಕ ಕ್ರೀಡಾಕೂಟದಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಅವರನ್ನು ಸನ್ಮಾನಿಸಲಾಯಿತು.

ಶಾಸಕರಿಗೆ ಮನವಿ ಸಲ್ಲಿಕೆ: ಇದೇ ವೇಳೆ ಹಾಕಿ ಕ್ರೀಡಾ ಮೈದಾನಕ್ಕೆ ಜಾಗ ಮಂಜೂರು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕೊಡವ ಭಾಷಿಕ ಸಮುದಾಯಗಳ ಕೂಟದ ವತಿಯಿಂದ ಶಾಸಕ ಎ.ಎಸ್. ಪೊನ್ನಣ್ಣ ಅವರಿಗೆ ಮನವಿ ಸಲ್ಲಿಸಲಾಯಿತು.

ಕೂಟದ ಅಧ್ಯಕ್ಷ ಡಾ.ಮೇಚಿರ ಸುಭಾಷ್ ನಾಣಯ್ಯ ನೇತೃತ್ವದಲ್ಲಿ ಎಲ್ಲಾ 21 ಮೂಲ ನಿವಾಸಿ ಭಾಷಿಕ ನಿರ್ದೇಶಕರ ನಿಯೋಗ ಶಾಸಕರನ್ನು ಭೇಟಿಯಾಗಿ ಬೇಡಿಕೆಗಳ ಕುರಿತು ಚರ್ಚಿಸಿತು.

ಸುಮಾರು 1 ಲಕ್ಷಕ್ಕೂ ಮೇಲ್ಪಟ್ಟು ಜನಸಂಖ್ಯೆ ಹೊಂದಿರುವ ವಿಶಿಷ್ಟ ಸಂಸ್ಕೃತಿಯ, ಕೊಡವ ಭಾಷೆ ಮಾತನಾಡುವ ಕೊಡಗಿನ ಮೂಲ ನಿವಾಸಿ 21 ಸಮುದಾಯಗಳ ಸಂವಿಧಾನ ಬದ್ಧ ಮೂಲಭೂತ ಹಕ್ಕುಗಳನ್ನು ಈಡೇರಿಸಬೇಕು. ಜನಾಂಗದ ಸರ್ವಾಂಗೀಣ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಸುಸಜ್ಜಿತ ಕಲ್ಯಾಣ ಮಂಟಪ ನಿರ್ಮಾಣ, ಹಾಕಿ ಮೈದಾನಕ್ಕೆ ಪೈಸಾರಿ ಜಾಗ ಮಂಜೂರು ಮಾಡುವುದು, ಮೂಲ ನಿವಾಸಿ ಜನಪದ ಅಧ್ಯಯನ ಕೇಂದ್ರ, ಪುರಾತನ ತಾಳೇಗರಿ ವಸ್ತು ಸಂಗ್ರಹಾಲಯ, ಪ್ರಾಚ್ಯ ಗ್ರಂಥ ಭಂಡಾರ, ಆಟ್‌ಪಾಟ್ ಪಡಿಪ್ ಕೇಂದ್ರ ಸ್ಥಾಪನೆಗೆ ಅಗತ್ಯ ನೆರವು ನೀಡಬೇಕೆಂದು ಮನವಿ ಮಾಡಲಾಯಿತು. ಮನವಿ ಸ್ವೀಕರಿಸಿ ಎ.ಎಸ್.ಪೊನ್ನಣ್ಣ, ಬೇಡಿಕೆ ಈಡೇರಿಸುವುದಾಗಿ ಭರವಸೆ ನೀಡಿದರು.

ಇದೇ ವೇಳೆ ಡಾ.ಮೇಚಿರ ಸುಭಾಷ್ ನಾಣಯ್ಯ, ಕೆಡಿಪಿ ಸದಸ್ಯ ಬಾಚಮಂಡ ಲವ ಚಿಣ್ಣಪ್ಪ, ಬುಡಕಟ್ಟು ಜನಾಂಗದ ಅಧ್ಯಕ್ಷ ಕುಡಿಯರ ಮುತ್ತಪ್ಪ, ಕಣಿಯ ವಿದ್ಯಾ ಅಭಿವೃದ್ಧಿ ಸಂಘದ ಅಧ್ಯಕ್ಷ ಚೆಂದುವಂಡ ದೇವಯ್ಯ, ಮಾಜಿ ಅಧ್ಯಕ್ಷ ಕಣಿಯರ ನಾಣಯ್ಯ,

ಕೂಟದ ಸಹಕಾರ್ಯದರ್ಶಿ ಮೊಳ್ಳೆಕುಟ್ಟಡ ದಿನು ಬೋಜಪ್ಪ, ಪ್ರಮುಖರಾದ ಕಣಿಯಂಡ ಪ್ರಕಾಶ್, ಜೋಕೀರ ಜೀವನ್, ತಾಪನೆರ ಮಹೇಶ್, ಮುಡುವಂಡ ರೆಗನ್, ಚೆಂದುವಂಡ ದೇವಯ್ಯ, ಕಲ್ಲಚಂಡ ಉಷಾ ರಾಜೇಶ್, ಕುಡವಚೆರಿರ ಉಮೇಶ್ ಹಾಜರಿದ್ದರು.

ಹುಲಿ ಮಸಣಿಕಮ್ಮ ದೇವಸ್ಥಾನದಲ್ಲಿ ವಿಶೇಷ ಪೂಜೆ



ಸುಂಟಿಕೊಪ್ಪದ ಗುಡ್ಡಪ್ಪ ರೈ ಬಡಾವಣೆಯ ಹುಲಿ ಮಸಣಿಕಮ್ಮ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಸುಂಟಿಕೊಪ್ಪ, ಮೇ 14–ಇಲ್ಲಿನ ಗುಡ್ಡಪ್ಪ ರೈ ಬಡಾವಣೆಯ ಶ್ರೀ ಹುಲಿ ಮಸಣಿಕಮ್ಮ ದೇವಸ್ಥಾನದ ವಾರ್ಷಿಕೋತ್ಸವ ಅಂಗವಾಗಿ ದೇವಾಲಯದಲ್ಲಿ ಮಂಗಳವಾರ ವಿಶೇಷ ಪೂಜಾ ಕೈಂಕರ್ಯ ನೆರವೇರಿದವು. ದೇವಿಗೆ ಬೆಳಗ್ಗೆ 7 ರಿಂದ 9 ಗಂಟೆವರೆಗೆ ವಿಶೇಷ ಪೂಜೆ ನೆರವೇರಿಸಲಾಯಿತು. 9.30 ರಿಂದ 10 ಗಂಟೆವರೆಗೆ ದೇವಿಗೆ ಭಕ್ತರು ವಿವಿಧ ಅರ್ಪಣೆ ಸಲ್ಲಿಸಿದರು. ಮಧ್ಯಾಹ್ನ 1 ಗಂಟೆಗೆ ಮಹಾಪೂಜೆ, ಮಂಗಳಾರತಿಯೊಂದಿಗೆ ಪ್ರಸಾದ ವಿತರಿಸಲಾಯಿತು. ಸುಂಟಿಕೊಪ್ಪ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ನೂರಾರು ಭಕ್ತರು ಭಾಗವಹಿಸಿದ್ದರು.

ಕೆರೆಗೆ ನೀರು ತುಂಬಿಸಲು ಮನವಿ



ಬಂಡಿಗೆರೆ ಕೆರೆಗೆ ನೀರು ತುಂಬಿಸುವಂತೆ ಒತ್ತಾಯಿಸಿ ರೈತರು ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಿದರು.

ಚಾಮರಾಜನಗರ, ಮೇ 14–ತಾಲೂಕಿನ ಬಂಡಿಗೆರೆ ಕೆರೆಗೆ ಆದಷ್ಟು ಬೇಗ ನೀರು ತುಂಬಿಸಬೇಕು ಎಂದು ರೈತರು ಒತ್ತಾಯಿಸಿ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಿದರು.

ತಾಲೂಕಿನ ಕೋಡಿಮೋಳೆ ಕೆರೆಯಿಂದ ಬಂಡಿಗೆರೆ ಕೆರೆ, ಚಿಕ್ಕಕೆರೆ, ದೊಡ್ಡಕೆರೆ ಸೇರಿದಂತೆ ಹಲವು ಕೆರೆಗಳಿಗೆ ನೀರು ತುಂಬಿಸುವ ಸಲುವಾಗಿ ಪೈಪ್ ಲೈನ್ ಅಳವಡಿಕೆ ಕಾರ್ಯ ಮುಗಿದಿದ್ದರೂ ಕಾಮಗಾರಿ ಪೂರ್ಣಗೊಂಡಿಲ್ಲ ಎಂದು ಕೆರೆಗಳಿಗೆ ನೀರು ಬಿಟ್ಟಿಲ್ಲ. ಈ ಯೋಜನೆ ಕಾಮಗಾರಿ ಕಳೆದ 5 ವರ್ಷಗಳಿಂದಲೂ ಆಮೆಗತಿಯಲ್ಲಿ ನಡೆಯುತ್ತಿದ್ದು, ಇದರಿಂದ ಕೆರೆಯ ಅಚ್ಚುಕಟ್ಟುದಾರರ ಬೆಳೆಗಳು ಹಾಗೂ ದನಕರುಗಳಿಗೆ ನೀರಿನ ಅಭಾವ ಉಂಟಾಗಿ ಅನಾನುಕೂಲವಾಗಿದೆ. ಸಂಭಂದಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡುವ ಮೂಲಕ ಕಾಮಗಾರಿಯನ್ನು ಆದಷ್ಟು ಬೇಗ ಮುಗಿಸಿ, ಎಲ್ಲಾ ಕೆರೆಗಳಿಗೆ ನೀರು ತುಂಬಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ರೈತರು ಮನವಿ ಮಾಡಿದರು.

ಈ ವೇಳೆ ರೈತರಾದ ಜಯಸಿಂಹ, ಹೊಸೂರು ಜಗದೀಶ್, ಮಹದೇವಸ್ವಾಮಿ, ನಾಗೇಂದ್ರಸ್ವಾಮಿ, ಚಂದ್ರಶೇಖರ್, ಮಹದೇವಶೆಟ್ಟಿ, ಕಾವೇರಿ ಶಿವಕುಮಾರ್, ಸಿದ್ದೇಶ್ ಇತರರು ಹಾಜರಿದ್ದರು.

ಎಲ್ಲರೂ ಮಹನೀಯರ ಜಯಂತಿ ಆಚರಿಸುವಂತಾಗಲಿ

• ಜಿಲ್ಲಾಧಿಕಾರಿ ಶಿಲ್ಪಾನಾಗ್ ಅಭಿಮತ • ಚಾ.ನಗರದಲ್ಲಿ ಭಗೀರಥ ಮಹರ್ಷಿ ಜಯಂತಿ

ಚಾಮರಾಜನಗರ, ಮೇ 14–ಮಹಾಪುರುಷರನ್ನು ಒಂದೇ ಸಮುದಾಯಕ್ಕೆ ಸೀಮಿತಗೊಳಿಸದೇ, ಎಲ್ಲರೂ ಎಲ್ಲಾ ಮಹನೀಯರ ಜಯಂತಿಯನ್ನು ಆಚರಿಸಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಭಗೀರಥ ಮಹರ್ಷಿ ಜಯಂತಿ ಉದ್ಘಾಟಿಸಿ, ಮಾತನಾಡಿದ ಅವರು, ಎಲ್ಲಾ ಸಮುದಾಯಗಳಲ್ಲೂ ಆದರ್ಶ ಪುರುಷರಿದ್ದಾರೆ. ಅವರ ಜಯಂತಿಗಳನ್ನು ಎಲ್ಲಾ ಸಮುದಾಯದವರು ಆಚರಿಸಲಿ. ಭಗೀರಥ ಮಹರ್ಷಿ ಕಠಿಣ ತಪಸ್ಸಿನಿಂದ ಗಂಗೆಯನ್ನು ಧರೆಗೆ ಇಳಿಸಿದ ವಿಚಾರ ರೋಚಕವಾಗಿದೆ.



ಚಾ.ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಗೀರಥ ಮಹರ್ಷಿ ಭಾವಚಿತ್ರಕ್ಕೆ ಡಿಸಿ ಶಿಲ್ಪಾನಾಗ್, ಎಡಿಸಿ ಗೀತಾ ಹುಡೇದ, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ ಪುಷ್ಪಾರ್ಚನೆ ಮಾಡಿದರು.

ಉಪ್ಪಾರ ಸಮುದಾಯ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿ, ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ತಿಳಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಮಾತನಾಡಿ, ರಾಮಾಯಣ ಮತ್ತು ಮಹಾಭಾರತದಲ್ಲಿ ಮಹರ್ಷಿಗಳ ಉಲ್ಲೇಖವಿದೆ. ಭಗೀರಥರು ತಮ್ಮ ಪೂರ್ವಜರ ಮುಕ್ತಿಗಾಗಿ ಗಂಗೆಯನ್ನು ಧರೆಗೆ ಇಳಿಸಿದರು. ಇವರ ಆದರ್ಶಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಕಠಿಣ ಕೆಲಸಗಳಿಗೆ ಹೆಸರುವಾಸಿಯಾಗಿರುವ ಭಗೀರಥರು ಇಂದಿನ ಯುವ ಜನತೆಗೆ ಮಾದರಿಯಾಗಿದ್ದಾರೆ ಎಂದು ಸ್ಮರಿಸಿದರು.

ಶಿಕ್ಷಕ ಗೋವಿಂದರಾಜು ಮಾತನಾಡಿ, ಕ್ರಿಶ 1236ರ ಹೊಯ್ಸಳ ಬಲ್ಲಾಳನ ತಾಮ್ರ ಶಾಸನದಲ್ಲಿ ಉಪ್ಪಾರರ ಬಗ್ಗೆ ಉಲ್ಲೇಖವಿದೆ. ಪಾವಗಡ ಹಾಗೂ ಹೈದಾಲಿ ಶಾಸನಗಳಲ್ಲೂ ಉಪ್ಪಾರ ಜನಾಂಗದ ಇತಿಹಾಸವನ್ನು ಕಾಣಬಹುದು. ಉಪ್ಪು ತಯಾರಿಕೆ ವೃತ್ತಿಯಲ್ಲಿ ತೊಡಗಿದ್ದ ಉಪ್ಪಾರ ಜನಾಂಗಕ್ಕೆ 1880ರಲ್ಲಿ ಬ್ರಿಟಿಷರು ನಿರ್ಬಂಧ ಹೇರಿ, ತಾವೇ ಉಪ್ಪು ತಯಾರಿಕೆ ಪ್ರಾರಂಭಿಸಿದ ಪರಿಣಾಮ ಉಪ್ಪಾರರು ಬೇರೆ ಬೇರೆ ವೃತ್ತಿಗಳನ್ನು ಕೈಗೊಂಡರು. ಜನಾಂಗ ಸಂಘಟಿತರಾಗುವ ಜೊತೆಗೆ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಶಾಲೆಯಿಂದ ಹೊರಗುಳಿಯುವುದನ್ನು ತಪ್ಪಿಸಬೇಕು ಹಾಗೂ ಬಾಲ್ಯವಿವಾಹ ಪದ್ಧತಿ ಸಂಪೂರ್ಣವಾಗಿ ತೊಡೆದು ಹಾಕಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ, ಉಪವಿಭಾಗಾಧಿಕಾರಿ ಶಿವಮೂರ್ತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಎಸ್.ಚಿದಂಬರ, ಸಮುದಾಯದ ಮುಖಂಡರು ಹಾಜರಿದ್ದರು.

ಪ್ರಶಸ್ತಿಗೆ ಅರ್ಜಿ ಆಹ್ವಾನ

ಚಾಮರಾಜನಗರ: ರೇಷ್ಮೆ, ಹತ್ತಿ ಮತ್ತು ಉಣ್ಣೆ ಕೈಮಗ್ಗ ನೇಕಾರರಿಗೆ ರಾಜ್ಯಮಟ್ಟದ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲೆಯ ಅರ್ಹ ನೇಕಾರರು ಸ್ವತಃ ತಾವೇ ತಯಾರಿಸಿದ ಉತ್ಪನ್ನದ ಮಾದರಿಗಳೊಂದಿಗೆ ಮೇ 31ರೊಳಗೆ ಅರ್ಜಿಯನ್ನು ನಗರದ ಜಿಲ್ಲಾಡಳಿತ ಭವನದ ಕೈಮಗ್ಗ ಮತ್ತು ಜವಳಿ ಇಲಾಖೆ ಕಚೇರಿಗೆ ಸಲ್ಲಿಸಬೇಕು. ಮಾಹಿತಿಗೆ ದೂ.ಸಂ: 08226–222883 ಅನ್ನು ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಶೋಷಿತರ ಸಂಕಷ್ಟಗಳಿಗೆ ಶ್ರಮಿಸಿದ ಶ್ರೀನಿವಾಸಪ್ರಸಾದ್

ಚಾಮರಾಜನಗರ, ಮೇ 14–ಹೋರಾಟದ ಹಿನ್ನೆಲೆಯಿಂದ ಬಂದ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರು ಬುದ್ಧ, ಬಸವ, ಅಂಬೇಡ್ಕರ್ ಅವರ ಹಾದಿಯಲ್ಲಿ ಸಾಗುವ ಮೂಲಕ ಶೋಷಿತರ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿದ್ದರು ಎಂದು ಹಿರಿಯ ಸಾಹಿತಿ ಡಾ.ಮೂಡ್ನಾಕೂಡು ಚಿನ್ನಸ್ವಾಮಿ ಸ್ಮರಿಸಿದರು.

ನಗರದ ಡಾ.ರಾಜ್‌ಕುಮಾರ್ ಕಲಾಮಂದಿರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಂಘಗಳ ಒಕ್ಕೂಟ ಹಾಗೂ ವಿ.ಶ್ರೀನಿವಾಸಪ್ರಸಾದ್ ಅಭಿಮಾನಿಗಳ ಬಳಗದ ವತಿಯಿಂದ ನಡೆದ 'ಸ್ವಾಭಿಮಾನಿ ಚಕ್ರವರ್ತಿ ವಿ.ಶ್ರೀನಿವಾಸಪ್ರಸಾದ್ ನಿಮಗಿದೋ ನಮ್ಮ ನಮನ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶ್ರೀನಿವಾಸಪ್ರಸಾದ್ ಅವರು ತಮ್ಮ 50 ವರ್ಷಗಳ ಸುದೀರ್ಘ ರಾಜಕಾರಣದಲ್ಲಿ ಯಾವುದೇ ಕಪ್ಪುಚುಕ್ಕೆ ಇಲ್ಲದೇ ಸ್ವಾಭಿಮಾನದಿಂದ ರಾಜಕಾರಣ ಮಾಡಿದ ಧೀಮಂತ ನಾಯಕ. ಸದಾ ಜನರ ಹಿತಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟು ಹೋರಾಡಿದರು. ವಿದ್ಯಾರ್ಥಿ ಚಳವಳಿಯ ಮೂಲಕ ರಾಜಕಾರಣಕ್ಕೆ ಬಂದ ಪ್ರಸಾದ್ ಅವರು ಎಂದು ಸಹ ವ್ಯವಸ್ಥೆಗೆ ರಾಜಿಯಾಗಲಿಲ್ಲ ಎಂದರು.

ನಿವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಡಾ.ಆರ್.ರಾಜು ಮಾತನಾಡಿ, ಶ್ರೀನಿವಾಸಪ್ರಸಾದ್ ತಮ್ಮ 50 ವರ್ಷಗಳ ರಾಜಕಾರಣದಲ್ಲಿ ಅಭಿವೃದ್ಧಿ ಹಾಗೂ ಜನ ಪರವಾಗಿ ಚಿಂತನೆ ಮಾಡುತ್ತಿದ್ದರು. ಅವರೊಂದಿಗಿನ ನನ್ನ ಒಡನಾಟ 30 ವರ್ಷಗಳಿಗೂ ಹೆಚ್ಚು ಕಾಲವಿತ್ತು. ನಾನು ಅಧಿಕಾರಿಯಾಗಿ ಅವರೊಂದಿಗೆ ಬೆರೆತ ಕ್ಷಣಗಳು ಅವಿಸ್ಮರಣೀಯ ಎಂದು ನೆನಪಿಸಿಕೊಂಡರು.



ಚಾಮರಾಜನಗರದ ರಾಜ್‌ಕುಮಾರ್ ಕಲಾಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೇಣದ ಬತ್ತಿ ಹಚ್ಚಿ ಶ್ರೀನಿವಾಸಪ್ರಸಾದ್ ಅವರಿಗೆ ನಮನ ಸಲ್ಲಿಸಲಾಯಿತು. ಪ್ರೊ.ಮೂಡ್ನಾಕೂಡು ಚಿನ್ನಸ್ವಾಮಿ, ಮನೋರಖ್ಖಿತ ಬಂತೇಜಿ, ಪ್ರತಿಮಾ ಪ್ರಸಾದ್, ಡಾ.ಆರ್.ರಾಜು ಇದ್ದರು.

ಶ್ರೀನಿವಾಪ್ರಸಾದ್ ಅವರ ಪುತ್ರಿ ಪ್ರತಿಮಾ ಪ್ರಸಾದ್ ಮಾತನಾಡಿ, ಚಾಮರಾಜನಗರ ನನ್ನ ತಂದೆಗೆ ರಾಜಕೀಯವಾಗಿ ಶಕ್ತಿ ನೀಡಿದ ಜಿಲ್ಲೆ. ಅವರಿಗೆ ಜಿಲ್ಲೆಯ ಜನರ ಬಗ್ಗೆ ಅಪಾರವಾದ ಪ್ರೀತಿ ಇತ್ತು. ಅವರ ಪಾರ್ಥಿವ ಶರೀರವನ್ನು ಚಾ.ನಗರಕ್ಕೆ ತರಬೇಕಾಗಿತ್ತು. ಆದರೆ, ವೈದ್ಯಕೀಯ ಕಾರಣದಿಂದಾಗಿ ಸಾಧ್ಯವಾಗಲಿಲ್ಲ. ಆದ್ದರಿಂದ ನಮ್ಮ ಕುಟುಂಬದ ಪರವಾಗಿ ನಿಮ್ಮೆಲ್ಲರ ಕ್ಷಮೆ ಕೋರುತ್ತೇನೆ ಎಂದು ಭಾವುಕರಾದರು.

ಮೈಸೂರಿನ ಕಾಲೇಜು ಅಭಿವೃದ್ಧಿ ಪರಿಷತ್‌ನ ನಿರ್ದೇಶಕ ಪ್ರೊ.ಡಿ.ಆನಂದ್ ಮಾತನಾಡಿದರು. ಕೊಳ್ಳೇಗಾಲದ ಚೇತವನ ಬೌದ್ಧ ವಿಹಾರದ ಮನೋರಖ್ಖಿತ ಬಂತೇಜಿ ಆಶೀರ್ವಚನ ನೀಡಿದರು. ಕಾರ್ಯಕ್ರಮಕ್ಕೂ ಮುನ್ನ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಶ್ರೀನಿವಾಸಪ್ರಸಾದ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಸಿಎಂ ಕಾರ್ಯಕ್ರಮಕ್ಕೆ ಮೈಸೂರಿಗೆ ತೆರಳಿದರು. ಶ್ರೀನಿವಾಸಪ್ರಸಾದ್ ಆಪ್ತ ಎಂ.ವೆಂಕಟಪತಿ ತಿರುಪ್ಪೂರ್, ನಗರಸಭಾ ಸದಸ್ಯ ಆರ್.ಎಂ.ರಾಜಪ್ಪ, ಡಾ.ಬಿ.ಆರ್.ಅಂಬೇಡ್ಕರ್ ಸಂಘಗಳ ಒಕ್ಕೂಟದ ಅಧ್ಯಕ್ಷ ಸಿ.ಕೆ.ಮಂಜುನಾಥ್, ನಗರಸಭಾ ಮಾಜಿ ಸದಸ್ಯ ಬಸವರಾಜು, ರಾಮಸಮುದ್ರ ಪ್ರಸನ್ನ, ಬಂಗಾರು, ನರಸಿಂಹಮೂರ್ತಿ ಇದ್ದರು.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲೂ ಆಚರಣೆ



ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಭಗೀರಥ ಮಹರ್ಷಿಗಳ ಜಯಂತಿ ಆಚರಿಸಲಾಯಿತು. ಶಾಸಕ ಸಿ.ಪುಟ್ಟರಂಗಶೆಟ್ಟಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಇದ್ದರು.

ಚಾಮರಾಜನಗರ, ಮೇ 14–ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಮಂಗಳವಾರ ಭಗೀರಥ ಮಹರ್ಷಿಗಳ ಜಯಂತಿ ಆಚರಿಸಲಾಯಿತು.


ಶಾಸಕ ಸಿ.ಪುಟ್ಟರಂಗಶೆಟ್ಟಿ ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಅವರು ಭಗೀರಥ ಮಹರ್ಷಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಬಳಿಕ ಮಾತನಾಡಿದ ಶಾಸಕ ಸಿ. ಪುಟ್ಟರಂಗಶೆಟ್ಟಿ, ಸೂರ್ಯವಂಶ ರಾಜನಾದ ಭಗೀರಥ ಮಹಾರಾಜರು ತನ್ನ ಜನರಿಗಾಗಿ ಶಿವನ ತಪಸ್ಸು ಮಾಡಿ ಗಂಗೆಯನ್ನು ಧರೆಗೆ ತಂದ ಮಹಾಪುರುಷರು. ಅವರ ತತ್ವ ಸಿದ್ಧಾಂತಗಳು ಇಂದಿಗೂ ಪ್ರಸ್ತುತವಾಗಿದೆ. ಅವರ ತತ್ವಾದರ್ಶವನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಭಗೀರಥ ಮಹರ್ಷಿಗಳ ತಪೋ ಶಕ್ತಿಗೆ ಶಿವನೇ ಪ್ರತ್ಯಕ್ಷನಾಗಿ ಧರೆಗೆ ಗಂಗೆಯನ್ನು ಇಳಿಸಿದರು ಎಂಬ ಸತ್ಯ ಘಟನೆಯನ್ನು ನಾವೆಲ್ಲರು ಅರಿತುಕೊಳ್ಳಬೇಕು. ಇಂತಹ ಮಹರ್ಷಿಗಳ ಜಯಂತಿಯನ್ನು ಆಚರಿಸೋಣ ಎಂದು ತಿಳಿಸಿದರು.


ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವ್, ಬ್ಲಾಕ್ ಅಧ್ಯಕ್ಷ ಮಹಮದ್ ಅಸ್ಗರ್, ಕಾರ್ಯದರ್ಶಿ ಕಾಗಲವಾಡಿ ಚಂದ್ರು, ಮುಖಂಡರಾದ ಶಿವಮೂರ್ತಿ, ಜಿಪಂ ಮಾಜಿ ಸದಸ್ಯ ಸೋಮನಾಯಕ, ತಾಪಂ ಮಾಜಿ ಸದಸ್ಯ ಎಂ.ಮಹದೇವಶೆಟ್ಟಿ, ಸೈಯದ್ ರಫಿ, ಎಪಿಎಂಸಿ ಅಧ್ಯಕ್ಷ ಸೋಮೇಶ್, ಮಾಜಿ ಅಧ್ಯಕ್ಷ ಡಿ.ನಾಗೇಂದ್ರ, ನಿರ್ದೇಶಕ ಆಲೂರು ಪ್ರದೀಪ್, ಉಮೇಶ್, ಅರುಣ್ ಕುಮಾರ್, ಗೌಡಹಳ್ಳಿ ರಾಜೇಶ್, ಪುಟ್ಟಸ್ವಾಮಿ, ಸ್ವಾಮಿ, ರವಿಗೌಡ, ಮೋಹನ್ ನಾಗು, ಅಕ್ಷಯ್, ನಗರಸಭಾ ಸದಸ್ಯೆ ಚಿನ್ನಮ್ಮ, ಜಿಪಂ ಮಾಜಿ ಸದಸ್ಯ ಕಾವೇರಿ ಶಿವಕುಮಾರ್, ಸೇವಾದಳದ ಅಧ್ಯಕ್ಷ ಹೊಂಗನೂರು ಜಯರಾಜ್, ಶಿವಸ್ವಾಮಿ, ನಾಗರಾರ್ಜುನ ವೃಥ್ವಿ, ಎಚ್‌ಎನ್ ಖಾನ್, ದೊಡ್ಡಮೋಳೆ ಪುಟ್ಟಸ್ವಾಮಿ ಇದ್ದರು.

ಮಹದೇವಸ್ವಾಮಿ ನಿಧನ



ಬೇಗೂರು, ಮೇ 14–ಸಮೀಪದ ಬೆಳಚಲವಾಡಿ ಗ್ರಾಮದ ಬಿಜೆಪಿ ಮುಖಂಡ ಭಂಡಾರಿ ಮಹದೇವಸ್ವಾಮಿ(50) ಮಂಗಳವಾರ ನಿಧನರಾದರು. ಮೃತರು ಪತ್ನಿ ಗ್ರಾಪಂ ಮಾಜಿ ಸದಸ್ಯೆ ದೇವಮ್ಮಣಿ, ಪುತ್ರ, ಪುತ್ರಿಯನ್ನು ಅಗಲಿದ್ದಾರೆ. ಬುಧವಾರ ಬೆಳಗ್ಗೆ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಿನ್ನಪ್ಪ



ಬೇಗೂರು, ಮೇ 14– ಬೆಟ್ಟದ ಮಾದಹಳ್ಳಿ ಗ್ರಾಮದ ವೀರಶೈವ ಲಿಂಗಾಯತ ಸಮಾಜದ ಹಿರಿಯ ಮುಖಂಡ ಚಿನ್ನಪ್ಪ ಮಂಗಳವಾರ ಸಂಜೆ ನಿಧನರಾದರು. ಚಿನ್ನಪ್ಪ ಗ್ರಾಪಂ ಸದಸ್ಯ ಹಾಗೂ ಕೋಟೆಕೆರೆ ಪಿಎಸಿಸಿ ಬ್ಯಾಂಕ್ ನಿರ್ದೇಶಕರಾಗಿದ್ದರು. ಮೃತರಿಗೆ ಪುತ್ರ ಮಂಜು ಇದ್ದಾರೆ. ಮೃತರ ತೋಟದಲ್ಲಿ ಬುಧವಾರ ಬೆಳಗ್ಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರೇವಣ್ಣ ಬಂಧನ ರಾಜಕೀಯ ಪ್ರೇರಿತ; ಇದೆಲ್ಲದರ ಹಿಂದೆ ಸರ್ಕಾರದ 'ದೊಡ್ಡ ತಿಮಿಂಗಿಲ' ಇದೆ

● ಮಾಜಿ ಸಿಎಂ ಕುಮಾರಸ್ವಾಮಿ ಪರೋಕ್ಷವಾಗಿ ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ವಾಗ್ದಾಳಿ ● ತಪ್ಪು ಮಾಡಿದವರ ಬಂಧಿಸಿಲ್ಲ; ಏನೂ ತಪ್ಪು ಮಾಡದವರ ಶಿಕ್ಷಿಸಲಾಗುತ್ತಿದೆ



ಬೆಂಗಳೂರು, ಮೇ14(ಕೆಎಂಶಿ)– ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ಬಂಧನ ರಾಜಕೀಯ ಪ್ರೇರಿತ ಎಂದು ಕಿಡಿಕಾರಿದ ಮಾಜಿ ಮುಖ್ಯ ಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಇದೆಲ್ಲದರ ಹಿಂದೆ ಸರ್ಕಾರದಲ್ಲಿರುವ ದೊಡ್ಡ ತಿಮಿಂಗಿಲ ಇದೆ ಎಂದು ಗುಡುಗಿದರು.

ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇವೇಗೌಡರ ಕುಟುಂಬಕ್ಕೆ ಕಳಂಕ ತರಲು ಈ ರೀತಿ ಮಾಡಿದ್ದಾರೆ ಎಂದು ನೇರವಾಗಿ ಆರೋಪಿಸಿದರು.

ರೇವಣ್ಣ ಅವರ ಜಾಮೀನು ಅರ್ಜಿ ವಿಚಾರಣೆ ಸಂದರ್ಭದಲ್ಲಿ ನಡೆದ ವಾದ–ಪ್ರತಿವಾದದಿಂದ ರೇವಣ್ಣ ಅವರ ಬಂಧನ ರಾಜಕೀಯ ಪ್ರೇರಿತ ಮತ್ತು ನಮ್ಮ ಕುಟುಂಬವನ್ನು ಗುರಿಯಾಗಿಟ್ಟುಕೊಂಡಿದ್ದು ಎಂಬುದು ಮೇಲ್ನೋಟಕ್ಕೆ ಕಾಣುತ್ತದೆ. ತಪ್ಪು ಮಾಡದವರನ್ನು ಶಿಕ್ಷಿಸಿ, ಆರೋಪಿಗಳನ್ನು ಬಂಧಿಸದಿರುವುದಕ್ಕೇ ಸರ್ಕಾರದಲ್ಲಿರುವ ದೊಡ್ಡ ತಿಮಿಂಗಿಲವೇ ಕಾರಣ ಎಂದು ಪರೋಕ್ಷವಾಗಿ ಶಿವಕುಮಾರ್ ವಿರುದ್ಧ ಹರಿಹಾಯ್ದರು.

ಅಷ್ಟೇ ಅಲ್ಲ, ದೊಡ್ಡ ತಿಮಿಂಗಿಲ, ನನ್ನ ತೇಜೋವಧೆ ಮಾಡಲು ಮಂಡ್ಯದ ಐದು ಚಿಕ್ಕ ತಿಮಿಂಗಲಗಳ ಜೊತೆ ಸಭೆ ನಡೆಸಿ, ಅವರ ಬಾಯಿಂದ ಆರೋಪಗಳನ್ನು ಮಾಡಿಸುತ್ತಿದೆ. ನನ್ನದು ತೆರೆದ ಪುಸ್ತಕ, ಮಾಡಿದ ತಪ್ಪನ್ನು ವಿಧಾನಸಭೆಯಲ್ಲೇ ಒಪ್ಪಿಕೊಂಡಿದ್ದೇನೆ. ನಾನು ಯಾರಿಗೂ ಅನ್ಯಾಯ ಮಾಡಿಲ್ಲ, ಕಷ್ಟವನ್ನೂ ಕೊಟ್ಟಿಲ್ಲ. ಆದರೆ ನಾನು ಕಷ್ಟ ಅನುಭವಿಸಿದ್ದೇನೆ, ತಾಕತ್ತಿದ್ದರೆ ದಾಖಲೆಗಳನ್ನು ಬಿಡುಗಡೆ ಮಾಡಲಿ ಎಂದು ತಿಮಿಂಗಿಲಗಳಿಗೆ ಸವಾಲು ಹಾಕಿದರು. ಮಾಹಿತಿ ತಂತ್ರಜ್ಞಾನ ಯುಗ ಬೆಳೆಯುತ್ತಿದ್ದಂತೆ ಇಂತಹ ಸಿಡಿಗಳ ಜಾಲಕ್ಕೆ ಸಿಲುಕಿ ಕುಟುಂಬಗಳು ನಾಶವಾಗುತ್ತಿವೆ. ಕೆಲವರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಇಂತಹ ಪ್ರಕರಣಗಳಿಗೆ ಇತಿಶ್ರೀ ಹಾಡಲು ಎಸ್ಐಟಿ ಪ್ರಾಮಾಣಿಕ ತನಿಖೆ ನಡೆಸಿ, ನ್ಯಾಯ ಕೊಡಿಸಬೇಕು ಎಂದು ಮನವಿ ಮಾಡಿದರು.

ಮಕ್ಕಳು ದಾರಿ ತಪ್ಪಿದರೆ ತಂದೆ–ತಾಯಿ ಏನೂ ಮಾಡಲು ಸಾಧ್ಯವಿಲ್ಲ. ಪ್ರಜ್ವಲ್ ರೇವಣ್ಣ ಅವರನ್ನು ವಹಿಸಿಕೊಂಡು ಮಾತನಾಡುವ ಪ್ರಶ್ನೆಯೇ ಇಲ್ಲ. ರೆಡ್ ಕಾರ್ನರ್, ಬ್ಲೂಕಾರ್ನರ್ ಎಂದು ಹೇಳಿಕೊಂಡು ಕಾಲ ಕಳೆಯುವ ಬದಲು ಗೃಹ ಸಚಿವ ಡಾ.ಪರಮೇಶ್ವರ್ ದೆಹಲಿಗೆ ತೆರಳಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಆರೋಪಿಯನ್ನು ಕರೆತರಲಿ.

ಅದನ್ನು ಬಿಟ್ಟು ಗೌಡರ ಕುಟುಂಬಕ್ಕೆ ಮಸಿ ಬಳಿಯಬೇಕೆಂಬ ಉದ್ದೇಶದಿಂದಲೇ ದೊಡ್ಡ ತಿಮಿಂಗಿಲದ ಮಾತು ಕೇಳಿಕೊಂಡು ಸರ್ಕಾರಕ್ಕೆ ಮಸಿ ಬಳಿದುಕೊಳ್ಳಬೇಡಿ ಎಂದು ಕಿವಿಮಾತು ಹೇಳಿದರು.

ಕುಮಾರಣ್ಣ ತಿಮಿಂಗಿಲ ಹಿಡಿದು ನುಂಗಿಕೊಳ್ಳಲಿ



ಬೆಂಗಳೂರು: ಪೆನ್‌ಡ್ರೈವ್ ಪ್ರಕರಣದಲ್ಲಿ ಕುಮಾರಣ್ಣ ಯಾವ ತಿಮಿಂಗಿಲವನ್ನಾದರೂ ಹಿಡಿಯಲಿ. ಹಿಡಿದು, ಬಡಿದು ಅವರೇ ನುಂಗಿಕೊಳ್ಳಲಿ ಎಂದು ಉಪ ಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಪೆನ್ ಡ್ರೈವ್ ಪ್ರಕರಣದ ಹಿಂದೆ ದೊಡ್ಡ ತಿಮಿಂಗಿಲವಿದೆ ಎಂಬ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಹೇಳಿಕೆ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಅವರಿಗೆ ಯಾರನ್ನು ಹಿಡಿದು ಬಡಿದು ಒಳಗೆ ಹಾಕಬೇಕು ಅನ್ನಿಸುತ್ತದೋ ಅವರನ್ನು ಒಳಗೆ ಹಾಕಿಸಲಿ. ತಿಮಿಂಗಿಲಗಳನ್ನು ಅವರೇ ನುಂಗಿಕೊಳ್ಳಲಿ. ನಾನು ನಿರ್ದೇಶಕನೂ ಅಲ್ಲ, ನಿರ್ಮಾಪಕನೂ ಅಲ್ಲ. ನಾನು ಕೇವಲ ಪ್ರದರ್ಶಕ ಅಷ್ಟೇ ಎಂದರು.

ಬೆಲೆ ತೆರಲು ಸಿದ್ಧ: ಶಾಸಕರು, ಸಚಿವರಿಂದ ಮಾತನಾಡಿಸುತ್ತಿರುವವರು ಯಾರು ಎಂಬ ಕುಮಾರಸ್ವಾಮಿ ಪ್ರಶ್ನೆಗೆ, ಬೇರೆಯವರಿಂದ ಮಾತನಾಡಿಸುವ, ಪ್ರತಿಭಟನೆ ಮಾಡಿಸುವ, ಬೇರೆಯವರ ಮೇಲೆ ಅನಗತ್ಯ ಆರೋಪ ಮಾಡುವ ಅಗತ್ಯ ನನಗಿಲ್ಲ ಎಂದು ಹೇಳಿದರು.

ಸಂತ್ರಸ್ತೆಯೊಬ್ಬರು ಕೇಂದ್ರ ಮಹಿಳಾ ಆಯೋಗಕ್ಕೆ ದೂರು ನೀಡಿರುವ ಪ್ರಕರಣವನ್ನು ತನಿಖೆ ಮಾಡಿದ್ದೀರಾ ಎಂದು ಪ್ರಶ್ನಿಸಿರುವ ಕುಮಾರಸ್ವಾಮಿ, ಎಸ್ಐಟಿ ಮುಂದಿಟ್ಟುಕೊಂಡು ನೀವು ನಮ್ಮ ಕುಟುಂಬವನ್ನು ಗುರಿ ಮಾಡಿಕೊಂಡು ದಾಳಿ ಮಾಡುತ್ತಿದ್ದೀರಿ, ಇದು ನಿಮಗೆ ತಿರುಗುಬಾಣವಾಗುತ್ತದೆ.

ಲೋಕಸಭಾ ಚುನಾವಣಾ ಮತದಾನಕ್ಕೂ ಮುನ್ನ ಪೆನ್‌ಡ್ರೈವ್ ಹಂಚಿ ಮಹಿಳೆಯರ ಮಾನ ತೆಗೆದ ಆರೋಪಿಗಳನ್ನು ಇದುವರೆಗೂ ಏಕೆ ಬಂಧಿಸಿಲ್ಲ. ಇದರ ಹಿಂದೆ ಇರುವ ದೊಡ್ಡ ತಿಮಿಂಗಿಲವನ್ನು ಪ್ರಶ್ನೆ ಮಾಡುವ ತಾಕತ್ತು ನಿಮಗಿದೆಯೇ ಎಂದು ಗೃಹ ಸಚಿವರನ್ನು ತರಾಟೆಗೆ ತೆಗೆದುಕೊಂಡರಲ್ಲದೆ, ಎಲ್ಲವೂ ಬಯಲಾಗುತ್ತದೆ, ತಪ್ಪಿತಸ್ಥರಿಗೆ ಶಿಕ್ಷೆ ಕಾದಿದೆ, ಸ್ವಲ್ಪ ಕಾದು ನೋಡಿ ಎಂದರು. ನಮ್ಮ ಬಳಿ ಪೆನ್‌ಡ್ರೈವ್ ಇರುವುದು ಅಶ್ಲೀಲ ಪೆನ್‌ಡ್ರೈವ್ ಅಲ್ಲ, ವರ್ಗಾವರ್ಗಿಗೆ ಸಂಬಂಧಿಸಿದ ದಾಖಲೆ. ತಪ್ಪಿತಸ್ಥರ ವಿರುದ್ಧ ಮುಖ್ಯಮಂತ್ರಿ ಅವರು ಕ್ರಮ ಕೈಗೊಳ್ಳುತ್ತೇನೆ ಎಂದರೆ ಅದನ್ನು ಬಹಿರಂಗ ಪಡಿಸುತ್ತೇನೆ ಎಂದರು.

ಮೂರನೇ ಪುಟದಿಂದ

ಚಾಮುಂಡೇಶ್ವರಿ ದರ್ಶನ ಪಡೆದ ರೇವಣ್ಣ

ಹೆಸರು ಹಾಗೂ ನಕ್ಷತ್ರ ಹೇಳಿ ಅರ್ಚನೆ ಮಾಡಿಸಿದರು. ದೇವಾಲಯದಲ್ಲಿ ಸುಮಾರು 10 ನಿಮಿಷ ಏಕಾಂಗಿಯಾಗಿ ಕುಳಿತು, ಧ್ಯಾನಸ್ಥರಾಗಿ ದೇವಿಗೆ ಪ್ರಾರ್ಥನೆ ಸಲ್ಲಿಸಿದರು. ಎದುರಾಗಿರುವ ಸಂಕಷ್ಟವನ್ನು ಪರಿಹರಿಸುವಂತೆ ಬೇಡಿಕೊಂಡರು.

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನ್ಯಾಯಾಂಗದ ಬಗ್ಗೆ ನನಗೆ ಅಪಾರ ಗೌರವವಿದೆ. ದೇವರು ಹಾಗೂ ರಾಜ್ಯದ ಜನರ ಮೇಲೆ ನನಗೆ ನಂಬಿಕೆ ಇದೆ. ನಾನು ತಾಯಿ ಚಾಮುಂಡೇಶ್ವರಿ ದರ್ಶನ ಪಡೆದಿದ್ದೇನೆ. 40 ವರ್ಷದ ರಾಜಕೀಯ ಜೀವನದಲ್ಲಿ ನನ್ನ ವಿರುದ್ಧ ಮೊದಲ ಬಾರಿ ಆರೋಪ ಬಂದಿದೆ. ನ್ಯಾಯಾಂಗದ ಮೇಲೆ ನಂಬಿಕೆ ಇಟ್ಟಿದ್ದೇನೆ. ತಾಯಿ ಚಾಮುಂಡೇಶ್ವರಿ ಯಾವ ರೀತಿಯಲ್ಲಿ ಕರುಣೆ ತೋರಿಸುತ್ತಾಳೋ ನೋಡೋಣ. ಉದ್ದೇಶಪೂರ್ವಕವಾಗಿ ಮಾಡಿದ್ದರೆ ಅದನ್ನು ಚಾಮುಂಡಿ ತಾಯಿಗೇ ಬಿಟ್ಟಿದ್ದೇನೆ. ಪ್ರಕರಣ ನ್ಯಾಯಾಲಯದಲ್ಲಿ ಇರುವುದರಿಂದ ಈ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ ಎಂದರು. ಈ ವೇಳೆ ಮಾಜಿ ಸಚಿವರಾದ ಸಾ.ರಾ.ಮಹೇಶ್, ಸಿ.ಎಸ್.ಪುಟ್ಟರಾಜು, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಬಿಜೆಪಿ ಮುಖಂಡ, ಮಾಜಿ ಮೇಯರ್ ಸಂದೇಶ್ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು. ಚಾಮುಂಡೇಶ್ವರಿ ದರ್ಶನದ ಬಳಿಕ ರೇವಣ್ಣ ಶೃಂಗೇರಿಯತ್ತ ಪ್ರಯಾಣ ಬೆಳೆಸಿದರು. ರೇವಣ್ಣ ಭೇಟಿ ಬಗ್ಗೆ ಮಾಹಿತಿ ಇದ್ದ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟದಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ತಾವರೆಕಟ್ಟೆ ಗ್ರಾಮದ ಬಳಿಯೂ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿತ್ತು.

ಮರಿತಿಬ್ಬೇಗೌಡ ನಾಮಪತ್ರ ಸಲ್ಲಿಕೆ

ಸೇರಿದಂತೆ ಇತರರು ಹಾಜರಿದ್ದರು. ನಾಮಪತ್ರ ಸಲ್ಲಿಸಿದ ನಂತರ ಪತ್ರಕರ್ತರ ಜೊತೆ ಮಾತನಾ ಡಿದ ಮರಿತಿಬ್ಬೇಗೌಡ, ಕಳೆದ ನಾಲ್ಕು ಬಾರಿ ಇದೇ ಕ್ಷೇತ್ರದಿಂದ ಆಯ್ಕೆಯಾದಾಗ ವಿರೋಧ ಪಕ್ಷದ ಸ್ಥಾನದಲ್ಲಿ ಕೆಲಸ ಮಾಡಿದ್ದೇನೆ. ಆದರೆ ಈ ಬಾರಿ ಆಡಳಿತ ಪಕ್ಷ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದೇನೆ ಎಂದರು. ಆಡಳಿತ ಪಕ್ಷದ ಜೊತೆ ಕೆಲಸ ಮಾಡುವ ಅವಕಾಶ ಸಿಕ್ಕಿದೆ. ಇದು ಗೆಲುವಿನ ಹುಮ್ಮಸ್ಸನ್ನು ಇಮ್ಮಡಿಗೊಳಿಸಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿಯಿಂದ ನನ್ನ ಗೆಲುವಿಗೆ ಯಾವುದೇ ತೊಂದರೆ ಆಗುವುದಿಲ್ಲ. ಬಿಜೆಪಿ ಹಾಗೂ ಜೆಡಿಎಸ್‌ನಲ್ಲಿ ಅಭ್ಯರ್ಥಿ ಯಾರು ಎಂಬ ಬಗ್ಗೆಯೇ ಇನ್ನು ಗೊಂದಲವಿದೆ. ಮೊದಲು ಆ ಎರಡು ಪಕ್ಷಗಳು ಒಮ್ಮತದ ಅಭ್ಯರ್ಥಿ ಘೋಷಣೆ ಮಾಡಲಿ. ತರುವಾಯ ಶಿಕ್ಷಕ ಮತದಾರರು ತೀರ್ಮಾನ ಮಾಡುತ್ತಾರೆ. ಯಾರು, ಏನೇ ಮೈತ್ರಿ ಮಾಡಿಕೊಂಡರೂ ನಾನು ಗೆಲುವು ಸಾಧಿಸುತ್ತೇನೆ ಎಂದು ಮರಿತಿಬ್ಬೇಗೌಡ ವಿಶ್ವಾಸದಿಂದ ನುಡಿದರು. ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಚುನಾವಣೆಯಲ್ಲಿ ಸ್ಪರ್ಧೆ ಮಾಡಿರುವ ಅಭ್ಯರ್ಥಿ ಹಾಗೂ ಅವರ ಜೊತೆ ನಾಲ್ವರಿಗೆ ಮಾತ್ರ ನಾಮಪತ್ರ ಸಲ್ಲಿಸಲು ಅವಕಾಶ ನೀಡಲಾಗಿತ್ತು.

ಕೆ.ವಿವೇಕಾನಂದ ಎನ್‌ಡಿಎ ಅಭ್ಯರ್ಥಿ?

ಈಗಾಗಲೇ ಒಂದು ಸುತ್ತು ಪ್ರಚಾರವನ್ನೇ ಮುಗಿಸಿದ್ದಾರೆ. ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡರೂ ಆಕಾಂಕ್ಷಿಯಾಗಿದ್ದರು. ಈಗಾಗಲೇ ಅಭ್ಯರ್ಥಿಯಾಗಿ ಬಿಜೆಪಿ ಘೋಷಿಸಿದ್ದ ಈ.ಸಿ.ನಿಂಗರಾಜು ಗೌಡರೂ ಸ್ಪರ್ಧೆಯಿಂದ ಹಿಂದೆ ಸರಿಯುವುದಿಲ್ಲ ಎಂದಿದ್ದಾರೆ. ನಾಮಪತ್ರ ಸಲ್ಲಿಕೆಗೆ ಇನ್ನೆರಡು ದಿನಗಳಷ್ಟೇ ಬಾಕಿ ಇದ್ದು, ಜೆಡಿಎಸ್–ಬಿಜೆಪಿ ಮೈತ್ರಿಯ ಎನ್‌ಡಿಎ ಅಭ್ಯರ್ಥಿಯ ಅಧಿಕೃತ ಘೋಷಣೆಯೊಂದಿಗೆ ಗೊಂದಲಕ್ಕೆ ತೆರೆ ಬೀಳಬೇಕಿದೆ.

ಇಂದು ಬೆಂಗಳೂರಿಗೆ ಪ್ರಜ್ವಲ್?

ಅಪಹರಣ ಕೇಸ್‌ನಲ್ಲಿ ಬಂಧಿತರಾಗಿ ನಿನ್ನೆಯಷ್ಟೇ ಜಾಮೀನು ದೊರೆತು ಇಂದು ಜೈಲಿನಿಂದ ಬಿಡುಗಡೆ ಆಗಿದ್ದಾರೆ. ಹಾಗಾಗಿ ಪ್ರಜ್ವಲ್ ರೇವಣ್ಣ ನ್ಯಾಯಾಲಯದ ಮುಂದೆ ಹಾಜರಾಗಬಹುದು ಎಂದು ಕುಟುಂಬದ ವಕೀಲರು ಸಲಹೆ ನೀಡಿರುವ ಹಿನ್ನೆಲೆಯಲ್ಲಿ ಪ್ರಜ್ವಲ್ ರೇವಣ್ಣ ನಾಳೆ ಬೆಂಗಳೂರಿಗೆ ಆಗಮಿಸುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಈ ನಡುವೆ ಪ್ರಕರಣಕ್ಕೆ ಸಂಬಂಧಿಸಿದಂತೆ ಭವಾನಿ ರೇವಣ್ಣ ಎಸ್ಐಟಿ ಮುಂದೆ ನಾಳೆ ವಿಚಾರಣೆಗೆ ಹಾಜರಾಗುವ ಸಾಧ್ಯತೆಗಳಿವೆ ಎಂದೂ ಸಹ ಹೇಳಲಾಗುತ್ತಿದೆ.

ಸಂಚಾರ ನಿಯಮ ಉಲ್ಲಂಘನೆ, ಕಾನೂನು-ಸುವ್ಯವಸ್ಥೆ ನಿಯಂತ್ರಿಸಲು

ಮೈಸೂರಲ್ಲಿ 250 ಹೈಟೆಕ್ ಸಿಸಿ ಟಿವಿ ಕ್ಯಾಮರಾ ಅಳವಡಿಕೆ

ಸಂಚಾರ, ರಸ್ತೆ ಸುರಕ್ಷತೆ ಎಡಿಜಿಪಿ ಅಲೋಕ್‌ಕುಮಾರ್‌ರಿಂದ ನಗರ ಪ್ರದಕ್ಷಿಣೆ ಮೂಲಕ ಪರಿಶೀಲನೆ





ಬೆಂಗಳೂರಿನಿಂದ ಮೈಸೂರುವರೆಗೆ ಎಕ್ಸ್‌ಪ್ರೆಸ್‌ಹೈವೇಯಲ್ಲಿ ಅಳವಡಿಸಿರುವ ಹೈಟೆಕ್ ಸಿಸಿ ಟಿವಿ ಕ್ಯಾಮರಾಗಳನ್ನು ಸಂಚಾರ ಮತ್ತು ರಸ್ತೆ ಸುರಕ್ಷತೆ ಎಡಿಜಿಪಿ ಅಲೋಕ್‌ಕುಮಾರ್ ಪರಿಶೀಲಿಸಿದರು.

ಮೈಸೂರು, ಮೇ 14(ಆರ್‌ಕೆ)– ಮೈಸೂರು ನಗರದಾದ್ಯಂತ ಪೊಲೀಸ್ ಇಲಾಖೆ ವತಿಯಿಂದ 250 ಹೈಟೆಕ್ ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸುವ ಕಾರ್ಯ ಭರದಿಂದ ಸಾಗಿದೆ.

ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು, ಸಂಚಾರ ನಿಯಮ ಉಲ್ಲಂಘನೆ ತಡೆಯುವ ಮೂಲಕ ರಸ್ತೆ ಅಪಘಾತಗಳನ್ನು ತಪ್ಪಿಸಲು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ 52 ಕ್ಯಾಮರಾಗಳ ಜೊತೆಗೆ 250 ಅತ್ಯಂತ ತೀಕ್ಷ್ಣತೆ (ಹೈ ರೆಸೂಲ್ಯೂಷನ್) ಸಾಮರ್ಥ್ಯದ ಹೈಟೆಕ್ ಸಿಸಿಟಿವಿ ಕ್ಯಾಮರಾಗಳನ್ನು ಹೆಚ್ಚುವರಿಯಾಗಿ ಅಳವಡಿಸಲಾಗುತ್ತಿದೆ.

ಪೊಲೀಸ್ ಇಲಾಖೆಯ ಬೆಂಗಳೂರು ಕೇಂದ್ರ ಕಚೇರಿಯಿಂದ ಟೆಂಡರ್ ಪ್ರಕ್ರಿಯೆ ನಡೆದು ಮೈಸೂರು ನಗರದ ಪ್ರಮುಖ ಜಂಕ್ಷನ್, ಸರ್ಕಲ್, ರಸ್ತೆ, ವಾಣಿಜ್ಯ ಕೇಂದ್ರ, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಸ್ಥಳ, ಅರಮನೆ ಸುತ್ತಲಿನ ಪ್ರದೇಶ, ರಿಂಗ್ ರಸ್ತೆ ಜಂಕ್ಷನ್‌ಗಳಲ್ಲಿ ನವೀನ ತಂತ್ರಜ್ಞಾನದ ಸಿಸಿ ಟಿವಿ ಕ್ಯಾಮರಾ ಹಾಕಲು ಎಲೆಕ್ಟ್ರಿಕ್ ಸಂಸ್ಥೆಯೊಂದಕ್ಕೆ ಗುತ್ತಿಗೆ ನೀಡಿದೆ.

ಮೈಸೂರು ನಗರದಲ್ಲಿ ಕಾರ್ಯನಿರ್ವಹಿಸುವ ಒಟ್ಟು 300 ಕ್ಯಾಮರಾಗಳಲ್ಲಿ ಸೆರೆಯಾಗುವ ಲೈವ್ ದೃಶ್ಯಾವಳಿಗಳನ್ನು ನಜರ್‌ಬಾದ್‌ನಲ್ಲಿರುವ ನಗರ ಪೊಲೀಸ್ ಆಯುಕ್ತರ ಕಚೇರಿ ಟ್ರಾಫಿಕ್ ಆಟೋಮೇಷನ್ ಸೆಂಟರ್‌ನಲ್ಲಿ ವೀಕ್ಷಿಸುವ ಸಿಬ್ಬಂದಿ, ಸಂಚಾರ ನಿಯಮ ಉಲ್ಲಂಘನೆ ಮಾಡಿದ ವಾಹನಗಳ ನಂಬರ್ ಮೂಲಕ ಆರ್‌ಸಿ ಮಾಲೀಕರಿಗೆ ದಂಡದ ನೋಟಿಸ್ ಸೃಜಿಸುವ ವ್ಯವಸ್ಥೆ ಜಾರಿಯಲ್ಲಿದೆ.

ಅದೇ ರೀತಿ ಗಲಾಟೆ, ಗುಂಪು ಘರ್ಷಣೆ, ಅಪಘಾತ, ದರೋಡೆ, ಕೊಲೆ, ಸುಲಿಗೆ, ದೊಂಬಿ, ಅಪಹರಣಗಳಂತಹ ಅಪರಾಧ ಪ್ರಕರಣಗಳನ್ನೂ ಪತ್ತೆ ಮಾಡಲು ಹಾಗೂ ತಡೆಗಟ್ಟಲು ಈ ಉನ್ನತ ತಂತ್ರಜ್ಞಾನವುಳ್ಳ ಸಿಸಿ ಟಿವಿ ಕ್ಯಾಮರಾಗಳು ಸಹಾಯವಾಗುತ್ತವೆ.

ಅಲ್ಲದೇ ಜಂಕ್ಷನ್‌ಗಳು, ಜನ ವಾಹನ ದಟ್ಟಣೆ ಪ್ರದೇಶಗಳಲ್ಲಿ ಸಂಚಾರ ನಿಯಂತ್ರಣ ಕರ್ತವ್ಯ ನಿರ್ವಹಿಸುವ, ವಾಹನ ತಪಾಸಣೆ ಮಾಡುವ ಸಂಚಾರ ಪೊಲೀಸರು ಮತ್ತು ಕಾನೂನು–ಸುವ್ಯವಸ್ಥೆ ಕಾಪಾಡುವ ಸಿವಿಲ್ ಪೊಲೀಸರ ಕಾರ್ಯ ವೈಖರಿಯ ಮೇಲೂ ನಿಗಾ ಇರಿಸಿ ಲೋಪವೆಸಗುವ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ಕ್ರಮ ವಹಿಸಲು ಈ ಕ್ಯಾಮರಾಗಳು ಸಾಕ್ಷ್ಯ ಒದಗಿಸಲಿವೆ.

ಮೈಸೂರಿನ ಪಾರಂಪರಿಕ ಸ್ಮಾರಕಗಳು, ಕಟ್ಟಡಗಳು, ಗಣ್ಯರ ಪ್ರತಿಮೆ, ಮತ್ತಳಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಕಚೇರಿ ಕಟ್ಟಡಗಳು, ಪ್ರವಾಸಿ ತಾಣಗಳ ರಕ್ಷಣೆ, ಭದ್ರತೆ ಒದಗಿಸುವುದೂ ಸಹ ಪೊಲೀಸ್ ಇಲಾಖೆಯ ಜವಾಬ್ದಾರಿಯಾಗಿರುವುದರಿಂದ ಎಲ್ಲಿಯಾದರೂ ಅಹಿತಕರ ಘಟನೆಗಳಾಗುವ ಸಂಭವವಿದ್ದಲ್ಲಿ ಅಥವಾ ಹೊಂಚು ಹಾಕುತ್ತಿರುವುದು ಸಿಸಿ ಟಿವಿ ಕ್ಯಾಮರಾಗಳಿಂದ ಕಂಡುಬಂದಲ್ಲಿ ಆಟೋಮೇಷನ್ ಸೆಂಟರ್‌ನಿಂದ ಕಂಟ್ರೋಲ್ ರೂಂ ಮೂಲಕ ಸಮೀಪದಲ್ಲಿರುವ ಪೊಲೀಸ್ ಅಧಿಕಾರಿಗಳಿಗೆ ಮಾಹಿತಿ ತಲುಪಿಸುವುದೂ ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.


ನಿನ್ನೆ (ಮೇ 13)ಯಷ್ಟೇ ಬೆಂಗಳೂರಿನಿಂದ ಮೈಸೂರುವರೆಗೆ ಎಕ್ಸ್‌ಪ್ರೆಸ್ ವೇಯಲ್ಲಿ ಅಳವಡಿಸಿರುವ ಹೈಟೆಕ್ ಸಿಸಿ ಟಿವಿ ಕ್ಯಾಮರಾಗಳನ್ನು ಪರಿಶೀಲಿಸಿದ ಸಂಚಾರ ಮತ್ತು ರಸ್ತೆ ಸುರಕ್ಷತೆ ಎಡಿಜಿಪಿ ಅಲೋಕ್‌ಕುಮಾರ್, ಇಂದು ಮೈಸೂರು ನಗರ, ಸುತ್ತಲಿನ ರಸ್ತೆಗಳಲ್ಲಿ ಅಳವಡಿಸುತ್ತಿರುವುದನ್ನು ವೀಕ್ಷಿಸಿದರು.

ಬೆಳಗ್ಗೆ ಅಡಿಷನಲ್ ಎಸ್ಪಿ ಡಾ. ಬಿ.ಎನ್. ನಂದಿನಿ ಅವರೊಂದಿಗೆ ಜಿಲ್ಲಾ ಪೊಲೀಸ್ ಘಟಕದ ವ್ಯಾಪ್ತಿಯ ಸರ್ಕಾರಿ ಉತ್ತನಹಳ್ಳಿ ಸಮೀಪದ ದೇವಲಾಪುರ ರಿಂಗ್ ರಸ್ತೆ ಜಂಕ್ಷನ್ ಪರಿಶೀಲಿಸಿದ ಅವರು, ಅಪಘಾತ ತಪ್ಪಿಸಲು ಝೀಬ್ರಾ ಕ್ರಾಸಿಂಗ್ ವ್ಯವಸ್ಥೆ ಮಾಡುವಂತೆ ಸೂಚಿಸಿದರು.

ನಂತರ ಬಂಡೀಪಾಳ್ಯ ಎಪಿಎಂಸಿ ಬಳಿ ರಿಂಗ್ ರಸ್ತೆ–ನಂಜನಗೂಡು ರಸ್ತೆ ಸಿಗ್ನಲ್ ಲೈಟ್ ಜಂಕ್ಷನ್, ನಂಜನಗೂಡು ರಸ್ತೆ, ಗನ್‌ಹೌಸ್ ಸರ್ಕಲ್, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ಸರ್ಕಲ್, ಬಲ್ಲಾಳ್ ಸರ್ಕಲ್, ಬೋಗಾದಿ ರಸ್ತೆ, ಹುಣಸೂರು ರಸ್ತೆಗಳಲ್ಲಿ ಸಂಚರಿಸಿ ಟ್ರಾಫಿಕ್ ಸಿಗ್ನಲ್ ಲೈಟ್ ಕಾರ್ಯ ನಿರ್ವಹಣೆ, ಸಿಸಿ ಟಿವಿಗಳ ಕಾರ್ಯ, ಸಂಚಾರ ಪೊಲೀಸರ ಕರ್ತವ್ಯಗಳನ್ನು ವೀಕ್ಷಿಸಿದ ಅಲೋಕ್‌ಕುಮಾರ್, ಸುಧಾರಣೆ, ಕರ್ತವ್ಯ ನಿರ್ವಹಣೆ ಕುರಿತಂತೆ ಕ್ರೈಂ ಅಂಡ್ ಟ್ರಾಫಿಕ್ ಡಿಸಿಪಿ ಎಸ್. ಜಾಹ್ನವಿ ಅವರಿಗೆ ಮಾರ್ಗದರ್ಶನ ಮಾಡಿದರು.

ಮಧ್ಯಾಹ್ನ ಜ್ಯೋತಿನಗರದ ಪೊಲೀಸ್ ತರಬೇತಿ ಶಾಲೆಗೆ ಭೇಟಿ ನೀಡಿ ಪ್ರಶಿಕ್ಷಣಾರ್ಥಿಗಳೊಂದಿಗೆ ಸಂವಾದ ನಡೆಸಿದ ಬಳಿಕ ಸಂಜೆ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಸಂಚಾರ ನಿರ್ವಹಣೆ, ಸಿಸಿ ಟಿವಿ ಕ್ಯಾಮರಾ ವೀಕ್ಷಿಸಿ ಎಡಿಜಿಪಿಯವರು ಬೆಂಗಳೂರಿಗೆ ಹಿಂದಿರುಗಿದರು. ಈ ಸಂದರ್ಭ ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಡಿಸಿಪಿಗಳಾದ ಎಂ. ಮುತ್ತುರಾಜ್, ಎಸ್. ಜಾಹ್ನವಿ, ಸಂಚಾರ ಎಸಿಪಿ ಪರಶುರಾಮಪ್ಪ ಹಾಗೂ ಇತರರು ಅಲೋಕ್ ಕುಮಾರ್ ಅವರೊಂದಿಗೆ ಇದ್ದರು.

ಪ್ರವೇಶ ನಿರಾಕರಣೆ; ಶಾಲೆಗೆ ಮುತ್ತಿಗೆ ಹಾಕುವ ಎಚ್ಚರಿಕೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಮೇ 14(ಎಂಟಿವೈ)– ದಲಿತ ಸಮುದಾಯದ ವಿದ್ಯಾರ್ಥಿಗೆ ದುರುದ್ದೇಶದಿಂದ ವರ್ಗಾವಣೆ(ಟಿಸಿ) ಪತ್ರ ನೀಡಿರುವ ಸಿದ್ಧಾರ್ಥನಗರದ ಗೀತಾ ಶಿಶು ಶಿಕ್ಷಣ ಸಂಸ್ಥೆಗೆ ಮೇ 17ರಂದು ಮುತ್ತಿಗೆ ಹಾಕಿ, ಪ್ರತಿಭಟಿಸುವುದಾಗಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳು ದಲಿತ, ಅಹಿಂದ ವರ್ಗದ ಮಕ್ಕಳು ಶಿಕ್ಷಣದಿಂದ ವಂಚಿತರಾಗುವಂತೆ ಮಾಡುತ್ತಿವೆ. ಕಡಿಮೆ ಫಲಿತಾಂಶ ಬರುತ್ತದೆ ಎಂಬ ಕಾರಣ ನೀಡಿ ಶೋಷಿತ ಸಮುದಾಯಕ್ಕೆ ಸೇರಿದ ಮಕ್ಕಳಿಗೆ ಬಲವಂತವಾಗಿ ಟಿಸಿ ನೀಡಲಾಗುತ್ತಿದೆ.

ಗೀತಾ ಶಿಶು ಶಿಕ್ಷಣ ಸಂಸ್ಥೆಯಲ್ಲಿ ವಿಜಯಕುಮಾರ್ ಎಂಬುವರ ಮಗ ಎಲ್‌ಕೆಜಿಗೆ ಪ್ರವೇಶ ಪಡೆದು 9ನೇ ತರಗತಿವರೆಗೆ ಅದೇ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದಾನೆ. 9ನೇ ತರಗತಿ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದಿದ್ದಾನೆ ಎಂಬ ಕಾರಣಕ್ಕೆ 10ನೇ ತರಗತಿಗೆ ಪ್ರವೇಶ ನಿರಾಕರಿಸಿದ್ದಾರೆ. ಈ ಬಗ್ಗೆ ವಿಜಯಕುಮಾರ್ ಕಳೆದ ಏ.24 ರಂದು ಮೈಸೂರು ದಕ್ಷಿಣ ಕ್ಷೇತ್ರ ಶಿಕ್ಷಣಾಧಿಕಾರಿ ರಾಜು ಅವರಿಗೆ ದೂರು ನೀಡಿದ್ದಾರೆ. ದೂರು ನೀಡಿ 20 ದಿನವಾದರೂ ಬಿಇಓ ಯಾವುದೇ ಕ್ರಮ ಕೈಗೊಂಡಿಲ್ಲ. ಕೂಡಲೇ ಆ ವಿದ್ಯಾರ್ಥಿಗೆ ಅದೇ ಶಾಲೆಯಲ್ಲಿ ಮೇ 16 ರೊಳಗೆ 10ನೇ ತರಗತಿಗೆ ಪ್ರವೇಶ ನೀಡಬೇಕು. ಇಲ್ಲದಿದ್ದಲ್ಲಿ ಮೇ 17 ರಂದು ದಸಂಸ ಕಾರ್ಯಕರ್ತರಿಂದ ಗೀತಾ ಶಿಶು ಶಿಕ್ಷಣ ಸಂಸ್ಥೆ ಪ್ರೌಢಶಾಲೆಗೆ ಮುತ್ತಿಗೆ ಹಾಕಲಾಗುವುದು ಎಂದು ಶಿವಣ್ಣ ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ದಸಂಸ ಮುಖಂಡರಾದ ನಟರಾಜು, ಸೋಮನಾಯಕ, ವರುಣ ಮಹೇಶ್, ಚಂದ್ರಶೇಖರ್, ದೇವರಾಜು, ದೇವೇಂದ್ರ ಇದ್ದರು.

ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಪಕ್ಷಾಂತರಿಗೆ ಕಾಂಗ್ರೆಸ್ ಟಿಕೆಟ್



ಮೈಸೂರು, ಮೇ 14(ಎಂಟಿವೈ)– ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಾಂತರಿಗೆ ಮನ್ನಣೆ ನೀಡಿದ್ದು, ಪಕ್ಷೇತರರಾಗಿ ಸ್ಪರ್ಧಿಸಿರುವ ನನಗೆ ಶಿಕ್ಷಕರು ಬೆಂಬಲ ನೀಡಬೇಕು ಎಂದು ಪಕ್ಷೇತರ ಅಭ್ಯರ್ಥಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದುವರೆಗೂ ಜೆಡಿಎಸ್‌ನಲ್ಲಿ ಇದ್ದ ಮರಿತಿಬ್ಬೇಗೌಡರು ಈಗ ಕಾಂಗ್ರೆಸ್ ಸೇರಿದ್ದಾರೆ. ಪಕ್ಷಾಂತರ ಮಾಡಿದವರಿಗೆ ಕಾಂಗ್ರೆಸ್ ಮನ್ನಣೆ ನೀಡಿದೆ. ಇದರಿಂದ ದಲಿತರ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರಿಗೆ ಅನ್ಯಾಯ ಮಾಡಿದಂತಾಗಿದೆ. ಮೇಲ್ಮನೆಗೆ ಬುದ್ಧಿಜೀವಿಗಳು, ವಿಚಾರವಂತರು, ಸಾಹಿತಿಗಳು, ವಿಜ್ಞಾನಿಗಳು, ಶಿಕ್ಷಣ ತಜ್ಞರು ಆಯ್ಕೆಯಾಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿರುವ ನನಗೆ ಬೆಂಬಲ ನೀಡಬೇಕು ಎಂದು ಕೋರಿದರು.

ಈ ಹಿಂದೆ ಪ್ರೌಢಶಾಲಾ ಸಹಶಿಕ್ಷಕರ ಸಂಘ ಸ್ಥಾಪನೆ ಸೇರಿದಂತೆ ಹಲವು ಕೆಲಸ ಮಾಡುವ ಮೂಲಕ ಶಿಕ್ಷಕ ಸಮುದಾಯದ ಶ್ಲಾಘನೆಗೆ ಪಾತ್ರವಾಗಿದ್ದೇನೆ. ಮುಂದಿನ ದಿನಗಳಲ್ಲಿ ಅತಿಥಿ ಶಿಕ್ಷಕರು ಹಾಗೂ ಉಪನ್ಯಾಸಕರನ್ನು ಕಾಯಂಗೊಳಿಸುವುದು, 7ನೇ ವೇತನ ಆಯೋಗ ಜಾರಿ, ಹಳೆ ಪಿಂಚಣಿ ಪದ್ಧತಿ ಜಾರಿಗೊಳಿಸುವುದು ಸೇರಿದಂತೆ ಇನ್ನಿತರ ಬೇಡಿಕೆ ಈಡೇರಿಕೆಗಾಗಿ ಹೋರಾಟ ಮುಂದುವರೆಸುವ ಗುರಿ ಹೊಂದಿದ್ದೇನೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಾಯಕ ಸಮಾಜಗಳ ಒಕ್ಕೂಟದ ಪದಾಧಿಕಾರಿಗಳಾದ ಕುಮಾರ, ಕೆಂಪಶೆಟ್ಟಿ, ಶಿವರಾಜಪ್ಪ ಇದ್ದರು.

ಶಿಕ್ಷಕರೊಂದಿಗೆ 24 ವರ್ಷದಿಂದ ನಿರಂತರ ಸಂಪರ್ಕದಲ್ಲಿದ್ದೇನೆ; ಮತ್ತೊಮ್ಮೆ ಅವಕಾಶ ನೀಡಿ

●ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಮನವಿ

●ಒಪಿಎಸ್, ಏಳನೇ ವೇತನ ಆಯೋಗದ ಶಿಫಾರಸ್ಸು ಜಾರಿಗೆ ಶ್ರಮಿಸುತ್ತೇನೆ



ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಕಲ್ಯಾಣ ಮಂಟಪದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಮಾತನಾಡಿದರು.

ಮೈಸೂರು, ಮೇ 14(ಎಂಟಿವೈ)– ರಾಜ್ಯದಲ್ಲಿ ಕಳೆದ 24 ವರ್ಷಗಳಿಂದ ಶಿಕ್ಷಕರ ನಾನಾ ಸಮಸ್ಯೆಗಳ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಇದೀಗ ತವರು ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ನಾನು ಮುಂದಿನ ದಿನಗಳಲ್ಲಿ ಶಿಕ್ಷಕರ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ಮಾಡುತ್ತೇನೆ ಎಂದು ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಭರವಸೆ ನೀಡಿದ್ದಾರೆ.

ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಕಲ್ಯಾಣ ಮಂಟಪವೊಂದರಲ್ಲಿ ಮಂಗಳವಾರ ನಡೆದ ದಕ್ಷಿಣ ಶಿಕ್ಷಕರ ಕ್ಷೇತ್ರದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಈ ಚುನಾವಣೆಯಲ್ಲಿ ನಾನು ಪಕ್ಷ ಬದಲಿಸಿರಬಹುದು ಆದರೆ ಶಿಕ್ಷಕರ ಸಮಸ್ಯೆಗಳನ್ನು ಪರಿಹರಿಸಲು ನೀಡಿರುವ ಆದ್ಯತೆಯಲ್ಲಿ ಬದಲಾವಣೆ ಮಾಡಿಕೊಂಡಿಲ್ಲ. ಶಿಕ್ಷಕರೊಂದಿಗೆ ನಿರಂತರ ಸಂಪರ್ಕ ಹೊಂದಿರುವುದು ಬಿಟ್ಟರೆ ಬೇರೆ ಯಾವ ರಾಜಕಾರಣ ಮಾಡಿಲ್ಲ. ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಈ ನಾಲ್ಕು ಜಿಲ್ಲೆಯ ಶಿಕ್ಷಕ ಮತದಾರರು ನಾಲ್ಕು ಬಾರಿ ಗೆಲ್ಲಿಸಿಕೊಂಡು ಬಂದಿದ್ದಾರೆ. ಮೊದಲ ಬಾರಿಗೆ ಕಾಂಗ್ರೆಸ್ ಪಕ್ಷದಿಂದ ಆಯ್ಕೆ ಮಾಡಿದ್ದೀರಾ. ಎರಡನೇ ಬಾರಿ ಪಕ್ಷೇತರರಾಗಿ, ಮತ್ತೆರಡು ಬಾರಿ ಜೆಡಿಎಸ್‌ನಿಂದ ಕೈ ಹಿಡಿದಿದ್ದೀರಾ. ಮತ್ತೊಮ್ಮೆ ಕಾಂಗ್ರೆಸ್‌ನಲ್ಲಿ ಸ್ಪರ್ಧೆ ಮಾಡಲು ಅವಕಾಶ ದೊರೆತಿದೆ. ಈ ಬಾರಿಯೂ ನನ್ನನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು.


ಈ ಹಿಂದೆ ನಾನು ಕಾಂಗ್ರೆಸ್ ಪಕ್ಷದಿಂದ ರಾಜಕೀಯ ಆರಂಭಿಸಿದ್ದೆ. ಬುದ್ಧ, ಬಸವ, ಡಾ.ಅಂಬೇಡ್ಕರ್, ಕುವೆಂಪು ಅವರ ವಿಚಾರಧಾರೆಯನ್ನು ಅನುಸರಿಸಿಕೊಂಡು ಶಿಕ್ಷಕರ ಕ್ಷೇತ್ರದಲ್ಲಿ ಕೆಲಸ ಮಾಡಿದ್ದೇನೆ. ಆ ಮೂಲಕ ಶಿಕ್ಷಣ ಕ್ಷೇತ್ರದ ಗೌರವ, ಘನತೆ ಕಾಪಾಡಿದ್ದೇನೆ. 24 ವರ್ಷಗಳಿಂದಲೂ ಶಿಕ್ಷಕರ ಒಡನಾಟವಿದೆ. ಶಿಕ್ಷಕರ ಕ್ಷೇತ್ರದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಪಾರ ಕಾಳಜಿ ಹೊಂದಿದ್ದಾರೆ. ಒಪಿಎಸ್ ವ್ಯವಸ್ಥೆ, ಏಳನೇ ವೇತನ ಆಯೋಗ ಜಾರಿಗೆ ತೀರ್ಮಾನ ಮಾಡಿದ್ದಾರೆ. ಬಡ್ತಿ ಶಿಕ್ಷಕರ ವೇತನ ಹೆಚ್ಚಳಕ್ಕೆ ಕ್ರಮಗೊಂಡಿದೆ. ಶಿಕ್ಷಕರ ವೇತನ ಹೆಚ್ಚಳಕ್ಕೆ ಸಂಬಂಧಿಸಿದಂತೆ 170 ಕೋಟಿ ರೂಪಾಯಿ ಮಂಜೂರು ಮಾಡಲಾಗಿದೆ ಎಂದರು.

ಮಹಿಳಾ ಶಿಕ್ಷಕಿಯರಿಗೆ ಉಚಿತ ಬಸ್ ವ್ಯವಸ್ಥೆ ಕಲ್ಪಿಸಿದೆ. ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನೆ ನಶಿಸಿ ಹೋಗುತ್ತಿದೆ. ಮೈಸೂರು ವಿವಿ ಆರ್ಥಿಕವಾಗಿ ನರಳುತ್ತಿದೆ. ವಿಶ್ವವಿದ್ಯಾನಿಲಯಕ್ಕೆ ಅನುದಾನ ಬಿಡುಗಡೆ ಮಾಡಿಸುವ ಜತೆಗೆ ಬೋಧಕ ಬೋಧಕೇತರ ಸಿಬ್ಬಂದಿ ಸಮಸ್ಯೆ ನೀಗಿಸಲು ಕ್ರಮ ಕೈಗೊಳ್ಳುತ್ತೇನೆ. ಜಾತ್ಯಾತೀತ ಮನೋಭಾವ ಹೊಂದಿರುವ ಕಾಂಗ್ರೆಸ್ ಸಾಗರವಿದ್ದಂತೆ. ನನ್ನ ಕಾರ್ಯ ಚಟುವಟಿಕೆಗಳಿಗೆ ಇಲ್ಲಿ ಅವಕಾಶ ದೊರೆತಿದೆ. ಶಿಕ್ಷಕರಿಗೆ ಎಂದಿಗೂ ಅಪಕೀರ್ತಿ, ಕಳಂಕ ತರುವ ಕೆಲಸ ಮಾಡಲ್ಲ. ಮೊದಲ ಪ್ರಾಶಸ್ತ್ಯದ ಮತಗಳನ್ನು ನೀಡಿ ಅತ್ಯಧಿಕ ಮತದಲ್ಲಿ ಗೆಲ್ಲಿಸುವಂತೆ ಮನವಿ ಮಾಡಿದರು.

ಇದಕ್ಕೂ ಮುನ್ನ ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಮಾತನಾಡಿ, ಜೆಡಿಎಸ್ ಮತ್ತು ಬಿಜೆಪಿಯಲ್ಲಿ ಗೊಂದಲ ಉಂಟಾಗಿದೆ. ಈ ಪಕ್ಷಗಳು ಅಭ್ಯರ್ಥಿಗಳನ್ನು ಹಾಕದೆ ಇರುವುದು ಉತ್ತಮ. ಜೆಡಿಎಸ್ ನಾಯಕರೆಲ್ಲರೂ ಕಾಂಗ್ರೆಸ್ ಪಕ್ಷಕ್ಕೆ ಬಂದಿದ್ದಾರೆ. ಚುನಾವಣೆಗೆ ಮುನ್ನ ಸೋಲು ಒಪ್ಪಿಕೊಂಡಂತಾಗಿದೆ. ಶಿಕ್ಷಕರ ಕ್ಷೇತ್ರದಲ್ಲಿ ನಿರಂತರವಾಗಿ ಕೆಲಸ ಮಾಡಿಕೊಂಡು ಬಂದಿರುವ ಮರಿತಿಬ್ಬೇಗೌಡರನ್ನು ಮತ್ತೊಮ್ಮೆ ಆಯ್ಕೆ ಮಾಡಿ ಕಾಂಗ್ರೆಸ್‌ಗೆ ಬಲ ತುಂಬಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್, ಶಾಸಕರಾದ ರಮೇಶ್ ಬಾಬು ಬಂಡಿಸಿದ್ದೇಗೌಡ, ಕೆ.ಹರೀಶ್‌ಗೌಡ, ಡಿ.ರವಿಶಂಕರ್, ಎಂ.ಪಿ.ನರೇಂದ್ರಸ್ವಾಮಿ, ವಿಧಾನಪರಿಷತ್ ಸದಸ್ಯರಾದ ಪುಟ್ಟಣ್ಣ ಮಧು ಜಿ.ಮಾದೇಗೌಡ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರೋಸಿ ಜಾನ್, ಮಾಜಿ ಸಚಿವ ಕೋಟೆ ಎಂ.ಶಿವಣ್ಣ, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಪ್ರಕಾಶ್, ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು, ಮಾಜಿ ವಿಧಾನಪರಿಷತ್ ಸದಸ್ಯ ಅಪ್ಪಾಜಿಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ರಾಮಪ್ಪ ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಟಿ.ಬಿ.ಚಿಕ್ಕಣ್ಣ, ಗ್ರಾಮಾಂತರ ವಿಭಾಗದ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ ಮುಡಾ ಮಾಜಿ ಅಧ್ಯಕ್ಷ ಆರ್.ಧ್ರುವಕುಮಾರ್, ಮಾಜಿ ಮೇಯರ್ ಎಂ.ಸಿ.ರಾಜೇಶ್ವರಿ ಪುಟ್ಟಸ್ವಾಮಿ, ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ, ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮರಿಸ್ವಾಮಿ, ಮುಖಂಡರಾದ ಕೀಲಾರ ಜಯರಾಂ, ಮೈಸೂರು ಬಸವಣ್ಣ, ನಾಗೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನ ಹೋಟೆಲ್ ಸದರನ್ ಸ್ಟಾರ್‌ನಲ್ಲಿ ಮೇ 17ರಿಂದ ಎರಡು ದಿನ 'ಶಾಪರ್ಸ್ ಪ್ಯಾರಡೈಸ್' ವಸ್ತುಪ್ರದರ್ಶನ



ಮೈಸೂರು,ಮೇ 14(ಪಿಎಂ)– ಎಲ್ಲಾ ಫ್ಯಾಷನ್ ಆಸಕ್ತರು ಹಾಗೂ ಕರಕುಶಲತೆ ಕೌಶಲ್ಯಗಾರರಿಗಾಗಿ 'ಶಾಪರ್ಸ್ ಪ್ಯಾರಡೈಸ್' ಶೀರ್ಷಿಕೆಯಡಿ ಮೇ 17 ಮತ್ತು 18ರಂದು ಎರಡು ದಿನಗಳ ವಸ್ತುಪ್ರದರ್ಶನವನ್ನು ಮೈಸೂರಿನ ಹೋಟೆಲ್ ಸದರನ್ ಸ್ಟಾರ್‌ನಲ್ಲಿ ಆಯೋಜಿಸಲಾಗಿದೆ.

30ಕ್ಕೂ ಹೆಚ್ಚು ಹೆಸರಾಂತ ಡಿಸೈನರ್‌ಗಳ ಬ್ರ್ಯಾಂಡ್‌ಗಳು ಅತ್ಯುನ್ನತ ಶ್ರೇಣಿಯೊಂದಿಗೆ ದೊರೆಯುವ ಮೂಲಕ ಗ್ರಾಹಕರಿಗೆ ಹಬ್ಬದ ಸಂತಸ ಉಂಟು ಮಾಡಲಿದೆ. ಆ ಮೂಲಕ ಉನ್ನತ ವಿನ್ಯಾಸಕರ ಉತ್ಪನ್ನಗಳ ವೈವಿಧ್ಯಮಯ ಆಯ್ಕೆಯು ಗ್ರಾಹಕರಿಗೆ ಲಭ್ಯವಾಗಲಿದೆ. ಮನಮೋಹಕ ಸೀರೆಗಳಿಂದ ಹಿಡಿದು ಇತ್ತೀಚಿನ ವಿನೂತನ ಶೈಲಿಯ ಕುರ್ತಿಗಳವರೆಗೆ ಹಾಗೂ ಬೆರಗುಗೊಳಿಸುವ ಆಭರಣಗಳಿಂದ ಹಿಡಿದು ಗೃಹಾಲಂಕಾರ ಸಾಮಗ್ರಿಗಳು ದೊರೆಯಲಿವೆ.

ವಿಜಯಲಕ್ಷ್ಮೀ ಸಿಲ್ಕ್, ಅವಂತ್ರಾ, ಸಿಕ್ಸ್‌ಯಾರ್ಡ್ಸ್ ಸಿಲ್ಕ್, ಆರಾಧ್ಯ ಸಿಲ್ಕ್, ಎಥೆರಿಯಲ್ ಫ್ಯಾಷನ್, ಕೊಕೊ ಲಕ್ಷುರಿ ಇಂಟರ್‌ನ್ಯಾಷನಲ್ ಆಭರಣ, ನೂರಾನಿ ಡ್ರೆಸ್, ಎಲ್ಲಿಸ್ ಲುಕ್, ಕಮಿ, ದಿ ಹೋಮ್ ಕಲೆಕ್ಷನ್, ಸಿಂಪ್ಲಿ ವುಮೆನ್ ಸೇರಿದಂತೆ ಅನೇಕ ಪ್ರಮುಖ ಆಕರ್ಷಣೆ ಈ ಪ್ರದರ್ಶನದ ವಿಶೇಷ. ಈ ವಸ್ತುಪ್ರದರ್ಶನದಲ್ಲಿ ಇತ್ತೀಚಿನ ಟ್ರೆಂಡ್‌ಗಳು ಹಾಗೂ ಫ್ಯಾಷನ್ ಪ್ರಪಂಚದ ಅತ್ಯುತ್ತಮ ಸಂಗ್ರಹಗಳು ಪ್ರದರ್ಶನಕ್ಕೆ ಸಿದ್ಧವಾಗಿವೆ. ಫ್ಯಾಷನ್ ಸ್ಟೋರ್ ವತಿಯಿಂದ ಆಯೋಜಿಸಿರುವ ಈ ವಸ್ತು ಪ್ರದರ್ಶನಕ್ಕೆ ಬೆಳಗ್ಗೆ 10.30ರಿಂದ ರಾತ್ರಿ 8.30ರವರೆಗೆ ಭೇಟಿ ನೀಡಬಹುದು. ಪ್ರವೇಶ ಉಚಿತವಿದೆ ಎಂದು ಪ್ರಕಟಣೆ ತಿಳಿಸಿದೆ.

ಮೇ 24ರಿಂದ 3 ದಿನ ಮೈಸೂರಲ್ಲಿ 'ಮಾವು ಮೇಳ'

ಫಲಗಳ ರಾಜನ ಸವಿಯುವ ಯೋಗ



●ಮೋಹನ್ ಕಾಯಕ

ಮೈಸೂರು, ಮೇ 14– ಹಣ್ಣುಗಳ ರಾಜ 'ಮಾವಿನ ಹಣ್ಣು' ಸವಿಯುವ ಸದವಕಾಶ... ಮೈಸೂರಿಗರಿಗೆ ರಸಭರಿತ ಬಗೆ ಬಗೆಯ ಮಾವಿನ ಹಣ್ಣುಗಳ ರುಚಿಯನ್ನು ನೀಡಲು ತೋಟಗಾರಿಕೆ ಇಲಾಖೆ ಪೂರ್ವ ತಯಾರಿ ನಡೆಸಿದೆ..!

ಮಳೆ ಕೊರತೆ, ಅಧಿಕ ಉಷ್ಣಾಂಶದಿಂದ ಮಾವು ಇಳುವರಿಯಲ್ಲಿ ಕಡಿಮೆಯಾಗಿದ್ದರೂ ಮೈಸೂರಿನ ಮಾವು ಪ್ರಿಯರ ಮನ ತಣಿಸಲು ಮೇ 24ರಿಂದ 26ವರೆಗೆ ತೋಟಗಾರಿಕೆ ಇಲಾಖೆ ವತಿಯಿಂದ ನಗರದ ಕುಪ್ಪಣ್ಣಪಾರ್ಕ್‌ನಲ್ಲಿ ಮೂರು ದಿನಗಳ 'ಮಾವು ಮೇಳ'ವನ್ನು ಆಯೋಜಿಸಲಾಗಿದೆ.

ಇಲಾಖೆಯು ಮಾವು ಬೆಳೆಗಾರರೊಂದಿಗೆ ಸಭೆ ನಡೆಸಿದ್ದು, ಮೇಳದಲ್ಲಿ ಭಾಗವಹಿಸಲು ಅರ್ಜಿ ಆಹ್ವಾನಿಸಿದೆ. ಈಗಾಗಲೇ ಕೆಲವು ರೈತರು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದು, ತರಾವರಿ ಮಾವಿನ ಹಣ್ಣುಗಳನ್ನು ತರಲು ಭರದ ಸಿದ್ಧತೆ ನಡೆಸಿದ್ದಾರೆ. ಹಾಗೆಯೇ ಇಲಾಖೆಯಿಂದಲೂ ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಮಾವಿನಹಣ್ಣು ಪೂರೈಕೆ ಮಾಡಲು ಅಗತ್ಯ ತಯಾರಿ ಮಾಡಿಕೊಳ್ಳಲಾಗುತ್ತಿದೆ.

ಮೇಳದಲ್ಲಿ ಮೈಸೂರು, ರಾಮನಗರ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬೆಳೆಯುವ ಬಾದಾಮ್, ಮಲ್ಲಿಕಾ, ರಸಪುರಿ, ಮಲಗೋವಾ, ಅಲ್ಫೋನ್ಸ್, ಸಿಂಧೂರ (ಬಾದಾಮಿ), ಕಾಳಪಾಡಿ, ತೋತಾಪುರಿ, ಬೆಂಗನ್‌ಪಲ್ಲಿ, ಶುಗರ್ ಬೇಬಿ ಸೇರಿದಂತೆ 10–15 ಬಗೆಯ ಮಾವಿನ ಹಣ್ಣುಗಳ ಪ್ರದರ್ಶನ ಮತ್ತು ಮಾರಾಟ ಇರಲಿದೆ. ಹಾಗೆಯೇ ಮಾವು ಸೇರಿದಂತೆ ವಿವಿಧ ಹಣ್ಣುಗಳ ಗಿಡಗಳನ್ನು ಮಾರಾಟ ಮಾಡಲು ಹಾಗೂ ಅವುಗಳ ಪೋಷಣೆಯ ಬಗ್ಗೆ ಮಾಹಿತಿ ನೀಡಲಾಗುವುದು.

25 ಮಳಿಗೆಗಳು: ಮಾವು ಮೇಳದಲ್ಲಿ ಸುಮಾರು 25 ಮಳಿಗೆಗಳು ತೆರೆಯಲಿದ್ದು, ನೈಸರ್ಗಿಕವಾಗಿ ಮಾಗಿಸಿದ ಹಣ್ಣುಗಳನ್ನು ಮಾತ್ರ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ. ಮಳೆ ವಾತಾವರಣ ಹಾಗೂ ಮೈಸೂರಲ್ಲಿ ಮಾವಿನ ಹಣ್ಣಿಗಿರುವ ಬೇಡಿಕೆಯನ್ನಾಧರಿಸಿ ಮಾವು ಮೇಳವನ್ನು ಆಯೋಜನೆ ಮಾಡಲಾಗುತ್ತಿದೆ ಎಂದು ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಎಸ್.ಮಂಜುನಾಥ್ ಅಂಗಡಿ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು. ವಾರಾಂತ್ಯದ ಮೂರು ದಿನಗಳ ಕಾಲ ಮಾವು ಮೇಳ ಆಯೋಜಿಸಲಾಗಿದೆ. ಪ್ರವಾಸಿಗರು, ನಗರವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುವ ನಿರೀಕ್ಷೆಯಿದೆ. ಹಾಗೆಯೇ ವಾರದ ರಜೆ ಇರುವುದರಿಂದ ಮೇಳವನ್ನು ಈ ವರ್ಷ ವಿಶೇಷವಾಗಿ ಆಯೋಜನೆ ಮಾಡಬೇಕು ಎಂದುಕೊಂಡಿದ್ದೇವೆ. ಮೈಸೂರು ಸೇರಿದಂತೆ ಸುತ್ತಮುತ್ತಲಿನ ಜಿಲ್ಲೆಗಳಿಂದ ಮಾವು ಬೆಳೆಗಾರರು ಮೇಳದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಮಾವು ಮೇಳದಲ್ಲಿ ತೋಟಗಾರಿಕೆ ಬೆಳೆಗಳ ಗಿಡಗಳನ್ನು ಇಲಾಖೆಯು ರಿಯಾಯಿತಿ ದರದಲ್ಲಿ ಅಂದರೆ 30–40 ರೂ.ಗಳಿಗೆ ಮಾರಾಟ ಮಾಡಲಾಗುವುದು. ಹಾಗೆಯೇ ಯಾವ ರೀತಿಯಲ್ಲಿ ಗಿಡಗಳನ್ನು ನೆಟ್ಟು ಪೋಷಣೆ ಮಾಡಬೇಕು ಎಂಬುದರ ಜೊತೆಗೆ ಇಲಾಖೆಯಲ್ಲಿ ರೈತರಿಗೆ ದೊರೆಯುವ ಯೋಜನೆಗಳ ಬಗ್ಗೆಯೂ ಮಾಹಿತಿ ನೀಡಲಾಗುವುದು. ಮಾವಿನಹಣ್ಣುಗಳನ್ನು ಖರೀದಿಸಲು ಬರುವ ಪ್ರತಿಯೊಬ್ಬರಿಗೆ ಮಾವು ಹಾಗೂ ಇನ್ನಿತರೆ ತೋಟಗಾರಿಕೆ ಬೆಳೆಗಳ ಕುರಿತ ಮಾಹಿತಿಯುಳ್ಳ ಕರಪತ್ರಗಳನ್ನು ವಿತರಣೆ ಮಾಡಲಾಗುವುದು ಎಂದು ತಿಳಿಸಿದರು.

ಇಳುವರಿ ಕಡಿಮೆ: ಮೈಸೂರು ಜಿಲ್ಲೆಯಲ್ಲಿಯೇ ಸುಮಾರು 7000 ಎಕರೆ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದೆ. ಈ ವರ್ಷ ಬೇಸಿಗೆಯಲ್ಲಿ ಉಷ್ಣಾಂಶ ಹೆಚ್ಚಾಗಿದ್ದ ಕಾರಣದಿಂದಾಗಿ ಶೇ.20–25ರಷ್ಟು ಇಳುವರಿ ಕಡಿಮೆಯಾಗಲಿದೆ. ಅಲ್ಲದೆ ಇಳುವರಿ ಸ್ವಲ್ಪ ತಡವಾಗಿ ಬರುವ ಸಾಧ್ಯತೆ ಇದೆ. ಮಾವಿಗೆ ಈಗಾಗಲೇ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಗಿದೆ. ತಾಜಾ ಮಾವಿನಹಣ್ಣುಗಳನ್ನು ಪೂರೈಸುವ ದೃಷ್ಟಿಯಿಂದ ಮಾವು ಮೇಳವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

> **ರಾಸಾಯನಿಕ ಮುಕ್ತ ಮಾವು ಲಭ್ಯ..!**
> ಮಾವು ಮೇಳದಲ್ಲಿ ನೈಸರ್ಗಿಕವಾಗಿ ಮಾಗಿಸುವ ಮಾವಿನ ಹಣ್ಣುಗಳ ಪ್ರದರ್ಶನ ಮತ್ತು ಮಾರಾಟ ಇರಲಿದೆ. ಮುಖ್ಯವಾಗಿ ಜನರ ಆರೋಗ್ಯದ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ರಾಸಾಯನಿಕ ಮುಕ್ತ ಬಗೆ ಬಗೆಯ ಮಾವಿನ ಹಣ್ಣುಗಳನ್ನು ಮಾರಾಟಕ್ಕೆ ಮಾತ್ರ ಅವಕಾಶ ನೀಡಲಾಗಿದೆ. ಈ ಕುರಿತು ರೈತರಿಗೂ ತಿಳಿಹೇಳಲಾಗಿದೆ.
> –ಎಸ್.ಮಂಜುನಾಥ್ ಅಂಗಡಿ, ಉಪ ನಿರ್ದೇಶಕ, ತೋಟಗಾರಿಕೆ ಇಲಾಖೆ



ದೇಹ–ಮನಸ್ಸಿನ ಬಂಧವೇ ಯೋಗ

ನವ ದೆಹಲಿ ಮಿಡ್ನಿ ಸಂಸ್ಥೆಯ ನಿರ್ದೇಶಕ ಡಾ.ಕಾಶಿನಾಥ್ ಸಮಗಂಡಿ ಅಭಿಮತ



ರೋಟರಿ ಜಿ20 ಯೋಗ ಶೃಂಗಸಭೆ–2024ರ ಲೋಗೋವನ್ನು ಮಂಗಳವಾರ ಬಿಡುಗಡೆಗೊಳಿಸಲಾಯಿತು. ನವದೆಹಲಿ ಮಿಡ್ನಿ ಸಂಸ್ಥೆಯ ನಿರ್ದೇಶಕ ಡಾ.ಕಾಶಿನಾಥ್ ಸಮಗಂಡಿ, ಉದ್ಯಮಿ ಆರ್.ಗುರು ಮತ್ತಿತರರಿದ್ದರು.

ಮೈಸೂರು, ಮೇ 14(ಎಂಕೆ)– ಯೋಗ ದೇಹ ಹಾಗೂ ಮನಸ್ಸಿನ ನಡುವಿನ ಬಂಧ ಎಂಬುದನ್ನು ಅರಿಯಬೇಕು ಎಂದು ನವದೆಹಲಿಯ ಮಿಡ್ನಿ ಸಂಸ್ಥೆಯ ನಿರ್ದೇಶಕ ಡಾ.ಕಾಶಿನಾಥ್ ಸಮಗಂಡಿ ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ರೋಟರಿ ಸಂಸ್ಥೆ ಆಯೋಜಿಸಿರುವ ರೋಟರಿ ಜಿ20 ಯೋಗ ಶೃಂಗಸಭೆ–2024ರ ಲೋಗೋ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯೋಗವೆಂದರೆ ದೇಹವನ್ನು ಬಾಗಿಸುವುದೆಂಬ ತಪ್ಪು ಕಲ್ಪನೆಯಿದೆ. ಆದರೆ ನಿಜವಾದ ಅರ್ಥದಲ್ಲಿ ಯೋಗವೆಂದರೆ ದೇಹ ಹಾಗೂ ಮನಸ್ಸಿನ ನಡುವಿನ ಬಂಧ ಎಂಬುದನ್ನು ಅರಿಯಬೇಕು ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಎಲ್ಲೆಂದರಲ್ಲಿ ಯೋಗ ಶಿಕ್ಷಣ ಸಂಸ್ಥೆಗಳು ಹುಟ್ಟಿಕೊಂಡಿವೆ. ಆದರೆ ಅವುಗಳು ಹೇಗೆ ಕಾರ್ಯನಿರ್ವಹಿಸುತ್ತಿವೆ ಎಂಬುದರಲ್ಲಿ ಗೊಂದಲಗಳಿವೆ. ಆದ್ದರಿಂದ ಯೋಗ ಸರ್ಟಿಫಿಕೇಟ್ ಬೋರ್ಡ್ ಸ್ಥಾಪಿಸಲಾಗಿದೆ. ಭಾರತೀಯ ಪದ್ಧತಿಯಲ್ಲಿ ಯೋಗ ಶಿಕ್ಷಣ ನೀಡಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಿ ಪ್ರಮಾಣಪತ್ರ ನೀಡುತ್ತಿದ್ದೇವೆ. ಈ ಬಗ್ಗೆ ಸಾರ್ವಜನಿಕರು ತಿಳಿದುಕೊಂಡಿರಬೇಕು ಎಂದು ಕಿವಿಮಾತು ಹೇಳಿದರಲ್ಲದೆ ಯೋಗಶಾಸ್ತ್ರವನ್ನು ಪ್ರಾಚ್ಯ ವಿಧಾನದ ಮೂಲಕವೇ ಜನಸಾಮಾನ್ಯರಲ್ಲಿಗೆ ಕೊಂಡೊಯ್ಯಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ರೋಟರಿಯಂತಹ ಸಂಸ್ಥೆ ಕೈಜೋಡಿಸಿದಾಗ ಈ ಯೋಜನೆಗಳು ಕಾರ್ಯಸಾಧ್ಯವಾಗುತ್ತವೆ ಎಂದು ನುಡಿದರು. ರೋಟರಿ ಜಿ20 ಯೋಗ ಶೃಂಗಸಭೆಯ ಅಧ್ಯಕ್ಷ ಪಿ.ಡಿ.ಜಿ. ರಂಗರಾವ್ ಕೃಷ್ಣ ಮಾತನಾಡಿ, ಮೇ 18ರಂದು ಬೆಳಿಗ್ಗೆ 9.30ಕ್ಕೆ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ರೋಟರಿ ಜಿ–20 ಯೋಗ ಶೃಂಗಸಭೆ–2024 ನಡೆಯಲಿದೆ. ಶೃಂಗಸಭೆಯಲ್ಲಿ ಯೋಗದ ಮೂಲಕ ವಿವಿಧ ಆಯಾಮಗಳಲ್ಲಿ ಆರೋಗ್ಯದಲ್ಲಿ ಸ್ಥಿರತೆ ಪಡೆಯುವುದ್ಹೇಗೆ ಎಂಬುದರ ಕುರಿತು ಗಣ್ಯರು ತಿಳಿಸಿಕೊಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಉದ್ಯಮಿ ಆರ್.ಗುರು, ರೋಟರಿ ಸಂಸ್ಥೆಯ ಎನ್. ಮೂರ್ತಿ, ರಾಘವೇಂದ್ರ ಪೈ, ಕಾಶಿನಾಥ್ ಸಮಗಂಡಿ, ಮನೋಹರ್, ಶಶಿಕುಮಾರ್ ಮತ್ತಿತರರಿದ್ದರು.

ಎಸ್‌ಎಸ್‌ಎಲ್‌ಸಿಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನಗಳಿಸಿದ ಬಾಗಲಕೋಟೆ ಅಂಕಿತ; ದ್ವಿತೀಯ ಸ್ಥಾನದ ಮಂಡ್ಯ ನವನೀತ್‌ಗೆ ಮುಖ್ಯಮಂತ್ರಿ ಸನ್ಮಾನ

● ಇಬ್ಬರಿಗೂ ಕ್ರಮವಾಗಿ 5, 3 ಲಕ್ಷ ರೂ.ನೆರವು ಘೋಷಣೆ ● ಹಾಗೆಯೇ ಇಬ್ಬರು ವ್ಯಾಸಂಗ ಮಾಡಿದ ಶಾಲೆಗಳಿಗೂ ತಲಾ 1 ಕೋಟಿ, 50 ಲಕ್ಷ ಅನುದಾನ



ಎಸ್‌ಎಸ್‌ಎಲ್‌ಸಿಯಲ್ಲಿ ರಾಜ್ಯ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿನಿ ಅಂಕಿತ ಹಾಗೂ ದ್ವಿತೀಯ ರ್‍ಯಾಂಕ್ ವಿದ್ಯಾರ್ಥಿ ಕೆ.ಸಿ.ನವನೀತ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸನ್ಮಾನಿಸಿದರು. ವಿದ್ಯಾರ್ಥಿಗಳಿಬ್ಬರ ಪೋಷಕರು, ಶಿಕ್ಷಕರು ಉಪಸ್ಥಿತರಿದ್ದರು.

ಬೆಂಗಳೂರು, ಮೇ 14(ಎಂಕೆ)– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಮೆಳ್ಳಿಗೇರಿ ಮೊರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿನಿ ಅಂಕಿತ ಹಾಗೂ ದ್ವಿತೀಯ ಸ್ಥಾನ ಪಡೆದ ಮಂಡ್ಯ ತಾಲೂಕಿನ ತುಂಬಿಗೆರೆ ಮೊರಾರ್ಜಿ ಶಾಲೆಯ ವಿದ್ಯಾರ್ಥಿ ಕೆ.ಸಿ.ನವನೀತ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸನ್ಮಾನಿಸಿ, ಮುಂದಿನ ವಿದ್ಯಾಭ್ಯಾಸ ಯಶಸ್ವಿಯಾಗಿ ಸಾಗಲಿ ಎಂದು ಶುಭ ಹಾರೈಸಿದರು.

ಬಳಿಕ ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ ಮುಖ್ಯಮಂತ್ರಿಗಳು, ಅವರ ಪೋಷಕರನ್ನೂ ಅಭಿನಂದಿಸಿದರಲ್ಲದೆ ವಿದ್ಯಾರ್ಥಿಗಳಿಬ್ಬರ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲಿ ಎಂದು ಅಂಕಿತಾಗೆ 5 ಲಕ್ಷ ರೂ. ಹಾಗೂ ನವನೀತ್ ಗೆ 3 ಲಕ್ಷ ರೂ.ಗಳ ನೆರವು ನೀಡುವುದಾಗಿ ಘೋಷಣೆ ಮಾಡಿದರು. ಹಾಗೆಯೇ ಅಂಕಿತಾ ಓದಿದ ಶಾಲೆಯ ಅಭಿವೃದ್ಧಿಗೆ ಒಂದು ಕೋಟಿ ರೂ. ಹಾಗೂ ನವನೀತ್ ವ್ಯಾಸಂಗ ಮಾಡಿದ ಶಾಲೆಯ ಅಭಿವೃದ್ಧಿಗೆ 50 ಲಕ್ಷ ರೂ.ಗಳ ಅನುದಾನ ಬಿಡುಗಡೆ ಮಾಡುವುದಾಗಿಯೂ ತಿಳಿಸಿದರಲ್ಲದೆ ಮೊರಾರ್ಜಿ ದೇಸಾಯಿ ವಸತಿ ಶಾಲೆ ನನ್ನ ಕಲ್ಪನೆ. 1994ರಲ್ಲಿ ಉಪ ಮುಖ್ಯಮಂತ್ರಿ ಆಗಿದ್ದಾಗ ಈ ವಸತಿ ಶಾಲೆಗಳಿಗೆ ಚಾಲನೆ ನೀಡಲಾಯಿತು ಎಂದು ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಂದಲೂ ವಿದ್ಯಾರ್ಥಿಗಳಿಗೆ ನೆರವು...



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪ್ರಥಮ ಸ್ಥಾನ ಪಡೆದ ಅಂಕಿತಾಗೆ 5 ಲಕ್ಷ ರೂ. ಹಾಗೂ ದ್ವಿತೀಯ ಸ್ಥಾನ ಪಡೆದ ನವನೀತ್‌ಗೆ 2 ಲಕ್ಷ ರೂ. ಚೆಕ್ ವಿತರಿಸಿ, ಮುಂದೆಯೂ ಇದೇ ರೀತಿ ಓದಿ ನಿಮ್ಮ ಶಾಲೆ ಹಾಗೂ ಪೋಷಕರಿಗೆ ಕೀರ್ತಿ ತನ್ನಿ ಎಂದು ಶುಭ ಹಾರೈಸಿದರು.

ನಿಮ್ಮ ಸಾಧನೆಯೇ ನನಗೆ ಪ್ರೇರಣೆ: ಅಂಕಿತ

ಮುಖ್ಯಮಂತ್ರಿಗಳಿಂದ ಸನ್ಮಾನ ಸ್ವೀಕರಿಸಿದ ಬಳಿಕ ಮಾತನಾಡಿದ ವಿದ್ಯಾರ್ಥಿನಿ ಅಂಕಿತ, ಸಾರ್ ನಿಮ್ಮ ಸಾಧನೆಗಳು, ನಿಮ್ಮ ಮಾತುಗಳು ನನ್ನ ಈ ಯಶಸ್ಸಿಗೆ ಪ್ರೇರಣೆ ಮತ್ತು ಪ್ರೋತ್ಸಾಹ ನೀಡಿದವು. ಹಾಗೆಯೇ ಮುಂದೆ ಐಎಎಸ್ ಅಧಿಕಾರಿ ಆಗಬೇಕೆಂಬ ಬಯಕೆ ಇದೆ ಎಂದು ತಮ್ಮ ಗುರಿಯನ್ನು ವ್ಯಕ್ತಪಡಿಸಿದರು.

ಯೋಧರ ಮನೆಯಲ್ಲಿ ಕಳವು

ಮೈಸೂರು, ಮೇ 14(ಎಸ್‌ಬಿಡಿ)– ಸೈನಿಕರೊಬ್ಬರ ಮನೆಯ ಹಿಂಬಾಗಿಲು ಮೀಟಿ, ಕಳ್ಳತನ ಮಾಡಿರುವ ಘಟನೆ ಮೈಸೂರಿನ ವಸಂತನಗರದಲ್ಲಿ ನಡೆದಿದೆ.

ಇಲ್ಲಿನ ನಾಲ್ಕನೇ ಮುಖ್ಯರಸ್ತೆಯಲ್ಲಿರುವ ಸೈನಿಕ ದೀಪು ಅವರ ಮನೆಯಲ್ಲಿ ಈ ಘಟನೆ ನಡೆದಿದ್ದು, ಮನೆಯನ್ನೆಲ್ಲಾ ಜಾಲಾಡಿರುವ ಖದೀಮರು ಕೈಗೆ ಸಿಕ್ಕ 15 ಸಾವಿರ ಹಣದೊಂದಿಗೆ ಪರಾರಿಯಾಗಿದ್ದಾರೆ. ಸೈನಿಕ ದೀಪು ಅರುಣಾಚಲ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಅವರ ಪತ್ನಿ ಅಶ್ವಿನಿ ಮಕ್ಕಳೊಂದಿಗೆ ಮೇ 1ರಂದು ಹಾಸನ ಜಿಲ್ಲೆಯಲ್ಲಿರುವ ತಮ್ಮ ಮಾವನ ಮನೆಗೆ ಹೋಗಿದ್ದರು. ಮೇ 11ರಂದು ಮೈಸೂರಿಗೆ ವಾಪಸ್ಸಾದಾಗ ಮನೆ ಹಿಂಭಾಗದ ಕಬ್ಬಿಣ ಹಾಗೂ ಮರದ ಬಾಗಿಲುಗಳು ತೆರೆದಿದ್ದವು. ರೂಂನಲ್ಲಿ ಗೋಡೆ ಬೀರುವಿನಲ್ಲಿದ್ದ ಬಟ್ಟೆಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಪರಿಶೀಲಿಸಿದಾಗ ಅದರಲ್ಲಿದ್ದ 15 ಸಾವಿರ ರೂ. ಹಣ ಕಳ್ಳತನವಾಗಿತ್ತು. ಮನೆಯಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಿರುವುದನ್ನು ಗಮನಿಸಿದ ಖದೀಮರು ಅದರ ಡಿವಿಆರ್ ಅನ್ನೂ ಕದ್ದೊಯ್ದಿದ್ದಾರೆ. ಈ ಸಂಬಂಧ ಆಲನಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಖದೀಮರ ಪತ್ತೆಗೆ ಶೋಧ ನಡೆಸಿದ್ದಾರೆ.

ಕಂದಾಯ ಸೇವೆಗಳ ವಿಶೇಷ ಅಭಿಯಾನಕ್ಕೆ ಉತ್ತಮ ಪ್ರತಿಕ್ರಿಯೆ

ಮೈಸೂರು, ಮೇ 14(ಎಸ್‌ಬಿಡಿ)– ಜಿಲ್ಲೆಯಲ್ಲಿ ಕಂದಾಯ ಸೇವೆಗಳ ವಿಶೇಷ ಅಭಿಯಾನದ ಎರಡನೇ ದಿನವೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಕಂದಾಯ ಇಲಾಖೆಗೆ ಸಂಬಂಧಿಸಿದ ಬಾಕಿ ಪ್ರಕರಣಗಳ ಶೀಘ್ರ ವಿಲೇವಾರಿ ಹಾಗೂ ವಿವಿಧ ಸೇವೆಗಳನ್ನು ತ್ವರಿತವಾಗಿ ತಲುಪಿಸುವ ನಿಟ್ಟಿನಲ್ಲಿ ಗ್ರಾಮ ಆಡಳಿತ ಅಧಿಕಾರಿಗಳ ನೇತೃತ್ವದಲ್ಲಿ ಗ್ರಾಮಗಳಲ್ಲೇ ವಿಶೇಷ ಅಭಿಯಾನ ನಡೆಸಲಾಗುತ್ತಿದ್ದು, ಮಂಗಳವಾರ 9115 ಆರ್‌ಟಿಸಿ–ಆಧಾರ್ ಸೀಡಿಂಗ್, 49 ಎನ್‌ಪಿಸಿಐ, 668 ಪ್ರೂಟ್ಸ್ ಐಡಿ ಅಪ್ಡೇಷನ್ ಮಾಡಲಾಗಿದೆ.

ಬರ ಪರಿಹಾರಕ್ಕೆ ಸಂಬಂಧಿಸಿದ 101, ಪೌತಿ ಖಾತೆಗೆ ಸಂಬಂಧಿಸಿದ 89, ಲ್ಯಾಂಡ್ ಬೀಟ್ ಅಪ್ಡೇಷನ್‌ನ 1138, ಬಗರ್‌ಹುಕುಂ 12, ಮಳೆ ಹಾನಿಗೆ ಸಂಬಂಧಿಸಿದ 82 ಹಾಗೂ 736 ಸಕಾಲ ಅರ್ಜಿಗಳನ್ನು ಸ್ವೀಕರಿಸಿ, ಮುಂದಿನ ಕ್ರಮ ವಹಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳ ಕಚೇರಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಎಡೆಬಿಡದೆ ಎದುರಾಗುತ್ತಿರುವ ಚುನಾವಣೆಗಳು! ರಾಜ್ಯದ ಅಭಿವೃದ್ಧಿಗೆ 'ಮಾದರಿ ನೀತಿ ಸಂಹಿತೆ' ಅಡ್ಡಿ

● ಲೋಕಸಭೆ ಆಯ್ತು... ಬೆನ್ನ ಹಿಂದೆಯೇ ಪರಿಷತ್ ಚುನಾವಣೆ

● ಅಧಿಕಾರದ ಚದುರಂಗದಾಟದಲ್ಲಿ ಸರ್ಕಾರದ್ದು ಬರೀ ಅಭಿವೃದ್ಧಿ ಮಂತ್ರ!

ಬೆಂಗಳೂರು, ಮೇ14(ಕೆಎಂಶಿ)– ಕರ್ನಾಟಕಕ್ಕೆ ಒಂದಲ್ಲಾ ಒಂದು ಚುನಾವಣೆ ಒಂದರ ಹಿಂದೆ ಒಂದರಂತೆ ಬಂದೆರಗಿ ಮಾದರಿ ನೀತಿಸಂಹಿತೆ ರಾಜ್ಯದ ಅಭಿವೃದ್ಧಿಗೆ ಅಡ್ಡಿಯಾಗಿದೆ.

ರಾಜ್ಯದಲ್ಲಿ ಎರಡು ಹಂತದಲ್ಲಿ ಲೋಕಸಭಾ ಚುನಾವಣೆ ಮತದಾನ ಮುಗಿಯುತ್ತಿದ್ದಂತೆ ಈಗ ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರಗಳಿಂದ ತೆರವಾಗುತ್ತಿರುವ ಆರು ಸ್ಥಾನಗಳಿಗೆ ಚುನಾವಣಾ ಪ್ರಕ್ರಿಯೆ ಪ್ರಾರಂಭವಾಗಿದೆ. ಇದರ ನಡುವೆ ರಾಜ್ಯ ವಿಧಾನಸಭೆಯಿಂದ ವಿಧಾನಪರಿಷತ್ತಿನ 11 ಸ್ಥಾನಗಳು ಜುಲೈ 17ಕ್ಕೆ ತೆರವಾಗಲಿದ್ದು ಈ ಸ್ಥಾನಗಳಿಗೂ ಕೇಂದ್ರ ಚುನಾವಣಾ ಆಯೋಗ ಅಧಿಸೂಚನೆ ಹೊರಡಿಸುವ ವೇಳೆ ಸನ್ನಿಹಿತವಾಗಿದೆ.

ಹನ್ನೊಂದು ಸ್ಥಾನಗಳ ಜೊತೆಗೆ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ (ಕಾಂಗ್ರೆಸ್) ಅವರಿಂದ ತೆರವಾದ ಅಲ್ಪಾವಧಿಯ ಒಂದು ಸ್ಥಾನದ ಚುನಾವಣೆಗೂ ಪ್ರತ್ಯೇಕ ಅಧಿಸೂಚನೆ ಹೊರಬೀಳಲಿದೆ.

ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದ ಶೆಟ್ಟರ್ ಅವರಿಗೆ ಪಕ್ಷ ಈ ಸ್ಥಾನ ಕಲ್ಪಿಸಿತ್ತು. ನಂತರ ಅವರು, ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಗೊಳ್ಳುವ ಸಮಯದಲ್ಲಿ ಪರಿಷತ್ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು, ಈಗ ಈ ಸ್ಥಾನಕ್ಕೆ ಚುನಾವಣೆ ನಡೆಯಬೇಕಿದೆ. ಲೋಕಸಭಾ ಚುನಾವಣೆಯ ಪ್ರಕ್ರಿಯೆ ಪೂರ್ಣಗೊಂಡ ನಂತರ 11 ಸ್ಥಾನಗಳಿಗೆ ಆಯೋಗ ಚುನಾವಣೆ ನಡೆಸಲು ಸಿದ್ಧತೆ ಬೆನ್ನಲ್ಲೇ, ಈ ಸ್ಥಾನಗಳನ್ನು ಗೆಲ್ಲಲು ಕಾಂಗ್ರೆಸ್, ಬಿಜೆಪಿ–ಜೆಡಿಎಸ್‌ನಲ್ಲಿ ಪೈಪೋಟಿ ಆರಂಭಗೊಂಡಿದೆ. ವಿಧಾನಸಭೆಯ ಬಲಾಬಲದ ಆಧಾರದ ಮೇಲೆ ಆಡಳಿತಾರೂಢ ಕಾಂಗ್ರೆಸ್, 11 ಸ್ಥಾನಗಳ ಪೈಕಿ 7 ಸ್ಥಾನಗಳನ್ನು ಗಳಿಸಲು ಅವಕಾಶ ಇದೆ. ಉಳಿದ ನಾಲ್ಕರಲ್ಲಿ ಬಿಜೆಪಿಗೆ ಮೂರು ಹಾಗೂ ಜೆಡಿಎಸ್‌ಗೆ ಒಂದು ಸ್ಥಾನ ಸುಲಭವಾಗಿ ಲಭ್ಯವಾಗಲಿದೆ.

ಡಾ.ತೇಜಸ್ವಿನಿಗೌಡ ಹಾಗೂ ಕೆ.ಪಿ. ನಂಜುಂಡಿ ಕಳೆದ ಬಾರಿ ಬಿಜೆಪಿಯಿಂದ ವಿಧಾನಪರಿಷತ್ ಸದಸ್ಯರಾಗಿ ಆಯ್ಕೆಗೊಂಡಿದ್ದರು. ಬದಲಾದ ಸನ್ನಿವೇಶದಲ್ಲಿ ಅವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ ಕಾಂಗ್ರೆಸ್ ಸೇರ್ಪಡೆಗೊಂಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾಗಿರುವ ಎನ್.ಎಸ್.ಬೋಸರಾಜ್, ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜು, ಅರವಿಂದಕುಮಾರ್ ಅರಳಿ, ಕೆ.ಹರೀಶ್ ಕುಮಾರ್ (ಕಾಂಗ್ರೆಸ್).

ಬಿ.ಎಂ.ಫಾರೂಕ್ (ಜೆಡಿಎಸ್), ರಘುನಾಥರಾವ್ ಮಲ್ಕಾಪುರೆ, ಎನ್.ರವಿಕುಮಾರ್, ಎಸ್.ರುದ್ರೇಗೌಡ, ಮುನಿರಾಜೂಗೌಡ (ಬಿಜೆಪಿ) ಸದಸ್ಯಾವಧಿ ಜುಲೈ 17ಕ್ಕೆ ಪೂರ್ಣಗೊಳ್ಳಲಿದೆ. ನಿವೃತ್ತಿಗೊಳ್ಳುವ ಸದಸ್ಯರಲ್ಲಿ ಆಯಾ ಪಕ್ಷ ಎಷ್ಟು ಮಂದಿಗೆ ಮತ್ತೆ ಅವಕಾಶ ಮಾಡಿಕೊಡುತ್ತದೋ ತಿಳಿಯದು. ಆದರೆ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ವಿಧಾನಪರಿಷತ್ ಸ್ಥಾನ ಪಡೆಯಲು ಭಾರಿ ಪೈಪೋಟಿಯೇ ನಡೆದಿದೆ.

24 ಜೂಜುಕೋರರ ಸೆರೆ: 3.15 ಲಕ್ಷ ರೂ. ನಗದು ವಶ

ಮೈಸೂರು, ಮೇ 14(ಆರ್‌ಕೆ)– ಎರಡು ಪ್ರತ್ಯೇಕ ಸ್ಥಳಗಳಲ್ಲಿ ದಾಳಿ ನಡೆಸಿದ ಸಿಸಿಬಿ ಪೊಲೀಸರು, ಜೂಜಾಟದಲ್ಲಿ ತೊಡಗಿದ್ದ 27 ಮಂದಿಯನ್ನು ಬಂಧಿಸಿ 3,15,470 ರೂ. ನಗದನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ಶ್ರೀರಾಂಪುರ ಎರಡನೇ ಹಂತದ ನಿರ್ಮಲ ಸ್ಕೂಲ್ ಹಿಂಭಾಗದ ಖಾಲಿ ಜಾಗದಲ್ಲಿ ಅಂದರ್–ಬಾಹರ್ ಜೂಜಾಡುತ್ತಿದ್ದಾಗ ಮೇ 4 ರಂದು ದಾಳಿ ನಡೆಸಿದ ಪೊಲೀಸರು, 18 ಮಂದಿಯನ್ನು ಬಂಧಿಸಿ 2,02,720 ರೂ. ನಗದನ್ನು ವಶಕ್ಕೆ ಪಡೆದರು.

ಮೇ 5 ರಂದು ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ ಆಲನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಶ್ರೀ ಚೌಡೇಶ್ವರಿ ದೇವಸ್ಥಾನದ ಬಳಿಯ ವಾಟರ್ ಟ್ಯಾಂಕ್ ರಸ್ತೆ ಪಕ್ಕದ ಜಾಗದಲ್ಲಿ ಜೂಜಾಡುತ್ತಿದ್ದ 9 ಮಂದಿಯನ್ನು ಬಂಧಿಸಿ 1,12,750 ರೂ. ನಗದನ್ನು ವಶಪಡಿಸಿಕೊಂಡಿದ್ದಾರೆ.

ಈ ಸಂಬಂಧ ವಿದ್ಯಾರಣ್ಯಪುರಂ ಮತ್ತು ಆಲನಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಗಾಂಜಾ ಮಾರಾಟ ಯತ್ನ; ಇಬ್ಬರ ಬಂಧನ

ಮೈಸೂರು, ಮೇ 14(ಎಸ್‌ಬಿಡಿ)– ಗಾಂಜಾ ಮಾರಾಟಕ್ಕೆ ಯತ್ನಿಸುತ್ತಿದ್ದ ಇಬ್ಬರನ್ನು ಮೈಸೂರಿನ ಸೆನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಗೌಸಿಯಾನಗರದ ಅಸ್ಗರ್ ಅಹಮದ್ ಹಾಗೂ ಶಾಂತಿನಗರದ ಅಕ್ಬರ್ ಬೇಗ್ ಬಂಧಿತರು. ಇವರು ಮಾರಾಟಕ್ಕೆ ಪೊಟ್ಟಣಗಳಲ್ಲಿ ಇಟ್ಟುಕೊಂಡಿದ್ದ 365 ಗ್ರಾಂ ಗಾಂಜಾ ಹಾಗೂ 600 ರೂ. ಹಣವನ್ನು ವಶಪಡಿಸಿಕೊಳ್ಳಲಾಗಿದೆ.

ಸೆನ್ ಠಾಣೆ ಇನ್ಸ್‌ಪೆಕ್ಟರ್ ಪ್ರಸನ್ನಕುಮಾರ್, ಎಎಸ್‌ಐ ಸುಭಾಷ್‌ಚಂದ್ರ, ಸಿಬ್ಬಂದಿ ಯಾಕೂಬ್ ಷರೀಫ್ ಹಾಗೂ ಭಾಷಾ ಅವರೊಂದಿಗೆ ಸೋಮವಾರ ಸಂಜೆ ಉದಯಗಿರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗಸ್ತಿನಲ್ಲಿದ್ದಾಗ ಗೌಸಿಯಾನಗರ ಸಿ ಬ್ಲಾಕ್, 11ನೇ ಕ್ರಾಸ್‌ನಲ್ಲಿ ನಿಂತಿದ್ದ ಅಸ್ಗರ್ ಅಹಮದ್ ಹಾಗೂ ಅಕ್ಬರ್‌ಬೇಗ್ ಓಡಿಹೋಗಲು ಯತ್ನಿಸಿದ್ದಾರೆ. ಆಗ ಅವರನ್ನು ಹಿಡಿದು ಕೈಯಲ್ಲಿದ್ದ ಪ್ಲಾಸ್ಟಿಕ್ ಕವರ್ ಅನ್ನು ಪರಿಶೀಲಿಸಿದಾಗ ಗಾಂಜಾ ಪತ್ತೆಯಾಗಿದೆ. ಈ ಸಂಬಂಧ ಇನ್ಸ್‌ಪೆಕ್ಟರ್ ನೀಡಿದ ದೂರಿನನ್ವಯ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗಿದೆ.

ಕುಮಾರಸ್ವಾಮಿ ಆಲ್‌ವೇಸ್ ಹಿಟ್ ಅಂಡ್ ರನ್ ಕೇಸ್

ಮಾಜಿ ಸಿಎಂ ಹೆಚ್‌ಡಿಕೆಗೆ ಸಿಎಂ ಸಿದ್ದರಾಮಯ್ಯ ತಿರುಗೇಟು

ಮೈಸೂರು, ಮೇ 14(ಬಿಎಲ್‌ಯು)– ಕುಮಾರಸ್ವಾಮಿ ಆಲ್‌ವೇಸ್ ಹಿಟ್ ಅಂಡ್ ರನ್ ಕೇಸ್ (ಯಾವಾಗಲೂ ಪಲಾಯನವಾದಿ) ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು ನೀಡಿದ್ದಾರೆ.

ಮೈಸೂರು ವಿಮಾನ ನಿಲ್ದಾಣದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಸರ್ಕಾರದ ಭಾಗವಾಗಿರುವ ದೊಡ್ಡ ತಿಮಿಂಗಿಲವನ್ನು ಬಂಧಿಸಿ ವಿಚಾರಣೆ ಮಾಡುವವರು ಯಾರು ಎಂಬ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪ್ರಶ್ನೆಗೆ ಅವರು ಪ್ರತಿಕ್ರಿಯೆ ನೀಡಿದರು.

ಕುಮಾರಸ್ವಾಮಿ ಯಾವಾಗಲೂ ಹಿಟ್ ಅಂಡ್ ರನ್ ಹೇಳಿಕೆ ನೀಡುತ್ತಾರೆ. ಅವರ ಆರೋಪಗಳ ಬಗ್ಗೆ ನಾನು ಮಾತನಾಡುವುದಿಲ್ಲ ಎಂದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಪತನವಾಗುತ್ತದೆ ಎಂದು ಒಂದು ವರ್ಷದಿಂದ ಹೇಳುತ್ತಲೇ ಇದ್ದಾರೆ. ಕರ್ನಾಟಕ ಸರ್ಕಾರದ ಬಗ್ಗೆ ಮಾತನಾಡಲು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂಧೆ ಯಾರು ಎಂದು



ಮೈಸೂರು ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಪ್ರಶ್ನಿಸಿದ ಸಿದ್ದರಾಮಯ್ಯ, ಶಿಂಧೆ ಮೊದಲು ತಮ್ಮ ಸರ್ಕಾರವನ್ನು ಉಳಿಸಿಕೊಳ್ಳಲಿ ಎಂದು ಸಲಹೆ ನೀಡಿದರು.

ಸರ್ಕಾರ, ಒಳ ಜಗಳದಿಂದ ಬಿದ್ದು ಹೋಗಲಿದೆ ಎಂಬ ಬಿಜೆಪಿ ಭವಿಷ್ಯದ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ನಮ್ಮಲ್ಲಿ ಒಳ ಜಗಳವೇ ಇಲ್ಲ. ಜಗಳ ಎಂಬುವುದು ಹೊರಗು ಇಲ್ಲ, ಒಳಗು ಇಲ್ಲ. ಜಗಳ ಇದ್ದರೆ ತಾನೆ ಸರ್ಕಾರ ಬಿದ್ದು ಹೋಗುವುದು ಎಂದು ಹೇಳಿದರು.

ನಮ್ಮ ಸರ್ಕಾರ ಅಥವಾ ಪಕ್ಷದಲ್ಲಿ ಒಳ ಜಗಳವಿದ್ದರೆ ಲೋಕಸಭಾ ಚುನಾವಣೆಯಲ್ಲಿ ಇಷ್ಟೊಂದು ಒಗ್ಗಟ್ಟಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿತ್ತೆ ಎಂದು ಮರು ಪ್ರಶ್ನಿಸಿದರು. ದೇಶದ ಬೇರೆ ರಾಜ್ಯಗಳಲ್ಲಿ ನಡೆಯುತ್ತಿರುವ ಲೋಕಸಭಾ ಚುನಾವಣೆಯಲ್ಲಿ ಸ್ಟಾರ್ ಪ್ರಚಾರಕ್ಕೆ ಕಾಂಗ್ರೆಸ್ ಪಕ್ಷದಿಂದ ನನಗೆ ಆಹ್ವಾನ ಬಂದಿದೆ. ಆದರೆ ಈ ತನಕ ನಾನು ಬೇರೆ ರಾಜ್ಯದ ಪ್ರಚಾರಕ್ಕೆ ಹೋಗಿಲ್ಲ. ಕರ್ನಾಟಕದಲ್ಲೇ ಬೇರೆ ಕೆಲಸಗಳಿರುವ ಕಾರಣ ಈ ಬಗ್ಗೆ ಇನ್ನು ತೀರ್ಮಾನ ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು.

ಪೆನ್‌ಡ್ರೈವ್ ಪ್ರಕರಣ ಎಂಎಲ್‌ಸಿ ಚುನಾವಣೆ ಮೇಲೆ ಪರಿಣಾಮ ಬೀರಲ್ಲ

ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣ ದಕ್ಷಿಣ ಶಿಕ್ಷಕರ ಕ್ಷೇತ್ರ ಸೇರಿದಂತೆ ಇತರೆ ಕ್ಷೇತ್ರಗಳಿಂದ ವಿಧಾನಪರಿಷತ್‌ಗೆ ನಡೆಯುವ ಚುನಾವಣೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಪೆನ್‌ಡ್ರೈವ್‌ಗೂ ಈ ಚುನಾವಣೆಗೂ ಯಾವುದೇ ಸಂಬಂಧವಿಲ್ಲ. ಪದವೀಧರರು ಹಾಗೂ ಶಿಕ್ಷಕ ಮತದಾರರು ಪ್ರಬುದ್ಧರಿದ್ದು, ಯಾವುದು ಸರಿ, ಯಾವುದು ತಪ್ಪು ಎಂದು ತೀರ್ಮಾನ ಮಾಡುವ ಶಕ್ತಿ ಹೊಂದಿದ್ದಾರೆ ಎಂದರು.

ಕೇಂದ್ರದ ಬಿಜೆಪಿ ಸರ್ಕಾರ ಏನು ಸಾಧನೆ ಮಾಡಿದೆ, ರಾಜ್ಯ ಕಾಂಗ್ರೆಸ್ ಸರ್ಕಾರ ಯಾವ ರೀತಿಯ ಅಭಿವೃದ್ಧಿ ಮಾಡಿದೆ ಎಂದು ಮತದಾರರು ತುಲನೆ ಮಾಡುತ್ತಾರೆ ಎಂದು ಸಿದ್ದರಾಮಯ್ಯ ಅಭಿಪ್ರಾಯಪಟ್ಟರು. ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ನಡುವೆ ಮೈತ್ರಿ ಏರ್ಪಟ್ಟಿರುವುದರಿಂದ ಕಾಂಗ್ರೆಸ್ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಈ ಬಾರಿ ಕಾಂಗ್ರೆಸ್ ಪಕ್ಷ ಈ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿದೆ ಎಂದರು.

ಕಳೆದ ಆರು ತಿಂಗಳ ಹಿಂದೆಯೇ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಘೋಷಣೆ ಮಾಡಿದೆ. ನಮ್ಮ ಅಭ್ಯರ್ಥಿಗಳು ಮತದಾರರನ್ನು ಸಂಪರ್ಕಿಸಿ ಮತ ಕೇಳಲು ಬಹಳಷ್ಟು ಸಮಯಾವಕಾಶ ಸಿಕ್ಕಿದೆ. ಇದು ಸಹ ನಮ್ಮ ಪಕ್ಷದ ಗೆಲುವಿಗೆ ಅನುಕೂಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಎಲ್ಲರನ್ನು ಪ್ರೀತಿ, ಗೌರವದಿಂದ ಕಾಣುವ ಲಿಂಗಾಯತ ಧರ್ಮ

ಬಸವ ಜಯಂತಿಯಲ್ಲಿ ಶ್ರೀ ಗೌರಿಶಂಕರ ಸ್ವಾಮೀಜಿ ಅಭಿಪ್ರಾಯ

ತಿ.ನರಸೀಪುರ, ಮೇ 14– ಎಲ್ಲಾ ಧರ್ಮೀಯರನ್ನು ಪ್ರೀತಿ ಮತ್ತು ಗೌರವದಿಂದ ಅಪ್ಪಿಕೊಂಡಿರುವ ಏಕೈಕ ಧರ್ಮ ಲಿಂಗಾಯತ ಧರ್ಮ ಎಂದು ಮದ್ಗಾರಲಿಂಗಯ್ಯನಹುಂಡಿ ವಿರಕ್ತ ಮಠಾಧ್ಯಕ್ಷರಾದ ಶ್ರೀಗೌರಿಶಂಕರಸ್ವಾಮೀಜಿ ಅಭಿಪ್ರಾಯಪಟ್ಟರು.



ತಿ.ನರಸೀಪುರದ ಜಾಗತಿಕ ಲಿಂಗಾಯತ ಮಹಾಸಭಾದಿಂದ ನಡೆದ ಬಸವ ಜಯಂತಿಯಲ್ಲಿ ಶ್ರೀಗೌರಿಶಂಕರಸ್ವಾಮೀಜಿ ಮಾತನಾಡಿದರು.

ಪಟ್ಟಣದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಜಗಜ್ಯೋತಿ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಬಸವೇಶ್ವರರು 900 ವರ್ಷಗಳ ಹಿಂದೆಯೇ ಅನುಭವ ಮಂಟಪ ನಿರ್ಮಿಸಿ ಎಲ್ಲಾ ವರ್ಗದವರಿಗೂ ಸಮಾನ ಅವಕಾಶ ಕಲ್ಪಿಸಿದ್ದರು. ಈಗಲೂ ಸಹ ಪಾರ್ಲಿಮೆಂಟ್‌ನಲ್ಲಿ ಎಲ್ಲಾ ವರ್ಗದ ಜನರಿಗೆ ಸಮಾನ ಅವಕಾಶ ದೊರಕಿಸಲಾಗುತ್ತಿದೆ. ಲಿಂಗಾಯತ ಧರ್ಮದ ಗುರು ಬಸವಣ್ಣನವರಾಗಿದ್ದು, ಬಸವಾದಿ ಶರಣರ ವಚನ ಗ್ರಂಥ ನಮ್ಮ ಧರ್ಮದ ಗ್ರಂಥವಾಗಿದೆ ಎಂದರು.

ಗುರುಮಲ್ಲೇಶ್ವರರು ಬಸವ ತತ್ವ ನಿಷ್ಠೆ ಉಳ್ಳವರಾಗಿದ್ದು, ಅವರು ಕಾಯಕ ದಾಸೋಹವನ್ನು ಚಾಚು ತಪ್ಪದೇ ಮಾಡುತ್ತಿದ್ದರು. ಗುರುಮಲ್ಲೇಶ್ವರ ದಾಸೋಹ ಮಠದವರು ಬಸವ ತತ್ವಕ್ಕೆ ಕೈಜೋಡಿಸುವ ಮೂಲಕ ನಿರಂತರ ದಾಸೋಹಕ್ಕೆ ಒತ್ತು ನೀಡಿದ್ದರು. ಕಾಯಕದಿಂದ ಗಳಿಸೋದು ಹಾಗೂ ಕಾಯಕದಿಂದ ವಿನಿಯೋಗಿಸೋದು ಬಸವಣ್ಣನವರ ಸಿದ್ಧಾಂತವಾಗಿತ್ತು ಹಾಗಾಗಿ ಕಾಯಕದಿಂದ ಬರುವುದನ್ನು ದಾಸೋಹದ ಮೂಲಕ ಹಂಚಬೇಕೆಂಬ ತತ್ವವನ್ನು ಎಲ್ಲರೂ ಅಳವಡಿಸಿಕೊಳ್ಳುವುದು ಪ್ರಸ್ತುತ ಅನಿವಾರ್ಯ ಎಂದರು.

ಲಿಂಗಾಯತ ಧರ್ಮ ಸ್ವತಂತ್ರ ಧರ್ಮವಾಗಿದ್ದು, ಆಧ್ಯಾತ್ಮಿಕ ಜೀವನ ಸಿದ್ಧಾಂತ ಹೊಂದಿದೆ. ನಮ್ಮ ಧರ್ಮದ ಸಿದ್ಧಾಂತ ಪ್ರಪಂಚದ ಬೇರೆಲ್ಲೂ ಸಿಗಲಾರದು. ಬೇರೆ ಧರ್ಮದಲ್ಲಿ ದಯೆ, ದಾನದ ಬಗ್ಗೆ ಹೇಳಲಾಗಿದೆಯೇ ಹೊರತು ಕಾಯಕ, ದಾಸೋಹದ ಬಗ್ಗೆ ಉಲ್ಲೇಖವಿಲ್ಲ. ದಾಸೋಹದಲ್ಲಿರುವ ತೃಪ್ತಿ ಬೇರೆಲ್ಲೂ ಸಿಗದು. ಈ ಸಿದ್ಧಾಂತವನ್ನು ಅಳವಡಿಸಿಕೊಂಡು ವಿಜೃಂಭಣೆಯಿಂದ ಅನುಭವಿಸುವಂತಾಗಬೇಕು ಎಂದು ಸಲಹೆ ನೀಡಿದರು.

ಕಣ್ಣು ತೆರೆದು ಧ್ಯಾನ ಮಾಡಿ: ಇಷ್ಟಲಿಂಗ ಧ್ಯಾನಕ್ಕೆ ಕೆಲವರು ಧ್ಯಾನ ಕೇಂದ್ರ ಸೇರಿದಂತೆ ಕೆಲವೊಂದು ಸ್ಥಳಗಳಿಗೆ ಹೋಗುತ್ತಾರೆ. ಅಲ್ಲಿ ಕಣ್ಣು ಮುಚ್ಚಿ ಧ್ಯಾನ ಮಾಡಲು ತಿಳಿಸಲಾಗುತ್ತೆ. ಕಣ್ಮುಚ್ಚಿ ಧ್ಯಾನ ಮಾಡಿದರೆ ಪಾರಮಾರ್ಥಿಕ ಜ್ಞಾನ ಬರಲು ಸಾಧ್ಯವಿಲ್ಲ. ಅಲ್ಲಿ ಲೌಖಿಕ ಜ್ಞಾನ ಬರುತ್ತೆ. ಆದರೆ, ಬಸವಣ್ಣನವರು ಕಣ್ಣು ತೆರೆದು ಲಿಂಗ ಇಟ್ಟು ಧ್ಯಾನ ಮಾಡುವಂತೆ ಹೇಳಿದ್ದಾರೆ. ಇದರಿಂದ ಏಕಾಗ್ರತೆ ಬರುತ್ತದೆ ಎಂದರು.

ಬಸವಯೋಗಿ ಪ್ರಭುಸ್ವಾಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸೇತುವೆ ಮಠದ ಸಹಜಾನಂದ ಸ್ವಾಮೀಜಿ, ಬಿಳಿಗೆರೆಹುಂಡಿ ದಾಸೋಹ ಮಠದ ಮಹದೇವಸ್ವಾಮೀಜಿ, ಮಹಾಸಭಾ ಪ್ರಧಾನ ಕಾರ್ಯದರ್ಶಿ ಬಸವಣ್ಣ, ಜಿಲ್ಲಾಧ್ಯಕ್ಷ ಮಹದೇವಪ್ಪ, ಬಸವ ಕೇಂದ್ರದ ಅಧ್ಯಕ್ಷ ಪರಮೇಶ್ ಪಟೇಲ್, ಕಾರ್ಯದರ್ಶಿ ಮರಿಯಪ್ಪ, ಕಟ್ಟೇಪುರ ಗುರುಸ್ವಾಮಿ, ಮಾಜಿ ಅಧ್ಯಕ್ಷ ಶಿವಮಲ್ಲಪ್ಪ, ಸೋಮಶೇಖರ್, ರವಿಶಂಕರ್, ದೊಡ್ಡನಹುಂಡಿ ಸೋಮಶೇಖರ್, ಜಾಲಹಳ್ಳಿ ಚಿಕ್ಕಣ್ಣ, ತಲಕಾಡು ಸಂತೋಷ್, ತೊಟ್ಟವಾಡಿ ಚಂದ್ರಾಧರ, ಎಸ್.ಶಿವಣ್ಣ, ಮಾಡ್ರಹಳ್ಳಿ ಶಿವಮೂರ್ತಿ, ಧರ್ಮಯ್ಯನಹುಂಡಿ ಕುಮಾರ್, ಕೆ.ಜೆ.ಶಿವಪ್ರಸಾದ್, ಕುರುಬೂರು ಬೃಂಗೀಶ್, ಕೊತ್ತೇಗಾಲ ಮಹೇಶ್, ಗುರುಸ್ವಾಮಿ, ಲತಾ ಸೋಮಶೇಖರ್, ತುಂಬಲ ಬಸವಣ್ಣ, ಮಹಾಸಭಾ ಪದಾಧಿಕಾರಿಗಳು ಹಾಜರಿದ್ದರು.

> ಬಸವಣ್ಣನವರು ಶೈವ ಧರ್ಮದ ಭಕ್ತಿ ಚಳವಳಿಯಲ್ಲಿ ಪ್ರಸಿದ್ಧ ಸಂತರಾಗಿ ಗುರುತಿಸಿಕೊಂಡಿದ್ದವರು. 12ನೇ ಶತಮಾನದಲ್ಲಿ ಬಸವಣ್ಣನವರು ಮೇಲು ಕೀಳು, ಜಾತಿ ಧರ್ಮ ಹೀಗೆ ನೊಂದವರ ಪರವಾಗಿ ನಿಂತ ಮಹಾನುಭಾವ. ಜಾತಿ ವ್ಯವಸ್ಥೆ ವಿರುದ್ಧ ಧ್ವನಿ ಎತ್ತಿದ ಬಸವಣ್ಣನವರು ಕ್ರಾಂತಿಯ ಬೀಜವನ್ನು ಬಿತ್ತಿದ ಹರಿಕಾರ. 'ಕಾಯಕವೇ ಕೈಲಾಸ', 'ವಸುದೈವ ಕುಟುಂಬಕಂ' ಹೀಗೆ ಹಲವಾರು ತತ್ವಗಳನ್ನು ಸಾರಿದ ಮಹಾನುಭವನನ್ನು ನೆನಪಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ
> – ಟಿ.ಎಂ.ರವಿ, ಜಾಗತಿಕ ಲಿಂಗಾಯತ ಮಹಾಸಭಾ ಅಧ್ಯಕ್ಷ

ಆಕಸ್ಮಿಕ ಬೆಂಕಿ: ಗಂದಧಕಡ್ಡಿ ತಯಾರಿಕಾ ಘಟಕ ಭಸ್ಮ



ನಂಜನಗೂಡಿನಲ್ಲಿ ಸಂಭವಿಸಿದ ಆಕಸ್ಮಿಕ ಅಗ್ನಿ ಅವಘಡದಲ್ಲಿ ಗಂದಧಕಡ್ಡಿ ತಯಾರಿಕಾ ಘಟಕ ಬೆಂಕಿಗಾಹುತಿಯಾಗಿ ಅಪಾರ ಪ್ರಮಾಣದ ನಷ್ಟವುಂಟಾಗಿದ್ದು, ಸ್ಥಳಕ್ಕೆ ತಹಶೀಲ್ದಾರ್ ಶಿವಕುಮಾರ್ ಭೇಟಿ ನೀಡಿ ಪರಿಶೀಲಿಸಿದರು.

ನಂಜನಗೂಡು, ಮೇ 14– ಆಕಸ್ಮಿಕ ಬೆಂಕಿ ಅವಘಡ ಸಂಭವಿಸಿ ಗಂದಧಕಡ್ಡಿ ತಯಾರಿಕಾ ಘಟಕ ಸಂಪೂರ್ಣ ಭಸ್ಮವಾಗಿರುವ ಘಟನೆ ನಗರದ ಬಜಾರ್ ರಸ್ತೆಯಲ್ಲಿರುವ ಉರ್ದು ಶಾಲೆ ಹಿಂಭಾಗದಲ್ಲಿ ನಡೆದಿದೆ.

ನಗರದ ನಿವಾಸಿ ರಫೀಕ್ ಎಂಬುವರಿಗೆ ಸೇರಿದ ಗಂದಧ ಕಡ್ಡಿ ತಯಾರಿಕಾ ಕಾರ್ಖಾನೆಯಲ್ಲಿ ಮಂಗಳವಾರ ಬೆಳಗ್ಗೆ ಆಕಸ್ಮಿಕ ಬೆಂಕಿ ಕಾಣಿಸಿಕೊಂಡು ಗಂಧದ ಕಡ್ಡಿ ತಯಾರಿಸುವ ಯಂತ್ರಗಳು, ಗಂಧದ ಕಡ್ಡಿ ಹಾಗೂ ತಯಾರಿಕಾ ಕಚ್ಚಾ ಸಾಮಗ್ರಿಗಳು, ಮರದ ಉತ್ಪನ್ನಗಳು ಸೇರಿದಂತೆ ಕಾರ್ಖಾನೆಯೊಳಗಿದ್ದ ವಸ್ತುಗಳು ಭಸ್ಮವಾಗಿವೆ. ಇನ್ನು ಬೆಂಕಿ ಜ್ವಾಲೆ ವ್ಯಾಪಿಸಿ ಸಮೀಪದಲ್ಲಿದ್ದ ಗೋದಾಮಿಗೂ ಬೆಂಕಿ ಬಿದ್ದು ಅಪಾರ ಪ್ರಮಾಣದ ಉತ್ಪನ್ನಗಳು ನಾಶಗೊಂಡಿವೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ. ಈ ಘಟನೆಯಿಂದ 20 ಲಕ್ಷಕ್ಕೂ ಹೆಚ್ಚು ನಷ್ಟ ಸಂಭವಿಸಿದೆ ಎನ್ನಲಾಗಿದೆ.

ಸ್ಥಳಕ್ಕೆ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಡಿವೈಎಸ್‌ಪಿ ರಘು, ಪೌರಾಯುಕ್ತ ನಂಜುಂಡಸ್ವಾಮಿ, ಸದಸ್ಯರಾದ ಗಾಯತ್ರಿ ಖಾಲಿದ್ ಹಲವರು ಭೇಟಿ ನೀಡಿ ಪರಿಶೀಲಿಸಿ ಮಾಹಿತಿ ಪಡೆದರು. ಈ ಸಂಬಂಧ ನಂಜನಗೂಡು ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಸರಗೂರಲ್ಲಿ ಶ್ರೀಶಾಂತಿನಾಥ ತೀರ್ಥಂಕರರಿಗೆ ಮಹಾಭಿಷೇಕ

ಸರಗೂರು, ಮೇ 14– ಜೈನ ಧರ್ಮ ಸರ್ವ ಜೀವಿಗಳು ಬದುಕುವ ಕಲೆಯನ್ನು ಹೇಳುತ್ತಾ ಬಂದಿದೆ ಎಂದು ಬಿಡಗಲು ಭರತೇಶ್ ಗುರೂಜಿ ತಿಳಿಸಿದರು.

ಪಟ್ಟಣದ 11ನೇ ವಾರ್ಡ್ ಬಿಡಗಲುವಿನಲ್ಲಿ ಶ್ರೀಶಾಂತಿನಾಥ ಟ್ರಸ್ಟ್ ವತಿಯಿಂದ ನಡೆದ 1008 ಶ್ರೀಶಾಂತಿನಾಥ ಜಿನ ಜೈತ್ಯಾಲಯದ 47ನೇ ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, ಪ್ರತಿಯೊಂದು ಪ್ರಾಣಿ ಸುಖವನ್ನು ಬಯಸುತ್ತದೆ. ನೆಮ್ಮದಿ ಹೊಂದಲು ಪ್ರಯತ್ನಿಸುತ್ತವೆ. ಸಂಸಾರ ಚಕ್ರದಲ್ಲಿ ಒಮ್ಮೆ ಸಿಲುಕಿದ ಮನುಷ್ಯ ಸಂಕಟಗಳಿಂದ ನರಳುತ್ತಿರುತ್ತಾನೆ. ದುಃಖ ಚಕ್ರದಿಂದ ಹೊರ ಬರಲು ಉಪಾಯ ಹುಡುಕುತ್ತಿರುತ್ತಾನೆ. ದಾರಿ ಕಾಣದೇ ಪರಿತಪಿಸುತ್ತಾನೆ. ದುಃಖದ ಕಾರಣ ಹುಡುಕದೇ ಸಂತೋಷ ಹೊಂದಲು ಸಾಧ್ಯವಾಗದು. ವಿವೇಕವುಳ್ಳ ಮನುಷ್ಯ ಮಾತ್ರ ಉಪಾಯಗಳನ್ನು ಹುಡುಕಿ ಸಂಸಾರ ನಿವೃತ್ತಿಯನ್ನು ಹೊಂದುತ್ತಾನೆ. ಸಂಸಾರ ದುಃಖಗಳಿಂದ ಪಾರಾಗಲು ಕಾಲಕಾಲಕ್ಕೆ ಮಹಾಪುರುಷರು ಸಾಧನೆ ಮಾಡುವ ಮೂಲಕ ಬೋಧಿಸಿ ಹೋಗಿದ್ದಾರೆ. ಪ್ರತಿಯೊಬ್ಬರಿಗೂ ಬೇಕಾಗಿರುವ ಮೌಲ್ಯ ಸಾರಿದ್ದಾರೆ. ಅದರಂತೆ ಜೈನ ಧರ್ಮದ 24 ತೀರ್ಥಂಕರರು ಹಿತೋಪದೇಶ ನೀಡಿದ್ದಾರೆ ಎಂದರು.

ಇದಕ್ಕೂ ಮುನ್ನ ಶ್ರೀಶಾಂತಿನಾಥ ಜಿನ ಚೈತ್ಯಾಲಯದಲ್ಲಿ ಪ್ರಾತಃ ಕಾಲದಲ್ಲಿ ಶ್ರೀಮಹಾವೀರ ಶಕೆ 2550ನೇ ವೈಶಾಖ ಶುದ್ಧ ಸಪ್ತಮಿ, ಪೂಜಾ ಕಾರ್ಯಗಳು ಜರುಗಿದವು. 1008 ಶ್ರೀಶಾಂತಿನಾಥ ತೀರ್ಥಂಕರರಿಗೆ 108 ಮಂಗಳ ಕಳಸಗಳಿಂದ ಮಹಾಭಿಷೇಕ ನಡೆಸಲಾಯಿತು. ವಿಶೇಷ ಪೂಜೆ ನಡೆಸಿ ತೀರ್ಥಪ್ರಸಾದ ವಿತರಿಸಲಾಯಿತು.



ಈ ವೇಳೆ ಶ್ರೀ ಶಾಂತಿನಾಥ ಟ್ರಸ್ಟ್ ಕಾರ್ಯದರ್ಶಿ ವಸುಂಧರ, ಪುರೋಹಿತರಾದ ಮನ್ಮಥ ಕುಮಾರ್, ಸೀತಳ ಕುಮಾರ್, ಪದ್ಮಾನಂದ ಶರ್ಮಾ ಹಾಗೂ ಸಮಿತಿ ಸರ್ವ ಸದಸ್ಯರು, ಸರಗೂರು ಜೈನ ಸಮಾಜದ ಬಂಧುಗಳು ಹಾಜರಿದ್ದರು.

ಗಾವಡಗೆರೆ ಹೋಬಳಿಯಲ್ಲಿ ಮತ್ತೆ ಮಳೆ: ಬೆಳೆಗಳು ನೀರು ಪಾಲು

ಹಿರೀಕ್ಯಾತನಹಳ್ಳಿ, ಮೇ 14– ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯಲ್ಲಿ ಮಂಗಳವಾರ ಮತ್ತೆ ಮಳೆಯಾದ ಪರಿಣಾಮ ಬೆಳೆಗಳು ನೀರು ಪಾಲಾಗಿದ್ದು ರೈತ ಕಂಗಾಲಾಗಿದ್ದಾನೆ.

ಸೋಮವಾರ ರಾತ್ರಿ ಇಡೀ ತುಂತುರು ಮಳೆ ಸುರಿದರೆ ಮುಂಜಾನೆ 4 ರಿಂದ 7 ಗಂಟೆವರೆಗೆ ಸುರಿದ ಭಾರಿ ಮಳೆಯಿಂದ ಜಮೀನಿನ ಮಳೆ ನೀರಿನ ಬಸ್ತಿ ಕಾಲುವೆಗಳು ತುಂಬಿ ಹರಿದು ಜಮೀನುಗಳಿಗೆ ನೀರು ನುಗ್ಗಿ ಬೆಳೆ ನಾಶವಾಗಿದೆ.

ಜಮೀನಿನ ಪಕ್ಕದ ರಾಜ ಕಾಲುವೆಗಳು ಉಕ್ಕಿ ಹರಿದ ಪರಿಣಾಮ ಜಮೀನುಗಳಿಗೆ ನೀರು ನುಗ್ಗಿ ಫಲವತ್ತಾದ ಮಣ್ಣು, ಶುಂಠಿ, ತಂಬಾಕು, ಹೂ ಕೋಸು ಕೊಚ್ಚಿ ಹೋದರೆ, ಟಮೊಟೋ ಬೆಳೆಗೆ ಕಟ್ಟಿದ ದಾರಗಳು ಕಿತ್ತು ಹೋಗಿ ಬೆಳೆ ನಾಶವಾಗಿದೆ. ಹಿರೀಕ್ಯಾತನಹಳ್ಳಿ ಗ್ರಾಮದ ಯೋಗೇಗೌಡ, ಪ್ರಕಾಶ್ ಎಂಬುವರ ಶುಂಠಿ ಹಾಗೂ ತಂಬಾಕು ಬೆಳೆ ಸಂಪೂರ್ಣ ನಾಶವಾಗಿದೆ. ಜಮೀನಿಗೆ ಹೋಗುವ ರಸ್ತೆಗಳ ಮೇಲೆ ನೀರು ಹರಿದು ಕೊಚ್ಚಿ ಹೋಗಿವೆ.



ಭೇಟಿ ನೀಡದ ಅಧಿಕಾರಿಗಳು: ಪ್ರಕೃತಿ ವಿಕೋಪಕ್ಕೆ ರೈತರು ಸಾಲ ಮಾಡಿ ಕಷ್ಟಪಟ್ಟು ಬೆಳೆದ ಬೆಳೆಗಳು ನಾಶವಾದರೂ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ರೈತರ ಅಸಮಾಧಾನ: ರೈತರು ತಂಬಾಕು ಬೆಳೆಯಲು ಪ್ರೋತ್ಸಾಹಿಸುವ ತಂಬಾಕು ಮಂಡಳಿ ಮತ್ತು ತಂಬಾಕು ಖರೀದಿ ಕಂಪನಿಗಳು ಹಾನಿಯಾದಾಗ ಸೌಜನ್ಯಕಾದರೂ ಭೇಟಿ ನೀಡಿ ರೈತರಿಗೆ ಸಮಾಧಾನ ಹೇಳುವ ಸೌಜನ್ಯ ಇಲ್ಲದಂತಾಗಿದೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಶ್ರೀಕಂಠೇಶ್ವರನ ಹುಂಡಿಯಲ್ಲಿ 1.72 ಕೋಟಿ ಸಂಗ್ರಹ



ನಂಜನಗೂಡು, ಮೇ 14– ನಗರದ ಶ್ರೀಕಂಠೇಶ್ವರ ದೇವಾಲಯದ ದಾಸೋಹ ಭವನದಲ್ಲಿ ಮಂಗಳವಾರ ನಡೆದ 35 ಹುಂಡಿಗಳ ಎಣಿಕೆ ವೇಳೆ 1.72 ಕೋಟಿ ಹಣ ಸಂಗ್ರಹವಾಗಿದೆ. ಈ ವೇಳೆ ಹುಂಡಿಯಲ್ಲಿ 1,72,85,296 ರೂ. 92 ಗ್ರಾಂ ಚಿನ್ನ, 3.5 ಕೆಜಿ ಬೆಳ್ಳಿ ಹಾಗೂ 33 ವಿದೇಶಿ ಕರೆನ್ಸಿ ದೊರೆತಿದೆ. ಹುಂಡಿ ಎಣಿಕೆ ಕಾರ್ಯದಲ್ಲಿ ಬ್ಯಾಂಕ್ ಆಫ್ ಬರೋಡಾ ಸಿಬ್ಬಂದಿ, ಮಹಿಳಾ ಸ್ವಸಹಾಯ ಸಂಘದ 100ಕ್ಕೂ ಹೆಚ್ಚು ಸದಸ್ಯರು ಹಾಗೂ ದೇವಾಲಯದ ಸಿಬ್ಬಂದಿ ಭಾಗವಹಿಸಿದ್ದರು. ದೇವಾಲಯದ ಇಓ ಜಗದೀಶ್ ಕುಮಾರ್, ಎಇಓ ಸತೀಶ್, ಲೆಕ್ಕಾಧಿಕಾರಿ ಗುರುಮಲ್ಲಯ್ಯ, ಧಾರ್ಮಿಕ ದತ್ತಿ ತಹಸೀಲ್ದಾರ್ ವಿದ್ಯುಲತಾ, ಬ್ಯಾಂಕ್ ಆಫ್ ಬರೋಡಾ ವ್ಯವಸ್ಥಾಪಕ ಕಾರ್ತಿಕ್ ಉಪಸ್ಥಿತರಿದ್ದರು.

ಕಳ್ಳ ಬೇಟೆ ನಿಗ್ರಹ ಪಡೆ ಶಿಬಿರಕ್ಕೆ ಅರಣ್ಯ ಸಚಿವರ ಭೇಟಿ

ಹೆಚ್.ಡಿ.ಕೋಟೆ, ಮೇ 14– ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಅಂತರಸಂತೆ ವನ್ಯಜೀವಿ ವಲಯ, ಮೇಟಿಕುಪ್ಪೆ ಉಪವಿಭಾಗ ಕಳ್ಳ ಬೇಟೆ ನಿಗ್ರಹ ಪಡೆ ಶಿಬಿರಕ್ಕೆ ಅರಣ್ಯ ಸಚಿವ ಈಶ್ವರ ಖಂಡ್ರೆ ಭೇಟಿ ನೀಡಿ ಪರಿಶೀಲಿಸಿದರು.

ತಾಲೂಕಿನ ಜಂಗಲ್ ಲಾಡ್ಜ್ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿದ್ದ ಸಚಿವರು ಮಂಗಳವಾರ ಬೆಳಗ್ಗೆ ಕಳ್ಳಬೇಟೆ ನಿಗ್ರಹ ಪಡೆ ಶಿಬಿರಕ್ಕೆ ಭೇಟಿ ನೀಡಿ ಆಹಾರ ಧಾನ್ಯ, ಮತ್ತಿತರ ಮೂಲ ಸೌಕರ್ಯಗಳ ಬಗ್ಗೆ ಪರಿಶೀಲನೆ ನಡೆಸಿದರು. ಶಿಬಿರಕ್ಕೆ ಸಫಾರಿ ಜೀಪ್‌ನಲ್ಲಿ ತೆರಳುತ್ತಿದ್ದ ಸಚಿವರಿಗೆ ಹುಲಿ ಕಾಣಿಸಿಕೊಂಡಿತು.

ನಂತರ ಅರಣ್ಯದಲ್ಲಿ ವನ್ಯಜೀವಿಗಳಿಗೆ ನೀರು, ಮೇವು ಲಭ್ಯತೆ ಕುರಿತಂತೆ ಪರಿಶೀಲನೆ ನಡೆಸಿ, ಅರಣ್ಯದ ಸಂಪೂರ್ಣ ಚಿತ್ರಣ (ಮ್ಯಾಪ್) ನೋಡಿ ಅಧಿಕಾರಿಗಳೊಡನೆ ಚರ್ಚಿಸಿ ಪ್ರಾಣಿ ಪಕ್ಷಿಗಳಿಗೆ, ಯಾವುದೇ ತೊಂದರೆ ಆಗದಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಇದೇ ವೇಳೆ ಡಿಎಫ್‌ಓ ಹರ್ಷ ಕುಮಾರ್ ಚಿಕ್ಕನರಗುಂದ, ಅಂತರಸಂತೆ ಆರ್‌ಎಫ್‌ಓ ಭರತ್ ತಳವಾರ್, ಬೀಟ್ ಫಾರೆಸ್ಟರ್‌ಗಳು ಅರಣ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಇತರರಿದ್ದರು.



ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವಾಲ್ಟರ್ ವೀರಯ್ಯ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಸ್ಟಾರ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಅಂಜನೀಪುತ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಅರಮನೆ 4 (ಕ)	4 ಪ್ರದರ್ಶನಗಳು
ಸಂಗಂ	
ಗ್ರೇ ಗೇಮ್ಸ್ (ಕ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಅರಮನೈ 4 (ತ)	4 ಪ್ರದರ್ಶನಗಳು
ಪ್ರಭಾ	
ನೈಟ್‌ಕರ್ಫ್ಯೂ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿ ಬಾಯ್ ಅಂಡ್ ದಿ ಹೆರಾನ್ (ಜ): ಬೆ.11.20ಕ್ಕೆ, ಸಂ.4.20ಕ್ಕೆ, ಗ್ರೇ ಗೇಮ್ಸ್ (ಕ): ಮ.1.50ಕ್ಕೆ, ಆವೇಶಂ (ಮ): ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.40ಕ್ಕೆ, ಸ್ಟಾರ್ (ತ): ಮ.1ಕ್ಕೆ, ಸಂ.4.05ಕ್ಕೆ, ರಾಮನ ಅವತಾರ (ಕ): ರಾ.7.05ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10.05ಕ್ಕೆ.
ಸ್ಕ್ರೀನ್ 3	ಅಲೈಕ್ಯಾ (ಕ): ಬೆ.10.55ಕ್ಕೆ, ಪವರ್ (ಕ): ಮ.1.15ಕ್ಕೆ, ಶ್ರೀಕಾಂತ್ (ಹಿಂ): ಸಂ.4.30ಕ್ಕೆ, ರಾ.7.10ಕ್ಕೆ, ಕೃಷ್ಣಮ್ಮ (ತೆ): ರಾ.9.55ಕ್ಕೆ.
ಸ್ಕ್ರೀನ್ 4	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.35ಕ್ಕೆ, ಮ.1.25ಕ್ಕೆ, ಸಂ.4.15ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.25ಕ್ಕೆ, ರಾ.10ಕ್ಕೆ, ಯುವ (ಕ): ಮ.1ಕ್ಕೆ, ಸಂ.4.15ಕ್ಕೆ, O2 (ಕ): ರಾ.7.30ಕ್ಕೆ.
ಸ್ಕ್ರೀನ್ 2	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.45ಕ್ಕೆ, ಸಂ.5.55ಕ್ಕೆ, ಮೈದಾನ್ (ಹಿಂ): ಮ.2.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.9.20ಕ್ಕೆ.
ಸ್ಕ್ರೀನ್ 3	ಯುವ (ಕ): ಬೆ.10.10ಕ್ಕೆ, O2 (ಕ): ಮ.1.25ಕ್ಕೆ, ಪಾರಿಜಾತ ಪರ್ವಂ (ತೆ): ಮ.3.55ಕ್ಕೆ, ಆವೇಶಂ (ಮ): ಸಂ.6.50ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮೈದಾನ್ (ಹಿಂ): ಬೆ.11.25ಕ್ಕೆ, ರಾ.9.50ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ಮ.3.10ಕ್ಕೆ, ಯುವ (ಕ): ಸಂ.6.35ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.


ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಭಗೀರಥ ಮಹರ್ಷಿಗಳ ತತ್ವಾದರ್ಶಗಳನ್ನು ಅಳವಡಿಸಿಕೊಳ್ಳಿ

ಉಪ್ಪಾರ ಸಂಘದ ತಾಲೂಕು ಅಧ್ಯಕ್ಷ ಹೆಚ್.ಎಸ್.ಮೂಗಶೆಟ್ಟಿ

ನಂಜನಗೂಡು, ಮೇ 14– ಮನುಕುಲದ ಒಳಿತಿಗಾಗಿ ತನ್ನ ತಪೋಶಕ್ತಿಯಿಂದ ಶಿವನ ಜಟೆಯಲ್ಲಿದ್ದ ಗಂಗೆಯನ್ನೇ ಭೂಮಿಗೆ ಕರೆತಂದ ಕೀರ್ತಿ ಭಗೀರಥ ಮಹರ್ಷಿಗಳಿಗೆ ಸಲ್ಲುತ್ತದೆ ಎಂದು ಉಪ್ಪಾರ ಸಂಘದ ತಾಲೂಕು ಅಧ್ಯಕ್ಷ ಹೆಚ್.ಎಸ್.ಮೂಗಶೆಟ್ಟಿ ತಿಳಿಸಿದರು.

ನಗರದ ಉಪ್ಪಾರ ಸಮುದಾಯ ಭವನದಲ್ಲಿ ನಡೆದ ಭಗೀರಥ ಮಹರ್ಷಿ ಜಯಂತಿಯಲ್ಲಿ ಭಗೀರಥ ಮಹರ್ಷಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಭಗೀರಥ ಮಹರ್ಷಿಗಳು ಏಕಾಗ್ರತೆ, ಸಾಹಸ, ಗುರುಭಕ್ತಿ, ಸತತ ಪ್ರಯತ್ನದ ಫಲನಿಷ್ಠೆಗೆ ಹೆಸರುವಾಸಿಯಾಗಿದ್ದಾರೆ. ಆದ್ದರಿಂದಲೇ ಭಗೀರಥ ಪ್ರಯತ್ನ ಎಂಬ ನಾಣ್ನುಡಿ ಎಲ್ಲೆಡೆ ಜನಜನಿತವಾಗಿದೆ. ಸಮಸ್ತ ಮನುಕುಲದ ಉದ್ಧಾರಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟು ಘೋರ ತಪಸ್ಸಿನ ಮೂಲಕ ಗಂಗೆಯನ್ನು ಭೂಮಿಗೆ ತಂದ ಭಗೀರಥ ಮಹರ್ಷಿಯವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದರು.



ನಂಜನಗೂಡಿನಲ್ಲಿ ಭಗೀರಥ ಮಹರ್ಷಿ ಜಯಂತಿ ನಡೆಯಿತು

ಬಿಜೆಪಿ ಓಬಿಸಿ ಮೋರ್ಚಾ ತಾಲೂಕು ಅಧ್ಯಕ್ಷ ಬಾಲಚಂದ್ರು ಮಾತನಾಡಿ, ಸಮಾಜ ಸುಧಾರಕರು ಹಾಗೂ ದಾರ್ಶನಿಕರು ಯಾವುದೇ ಸಮುದಾಯಕ್ಕೆ ಸೀಮಿತವಾಗಿಲ್ಲ. ಮನುಕುಲದ ಉದ್ಧಾರಕ್ಕೆ ಶ್ರಮಿಸಿರುವ ಅವರೆಲ್ಲರೂ ಸಮಾಜದ ಎಲ್ಲಾ ಜನರಿಗೆ ಪ್ರಾತಸ್ಮರಣೀಯರಾಗಿದ್ದಾರೆ. ಈ ನಿಟ್ಟಿನಲ್ಲಿ ದೃಢ ಸಂಕಲ್ಪ ಹಾಗೂ ಅಚಲ ವಿಶ್ವಾಸದ ಮೂಲಕ ದೇವನದಿ ಎಂಬ ಹಿರಿಮೆಯನ್ನು ಹೊಂದಿರುವ ಗಂಗೆಯನ್ನು ಭೂಮಿಗೆ ತರುವ ಮೂಲಕ ಭಗೀರಥ ಮಹರ್ಷಿಗಳು ಸದಾಕಾಲಕ್ಕೂ ಚಿರಸ್ಥಾಯಿಯಾಗಿದ್ದಾರೆ ಎಂದರು.

ಈ ವೇಳೆ ನಗರಸಭಾ ಮಾಜಿ ಉಪಾಧ್ಯಕ್ಷೆ ನಾಗಮಣಿ, ನಗರಸಭಾ ಸದಸ್ಯೆ ಮಹದೇವಮ್ಮ, ತಾಪಂ ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷ ಶಿವಣ್ಣ, ಬಿಜೆಪಿ ತಾಲೂಕು ಅಧ್ಯಕ್ಷ ಸಿದ್ದರಾಜು, ಉಪ್ಪಾರ ಜನಾಂಗದ ಗೌರವಾಧ್ಯಕ್ಷ ಬಾಲಚಂದ್ರು, ಕಾರ್ಯದರ್ಶಿ ನಾಗರಾಜು, ಮುಖಂಡರಾದ ಸೋಮಣ್ಣ, ಅಣ್ಣಯ್ಯಶೆಟ್ಟಿ, ಶ್ರೀನಿವಾಸ್, ಮುರುಗೇಶ್, ಶಿವಮೂರ್ತಿ, ಕಾಳಪ್ಪ, ರಂಗಸ್ವಾಮಿ, ಅಂಕಶೆಟ್ಟಿ ಸೇರಿದಂತೆ ಹಲವರಿದ್ದರು.

ಭೂಲೋಕಕ್ಕೆ ಗಂಗೆ ಕರೆತಂದ ಮಹಾಪುರುಷ ಭಗೀರಥ

ಉಪ್ಪಾರ ಮಹಾಸಭಾ ಅಧ್ಯಕ್ಷ ಮಹದೇವಶೆಟ್ಟಿ

ತಿ.ನರಸೀಪುರ, ಮೇ 14– ತನ್ನ ತಪಶಕ್ತಿಯಿಂದ ಗಂಗೆಯನ್ನು ಭೂ ಲೋಕಕ್ಕೆ ಕರೆತಂದ ಮಹಾಪುರುಷ ಭಗೀರಥ ಮಹರ್ಷಿ ಎಂದು ಉಪ್ಪಾರ ಮಹಾಸಭಾ ಅಧ್ಯಕ್ಷ ಮಹದೇವಶೆಟ್ಟಿ ತಿಳಿಸಿದರು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಪಟ್ಟಣದ ತಾಲೂಕು ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಭಗೀರಥ ಜಯಂತಿಯಲ್ಲಿ ಭಗೀರಥ ಮಹರ್ಷಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಸಮಾಜಕ್ಕೆ ಸಾಕಷ್ಟು ಕೊಡುಗೆ ನೀಡಿರುವ ಭಗೀರಥರ ನಿಷ್ಠೆ, ದೃಢ ಸಂಕಲ್ಪ ಛಲ ಹಾಗೂ ಸತತ ಪ್ರಯತ್ನದ ಗುಣವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಜೀವನದಲ್ಲಿ ಪ್ರಯತ್ನ ನಿರಂತರವಾಗಿರಬೇಕು ಎಂದರು.

ತಹಸೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ಮಾತನಾಡಿ, ಜೀವನದಲ್ಲಿ ಬದ್ಧತೆ ಇದ್ದಲ್ಲಿ ಯಾವುದೇ ಕಾರ್ಯ ಸಾಧನೆ ಸಾಧ್ಯ ಎಂಬುದಕ್ಕೆ ಶ್ರೀಭಗೀರಥ ಮಹರ್ಷಿಯೇ ಸೂಕ್ತ ನಿದರ್ಶನ ಎಂದರು.



ರಾಮಾಯಣದ ಬಾಲಕಾಂಡದಲ್ಲಿ ಭಗೀರಥ ಮಹರ್ಷಿ ಕತೆ ಬರಲಿದೆ. ಗುರುಭಕ್ತಿಗೆ ಏಕಾಗ್ರತೆ, ತಪೋನಿಷ್ಠೆಯಿಂದಾಗಿ ಭಗೀರಥ ಕಂಗೊಳಿಸುತ್ತಾರೆ. ಶಿವನ ಜಟೆಯಲ್ಲಿದ್ದ ಗಂಗೆಯನ್ನು ಧರೆಗೆ ತಂದ ಕೀರ್ತಿಗೆ ಪಾತ್ರರಾಗಿರುವ ಭಗೀರಥ ಅವರ ಪ್ರಯತ್ನಶೀಲತೆಯು ಭಗೀರಥ ಪ್ರಯತ್ನವೆಂಬ ನುಡಿಗಟ್ಟಾಗಿ ಕನ್ನಡಿಗರಿಗೆಲ್ಲ ಸ್ಫೂರ್ತಿಯ ನೆಲೆಯಾಗಿದೆ. ಉಪ್ಪಾರ ಜನಾಂಗದವರು ಭಗೀರಥರನ್ನು ತಮ್ಮ ಕುಲದ ಮೂಲ ಪುರುಷನೆಂದು ಭಾವಿಸಿ, ಭಕ್ತಿ ಶ್ರದ್ಧೆಯಿಂದ ಆರಾಧಿಸುತ್ತಿದ್ದಾರೆ ಎಂದರು.

ಘೋರ ತಪಸ್ಸು ಮಾಡಿ, ಶಿವನ ಜಟೆಯಲ್ಲಿದ್ದ ಗಂಗೆಯನ್ನು ಧರೆಗೆ ತರಿಸಿ, ಬೂದಿ ಯಾಗಿದ್ದ 60 ಸಾವಿರ ಮಂದಿ ಸಗರ ಪುತ್ರರ ಮೇಲೆ ಹರಿಸಿ, ಭಗೀರಥರು ಪುನರ್ಜನ್ಮ ಪ್ರಾಪ್ತಿ ಮಾಡಿ, ಪುರಾಣ ಪುರುಷರಾಗಿದ್ದಾರೆ. ಮಾನವನು ಧೃತಿಗೆಡದೆ ಕಾರ್ಯಸಾಧನೆ ಮಾಡಬೇಕೆಂಬುದು ಈ ಕಥೆಯ ಸಾರಾಂಶವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಭಗೀರಥ ಉಪ್ಪಾರ ಜನಕಲ್ಯಾಣ ಟ್ರಸ್ಟ್ ಅಧ್ಯಕ್ಷ ಸಿದ್ದಪ್ಪಸ್ವಾಮಿ, ಕೇತಹಳ್ಳಿ ಸಿದ್ದಶೆಟ್ಟಿ, ಕಾರ್ಯಾಧ್ಯಕ್ಷ ರಾಮಶೆಟ್ಟಿ, ಪ್ರಧಾನ ಕಾರ್ಯದರ್ಶಿ ಶಾಂತರಾಜು, ಕೆಮಹದೇವಶೆಟ್ಟಿ ಚಿನ್ನಸ್ವಾಮಿ, ನಟರಾಜು, ತೊಟ್ಟವಾಡಿ ನಾಗಶೆಟ್ಟಿ, ಕೊತ್ತೇಗಾಲ ಮಹದೇವು, ಬೆಳ್ಳಿ, ಗ್ರಾಪಂ ಸದಸ್ಯ ರಾಜೇಂದ್ರ, ಮಾವಿನಹಳ್ಳಿ ಮಾದೇಶ್, ಮಣಿಕಂಠ, ವಾಟಾಳು ವೆಂಕಟರಾಮು, ಉಮಾಪತಿ ಮತ್ತಿತರರಿದ್ದರು.



ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷರು,
ಮೈಸೂರು ಸಂಘ ಸಂಸ್ಥೆಗಳ ಒಕ್ಕೂಟದ ಉಪಾಧ್ಯಕ್ಷರು
ಮೈಸೂರು ಛೇಬಂರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ನಿರ್ದೇಶಕರು
ದಿ ಕಾಸ್ಮೋಪಾಲಿಟನ್ ಕ್ಲಬ್ (ರಿ) ಮತ್ತು
ವಿಜಯನಗರ 1ನೇ ಹಂತ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಮಾಜಿ ಅಧ್ಯಕ್ಷರು
ಸಪ್ತಪದಿ ಅಸೋಸಿಯೇಟ್ಸ್ ನ ವ್ಯವಸ್ಥಾಪಕ ಪಾಲುದಾರರು, ಮತ್ತಿತರ ಸಂಘ ಸಂಸ್ಥೆಗಳಲ್ಲಿ
ಸತತ 30 ವರ್ಷಗಳಿಂದ ನಿರಂತರ ಹೋರಾಟದ ಮುಂಚೂಣಿಯಲ್ಲಿರುವ ನನ್ನ ಗೆಳೆಯರಾದ
ಶ್ರೀ ಸಿ.ನಾರಾಯಣಗೌಡ ರವರಿಗೆ
ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು
ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯು
ಆಯುರ್ ಆರೋಗ್ಯವನ್ನು ನೀಡಲೆಂದು ಪ್ರಾರ್ಥಿಸುತ್ತೇನೆ.
ದಿನಾಂಕ: 15–05–2024
ಶುಭಕೋರುವವರು:
ಸ್ವೀಟ್ ಮಹೇಶ್
ಅಂಬಾರಿ ಕನ್ವೆಂಷನ್ ಹಾಲ್
ಜೆ.ಪಿ.ನಗರ, ಮೈಸೂರು



ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷರು,
ಮೈಸೂರು ಸಂಘ ಸಂಸ್ಥೆಗಳ ಒಕ್ಕೂಟದ ಉಪಾಧ್ಯಕ್ಷರು
ಮೈಸೂರು ಛೇಬಂರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ನಿರ್ದೇಶಕರು
ದಿ ಕಾಸ್ಮೋಪಾಲಿಟನ್ ಕ್ಲಬ್ (ರಿ) ಮತ್ತು
ವಿಜಯನಗರ 1ನೇ ಹಂತ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಮಾಜಿ ಅಧ್ಯಕ್ಷರು
ಸಪ್ತಪದಿ ಅಸೋಸಿಯೇಟ್ಸ್ ನ ವ್ಯವಸ್ಥಾಪಕ ಪಾಲುದಾರರು,
ಸತತ 30 ವರ್ಷಗಳಿಂದ ನಿರಂತರ ಹೋರಾಟದ ಮುಂಚೂಣಿಯಲ್ಲಿರುವ ನಮ್ಮ ಆತ್ಮೀಯರಾದ
ಶ್ರೀ ಸಿ, ನಾರಾಯಣ ಗೌಡ ರವರಿಗೆ
ಜನುಮದಿನದ ಹಾರ್ದಿಕ ಶುಭಾಶಯಗಳು
ತಾಯಿ ಚಾಮುಂಡೇಶ್ವರಿ ದೇವಿಯು
ಆಯುರ್ ಆರೋಗ್ಯವನ್ನು
ನೀಡಲೆಂದು ಪ್ರಾರ್ಥಿಸುತ್ತೇವೆ.
ಪ್ರವೀಣ್ (ಓಂ ಶಕ್ತಿ)
ಓಂ ಶಕ್ತಿ ಟೂರ್ಸ್ & ಟ್ರಾವೆಲ್ಸ್
15-05-2024